ಭಾರತೀಯ ಜನತಾ ಪಕ್ಷ

ಉತ್ತಮ ಆಡಳಿತ ಅಭಿವೃದ್ಧಿ ರಕ್ಷಣೆ

# ಚುನಾವಣಾ ಪ್ರಣಾಳಿಕೆ

## ಲೋಕಸಭಾ ಚುನಾವಣೆ 2009

## ಸಮೃದ್ಧ ಹಾಗೂ ಶಕ್ತಿಯುತ ರಾಷ್ಟ್ರ ಸ್ಥಾಪನೆ ಭಾರತದ ಇತಿಹಾಸವನ್ನು ನೆನೆದು

ಪ್ರಪಂಚದ ನಾಗರಿಕತೆಗಳಲ್ಲಿ ಬಹುಶಃ ಭಾರತದ ನಾಗರಿಕತೆ ಅತ್ಯಂತ ಪುರಾತನವಾದದ್ದು. ಭಾರತ ಒಂದು ದೊಡ್ಡ ಇತಿಹಾಸ, ಶ್ರೀಮಂತಿಕೆ, ಜ್ಞಾನ ಸಂಪತ್ತು ಇರುವಂತಹ ದೇಶ ಎಂದು ಎಲ್ಲರಿಂದ ಗುರುತಿಸಲ್ಪಟ್ಟಿದೆ. ಆದರೆ ಶತಮಾನಗಳಿಂದ ಭಾರತದ ಮೇಲೆ ನಡೆದ ವಿದೇಶಿ ದಾಳಿಗಳಿಂದ ಭಾರತದ ಸಾಧನೆ ಕುಂಠಿತಗೊಂಡಿತು. ಬ್ರಿಟಿಷರ ದಬ್ಬಾಳಿಕೆಯಲ್ಲಿ ಅವರ ವಿದ್ಯಾಭ್ಯಾಸ ಪದ್ಧತಿಯಲ್ಲಿ ಅಭ್ಯಾಸ ಮಾಡಿದ್ದರಿಂದ ಭಾರತ ತನ್ನ ಶ್ರೀಮಂತ ಸಂಸ್ಕೃತಿ, ತಂತ್ರಜ್ಞಾನದ ಸಾಧನೆ ಮತ್ತು ನೈಸರ್ಗಿಕ ಸಂಪತ್ತನ್ನು ಕಳೆದುಕೊಂಡಿತು.

ಇತಿಹಾಸದಿಂದ ನಮ್ಮ ದೇಶ ತುಂಬಾ ಶ್ರೀಮಂತವಾಗಿತ್ತು ಎಂದು ತಿಳಿದು ಬರುತ್ತದೆ. ಈ ದೇಶ ನೈಸರ್ಗಿಕ ಫಲವತ್ತತೆ, ಸಮೃದ್ಧ ನೀರು ಮತ್ತು ವಿಫುಲ ಸೌರಶಕ್ತಿಯನ್ನು ಹೊಂದಿತ್ತು. ಇಲ್ಲಿಗೆ ಭೇಟಿ ನೀಡಿದ ವಿದೇಶಿಯರ ಪ್ರಕಾರ ಪ್ರಪಂಚದಲ್ಲೇ ಭಾರತದ ರೈತರು ಅತಿಶ್ರೇಷ್ಠರು. ಕ್ರಿ.ಪೂ. 4ನೇ ಶತಮಾನದಿಂದ ಹಿಡಿದು 19ನೇ ಶತಮಾನದ ಆದಿಯವರೆಗೆ ಇಲ್ಲಿನ ಕೃಷಿಯ ಸಮೃದ್ಧತೆ ಬಗ್ಗೆ ಬಹಳಷ್ಟು ಚರ್ಚೆ ಇಡೀ ಪ್ರಪಂಚದಲ್ಲಿ ನಡೆದಿರುವ ಬಗ್ಗೆ ಸಾಕಷ್ಟು ಮಾಹಿತಿ ಸಿಗುತ್ತದೆ. ಒಂದು ಹೆಕ್ಟೇರಿಗೆ ಅಂದಾಜು 15 ರಿಂದ 20 ಟನ್‌ನಷ್ಟು ಅಕ್ಕಿಯನ್ನು ಬೆಳೆಯುತ್ತಿದ್ದ ಬಗ್ಗೆ ತಂಜಾವೂರು (ಕ್ರಿ.ಶ. 900–1200) ಶಾಸನ ಮತ್ತು ರಾಮನಾಥಪುರಂ (ಕ್ರಿ.ಶ. 1325) ಶಾಸವನದಿಂದ ತಿಳಿಯುತ್ತದೆ. ಆದರೆ ಈಗ ಮೊದಲ ಹಸಿರು ಕ್ರಾಂತಿಯ ನಂತರ, ಸರ್ಕಾರದ ಅಂಕಿ–ಅಂಶಗಳ ಪ್ರಕಾರ ಲೂಧೀಯಾನಾದಲ್ಲಿ ಒಂದು ಹೆಕ್ಟೇರ್‌ಗೆ 5.5 ಟನ್ ಅಕ್ಕಿ ಬೆಳೆದಿದ್ದಾರೆ. ಇದರಿಂದ ತಿಳಿಯುವುದೇನೆಂದರೆ ಭಾರತ ತನ್ನ ಮೊದಲಿನ ಜ್ಞಾನ ಸಂಪತ್ತಿನಿಂದ ಕೃಷಿಯ ತಾಂತ್ರಿಕತೆ, ಕೌಶಲ್ಯವನ್ನು ಮರಳಿ ಪಡೆದು ಆಹಾರ ಸಂಪತ್ತನ್ನು ಹೆಚ್ಚಿಸಿಕೊಂಡಿದೆ.

ಭಾರತದ ಕೃಷಿಯಂತೆ ಅದರ ಆರ್ಥಿಕತೆಯ ಸುಧಾರಿಸುತ್ತದೆ. ವಿದೇಶಿಯರಾದ ಮೆಗಾಸ್ತನೀಸ್‌ನಿಂದ ಹಿಡಿದು ಫಹಿಯಾನ್ ಮತ್ತು ಹು.ಎನ್.ತ್ಸಾಂಗ್‌ವರೆಗೆ ಭಾರತದ ಆರ್ಥಿಕ ಏಳಿಗೆಯನ್ನು ಹೊಗಳಿದ್ದಾರೆ. ಬಿಹಾರದ 1780 ಹಳ್ಳಿಗಳು ಸ್ವಚ್ಛತೆ ಹಾಗೂ ಆತಿಥ್ಯಕ್ಕೆ ಉದಾಹರಣೆಯಾಗಿತ್ತು. ಜನರು ಬೀದಿಗಳನ್ನು ಗುಡಿಸಿ, ನೀರು ಹಾಕಿ ಅತಿಥಿಗಳನ್ನು ಸತ್ಕರಿಸುವುದರಲ್ಲಿ ಎತ್ತಿದ ಕೈಯಾಗಿದ್ದರು. 18 ಮತ್ತು 19ನೇ ಶತಮಾನದ ಆದಿಯಲ್ಲಿ ಭಾರತ ಬ್ರಿಟಿಷರಿಗಿಂತ ತಾಂತ್ರಿಕತೆಯಲ್ಲಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮುಂದಿತ್ತು. ಇಲ್ಲಿನ ಕೃಷಿ ಉತ್ಪನ್ನಗಳು ಉತ್ತಮ ಗುಣಮಟ್ಟದ್ದಾಗಿದ್ದು, ಉತ್ತಮ ಶ್ರೇಣಿಯ ಕಬ್ಬಿಣ ಮತ್ತು ಉಕ್ಕನ್ನು ಉತ್ಪಾದಿಸುತ್ತಿದ್ದರು. ದಿಲ್ಲಿಯ ಮೆಹುರಾಲಿಯಲ್ಲಿರುವ ಕಬ್ಬಿಣದ ಕಂಬ 1500 ವರ್ಷಗಳಷ್ಟು ಹಳೆಯದಾದರೂ ಇನ್ನೂ ತುಕ್ಕು ಹಿಡಿಯದಿರುವುದೇ ಇದಕ್ಕೆ ಸಾಕ್ಷಿ. ಪ್ರಪಂಚದ ಖ್ಯಾತ ಲೋಹ ಶಾಸ್ತ್ರಜ್ಞರು ಇದರ ಶ್ರೇಷ್ಠ ಗುಣಮಟ್ಟವನ್ನು ಕಂಡು ಆಶ್ಚರ್ಯಗೊಂಡಿದ್ದಾರೆ. ಬ್ರಿಟೀಷರ ಆಳ್ವಿಕೆಗೂ ಮುನ್ನ 18ನೇ ಶತಮಾನದವರೆಗೆ ಭಾರತ ಜವಳಿ ಉದ್ಯಮದಲ್ಲಿ ಮೊದಲ ಸ್ಥಾನದಲ್ಲಿತ್ತು. ಚೈನಾ ಎರಡನೇಯ ಸ್ಥಾನದಲ್ಲಿತ್ತು.

ಖಗೋಳ ಶಾಸ್ತ್ರ, ಗಣಿತ, ರಸಾಯನ, ಭೌತ ಹಾಗೂ ಜೈವಿಕ ವಿಜ್ಞಾನ ಕ್ಷೇತ್ರದಲ್ಲಿ ಭಾರತ ಏಳಿಗೆ ಪ್ರಪಂಚದಾದ್ಯಂತ ಪ್ರಶಂಸಿಸಲ್ಪಟ್ಟಿದೆ. ವೈದ್ಯಕೀಯ ಕ್ಷೇತ್ರದಲ್ಲಿನ ಸಾಧನೆಯು ಅಪಾರ. ಆರೋಗ್ಯ ರಕ್ಷಣೆಗೆ ಆಯುರ್ವೇದ ಮತ್ತು ಯೋಗ ಪ್ರಪಂಚಕ್ಕೆ ಭಾರತದ ಉತ್ತಮ ಕೊಡುಗೆ. ಭಾರತ ಬಹು ಹಿಂದೆಯೇ ಹೊಂದಿದ್ದ ಪ್ಲಾಸ್ಟಿಕ್ ಸರ್ಜರಿಯ ಅರಿವು ಇಂದಿನ ಪ್ಲಾಸ್ಟಿಕ್ ಸರ್ಜರಿಗೆ ಮಾದರಿ. ಡಾ. ಎಡ್ವರ್ಡ್ ಜೆನ್ನರ್, ಸಿಡುಬಿಗೆ ಲಸಿಕೆ ಕಂಡು ಹಿಡಿಯುವುದಕ್ಕೆ ಶತಮಾನಗಳಷ್ಟು ಹಿಂದೆಯೇ ಭಾರತದಲ್ಲಿ ಈ ಪದ್ಧತಿ ಜಾರಿಯಲ್ಲಿತ್ತು.

ಕ್ರಿ.ಶ. 400ರಲ್ಲಿ ಮಗಧಕ್ಕೆ ಭೇಟಿ ನೀಡಿದ ಫ–ಹಿಯನ್ ಇಲ್ಲಿ ವ್ಯವಸ್ಥಿತ ವೈದ್ಯಕೀಯ ಪದ್ಧತಿ ಜಾರಿಯಲ್ಲಿದ್ದುದನ್ನು ದಾಖಲಿಸಿದ್ದಾನೆ. ಆತನ ಪ್ರಕಾರ ಪ್ರತಿಯೊಂದು ನಗರಗಳಲ್ಲೂ ಅಲ್ಲಿನ ಶ್ರೀಮಂತರು ಒಳ್ಳೆಯ ಆಸ್ಪತ್ರೆಗಳನ್ನು ಕಟ್ಟಿಸಿ ಅಲ್ಲಿ ಯಾವುದೇ ಬೇಧ ಭಾವವಿಲ್ಲದೆ ಎಲ್ಲರಿಗೂ ಸೂಕ್ತ ಚಿಕಿತ್ಸೆ ದೊರೆಯುವಂತೆ ವ್ಯವಸ್ಥೆ ಮಾಡಿದ್ದರು. ನುರಿತ ವೈದ್ಯರು ಪ್ರತಿಯೊಬ್ಬರನ್ನೂ ಕೂಲಂಕಷವಾಗಿ ಪರೀಕ್ಷಿಸಿ ಅವರ ಖಾಯಿಲೆಗೆ ತಕ್ಕ ಔಷಧ, ಆಹಾರಗಳನ್ನು ಕೊಟ್ಟು ಅವರನ್ನು ನೋಡಿಕೊಳ್ಳುತ್ತಿದ್ದರು. ರೋಗಿಗಳು ಪೂರ್ತಿ ಗುಣ ಹೊಂದಿದ ನಂತರ ಅವರನ್ನು ಮನೆಗೆ ಕಳಿಸಲಾಗುತ್ತಿತ್ತು.

18ನೇ ಶತಮಾನದ ಅಂತ್ಯದ ವೇಳೆಗೆ ಸಂಶಯಕ್ಕೆ ಆಸ್ಪದವಿಲ್ಲದಂತೆ ದೃಢಪಟ್ಟಿದ್ದೇನೆಂದರೆ ಅಂದಿನ ಕಾಲಕ್ಕೆ ಭಾರತದ ಶಿಕ್ಷಣ ಪದ್ಧತಿ, ಇಂಗ್ಲೆಂಡಿನ ಶಿಕ್ಷಣ ಪದ್ಧತಿಗಿಂತ ಮೇಲ್ಮಟ್ಟದ್ದಾಗಿತ್ತು. ಸಂಖ್ಯಾವಾರು ಶಾಲೆ, ಕಾಲೇಜುಗಳು, ವಿದ್ಯಾರ್ಥಿಗಳು, ಅಧ್ಯಾಪಕರು ಆರ್ಥಿಕ ಸ್ಥಿತಿ ಇದನ್ನೆಲ್ಲಾ ತುಲನೆ ಮಾಡಿದಾಗ ಖಂಡಿತವಾಗಿಯೂ ಭಾರತದ ಶಿಕ್ಷಣ ಮಟ್ಟ ಮೇಲುಸ್ತರದ್ದಾಗಿತ್ತು. ಆಗ ಮೇಲು, ಕೀಳು, ಜಾತಿ, ಹೆಣ್ಣು ಗಂಡು ಎಂಬ ಯಾವುದೇ ತಾರತಮ್ಯವಿಲ್ಲದೇ ಎಲ್ಲರೂ ಶಾಲಾ ಕಾಲೇಜುಗಳಿಗೆ ಹಾಜರಾಗುತ್ತಿದ್ದರು. ಮಹಾತ್ಮಾ ಗಾಂಧಿಯವರು ಹೇಳುತ್ತಿದ್ದಂತೆ ವಿದ್ಯಾವಂತರ ಸಂಖ್ಯೆ 1931ಕ್ಕಿಂತ 1870ರಲ್ಲಿ ಹೆಚ್ಚಿತು. ಹಡಗು ನಿರ್ಮಾಣ, ಕಾಗದ ಉತ್ಪಾದನೆ, ಬಣ್ಣಗಳ ಉಪಯೋಗದಲ್ಲೂ ಭಾರತ ನಿಪುಣವಾಗಿತ್ತು.

ಕ್ರಿ.ಶ. 1600ರಲ್ಲಿ ಪ್ರಪಂಚದ ಒಟ್ಟು ಉತ್ಪನ್ನದಲ್ಲಿ ಭಾರತ ಶೇ. 22.5ರಷ್ಟು ಪಾಲು ಹೊಂದಿತ್ತು. ಆದರೆ ಬ್ರಿಟಿಷರ ದಾಳಿಯ ನಂತರ, ಆದರೆ 1870ರಲ್ಲಿ ಇದು ಶೇ. 12.25ಕ್ಕೆ ಇಳಿಯಿತು. ಬ್ರಿಟಿಷರ ಪಾಲು ಶೇ. 1.8ರಿಂದ ಶೇ. 9.1ಕ್ಕೆ ಏರಿತ್ತು. ಬ್ರಿಟಿಷರು ಭಾರತ ಬಿಟ್ಟು ಹೊರಟಾಗ ಭಾರತದ ಆರ್ಥಿಕತೆ ಸಂಪೂರ್ಣ ಕುಸಿದಿತ್ತು. ವಿಶ್ವ ಉತ್ಪಾದನೆ, ವ್ಯಾಪಾರದಲ್ಲೂ ಭಾರತದ ಪಾಲು ಕಡಿಮೆಯಾಯಿತು. ಸ್ವಾತಂತ್ರ ಬಂದು 62 ವರ್ಷ ಕಳೆದರೂ ಪ್ರಪಂಚದ ಮಾರುಕಟ್ಟೆಯಲ್ಲಿ ಭಾರತದ ಪಾಲು ಶೇ. 1ಕ್ಕಿಂತಲೂ ಕಡಿಮೆ.

ಫೆ.2, 1835ರಂದು ಬ್ರಿಟಿಷ್ ಸಂಸತ್ತಿನಲ್ಲಿ ಥಾಮಸ್ ಬ್ಯಾಂಬಿಗ್‌ಟನ್ ಮ್ಯಾಕುಲೆಯ ಭಾಷಣದಿಂದ ಭಾರತದ ಏಳಿಗೆ, ಸಂಪತ್ತು, ಜ್ಞಾನ, ಸಂಸ್ಕೃತಿ ಎಷ್ಟು ಉನ್ನತವಾದುದ್ದು ಎಂದು ತಿಳಿಯಬಹುದು. ಆತ ತನ್ನ ಭಾಷಣದಲ್ಲಿ ಹೇಳಿದ್ದು ಏನೆಂದರೆ, ನಾನು ಭಾರತದ ಉದ್ದಗಲವನ್ನೂ ಸಂಚರಿಸಿದ್ದೇನೆ. ಅಲ್ಲಿ ಒಬ್ಬ ಭಿಕ್ಷುಕನಾಗಲಿ, ಕಳ್ಳನಾಗಲೀ ಕಂಡಿಲ್ಲ, ಇದು ಸಂಪದ್ಭರಿತವಾದ, ಉನ್ನತ ಸಂಸ್ಕೃತಿಯುಳ್ಳ ವಿದ್ಯಾವಂತರಿಂದ ತುಂಬಿದ ನಾಡು.ಈ ದೇಶವನ್ನು ವಶಪಡಿಸಿಕೊಳ್ಳಬೇಕಾದರೆ ನಾವು ಈ ದೇಶದ ಬೆನ್ನೆಲುಬಾದ ಆಧ್ಯಾತ್ಮಿಕ, ಸಾಂಸ್ಕೃತಿಕ, ನೈತಿಕ ಶಕ್ತಿಯನ್ನು ಮುರಿಯಬೇಕು. ಆದ್ದರಿಂದ ನಾನು

ಹೇಳುವುದೇನೆಂದರೆ ಯಾವಾಗ ಭಾರತೀಯರು ತಮ್ಮ ಶಿಕ್ಷಣ ಪದ್ಧತಿ, ಸಂಸ್ಕೃತಿಗಿಂತ ಇಂಗ್ಲಿಷ್ ಶಿಕ್ಷಣವೇ ಮೇಲು ಎಂದು ತಿಳಿಯುವಂತೆ ಮಾಡುತ್ತೀರೋ ಆಗ ನಾವು ಆ ದೇಶವನ್ನು ವಶಪಡಿಸಿಕೊಳ್ಳಬಹುದು. ಆತ ಹೇಳಿದ ಈ ಯೋಜನೆಯನ್ನು ಅಳವಡಿಸಿ ಬ್ರಿಟಿಷರು ಭಾರತವನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಅವರ ಶಿಕ್ಷಣ ಪದ್ಧತಿಯಿಂದ ಭಾರತೀಯರು ತಮ್ಮ ಉನ್ನತ ಸಂಸ್ಕೃತಿಯನ್ನು ಮರೆಯುವಂತಾಯಿತು.

ಯಾವುದೇ ದೇಶ ತನ್ನ ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ನೀತಿಯನ್ನು ರೂಪಿಸಬೇಕಾದರೆ ತನ್ನ ದೇಶದ ಇತಿಹಾಸ, ಅದರ ಶಕ್ತಿ ಮತ್ತು ನ್ಯೂನತೆಯನ್ನು ಅರಿತಿರಬೇಕು. ಇಂದಿನ ಜಾಗತೀಕರಣ ಯುಗದಲ್ಲಿ ದೇಶ ತನ್ನ ಜನರ ಶಕ್ತಿ ಮೂಲವನ್ನು ಚೆನ್ನಾಗಿ ಅರಿತುಕೊಳ್ಳಬೇಕಾಗುತ್ತದೆ. ಬಾಲಗಂಗಾಧರ ತಿಲಕ್, ಗೋಪಾಲಕೃಷ್ಣ ಗೋಖಲೆ, ಅರಬಿಂದೋ, ಮಹಾತ್ಮಾ ಗಾಂಧಿ ಮುಂತಾದ ನಾಯಕರು ನಮ್ಮ ದೇಶದ ಶಕ್ತಿ ಮೂಲವನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ಸ್ವಾತಂತ್ರ್ಯ ಸಂಗ್ರಾಮವನ್ನು ರೂಪಿಸಿದರು. ಭಾರತೀಯರ ಯೋಜನೆ ಮತ್ತು ಕರ್ತವ್ಯವೇ ಅವರ ರಾಜಕೀಯ ನಡೆಯಾಗಿತ್ತು. ಈ ನಾಯಕರ ದೂರದರ್ಶಿತ್ವವೇ ನಮ್ಮ ದೇಶಕ್ಕೆ ಸ್ವತಂತ್ರ ತರುವಲ್ಲಿ ಯಶಸ್ವಿಯಾಯಿತು. ಆದರೆ ಸ್ವಾತಂತ್ರ್ಯದ ನಂತರ ಬಂದ ನಾಯಕರಲ್ಲಿ ಈ ದೂರದರ್ಶಿತ್ವ ಕಂಡು ಬರಲಿಲ್ಲ. ಅವರು ಬ್ರಿಟಿಷರು ರೂಪಿಸಿದ್ದ ನೀತಿಯನ್ನೇ ಅಳವಡಿಸಿಕೊಂಡಿದ್ದರಿಂದ ನಮ್ಮ ದೇಶದ ಮೇಲೆ ನಿರಂತರ ವಿದೇಶಿ ದಾಳಿ ಮುಂದುವರೆದಿದೆ.

ಆರು ದಶಕಗಳ ನಮ್ಮ ಸ್ವಾತಂತ್ರ ಭಾರತದ ಆಡಳಿತ, ಮಧ್ಯದಲ್ಲಿ ಸ್ವಲ್ಪ ಕಾಲ ಬಿಟ್ಟರೆ, ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳಲ್ಲೇ ಕೈಯಲ್ಲೇ ಇದೆ. ವಿಪರ್ಯಾಸವೆಂದರೆ ಅವರು ನಮ್ಮ ಉನ್ನತ ಸಂಸ್ಕೃತಿ ಮತ್ತು ಶಕ್ತಿ ಮೂಲವನ್ನು ಕ್ರೂಢೀಕರಿಸಲು ಪ್ರಯತ್ನಿಸುತ್ತಲೇ ಇಲ್ಲ. ಅದರ ಬದಲು ಪಶ್ಚಿಮ ದೇಶಗಳ ಅನುಕರಣೆಯನ್ನೇ ಮಾಡುತ್ತಿದ್ದಾರೆ. ಇದರ ಪರಿಣಾಮ ನಮ್ಮ ಮುಂದಿದೆ.

ಸ್ವಾತಂತ್ರ್ಯ ನಂತರ ನಮ್ಮ ಸಂಸ್ಕೃತಿಗನುಗುಣವಾಗಿ ನಮ್ಮ ನೀತಿ ನಿಯಮಗಳನ್ನು ಜಾರಿಗೆ ತರಬೇಕಾದುದ್ದು ಆದ್ಯ ಕರ್ತವ್ಯವಾಗಿತ್ತು. ಹಾಗೆ ಮಾಡದ್ದರಿಂದ ಅಸಮಾನ ಸಮಾಜ, ಆರ್ಥಿಕ ತಾರತಮ್ಯ, ಭಯೋತ್ಪಾದನೆ, ಕೋಮುಗಲಭೆ, ಅನಿಶ್ಚಿತತೆಯನ್ನು ಸರ್ಕಾರ ನಿಭಾಯಿಸಲು ಅಸಮರ್ಥವಾಗಿವೆ. ಈಗ ಅಗತ್ಯವಾಗಿರುವುದೇನೆಂದರೆ ಭಾರತೀಯರಲ್ಲಿ ಸಾಮರಸ್ಯವನ್ನು ಮೂಡಿಸುವುದು ಮತ್ತು ಅವರ ಸಾಮಾಜಿಕ, ಆರ್ಥಿಕ, ರಾಜಕೀಯ ಅಭಿವ್ಯಕ್ತಿ ಮತ್ತು ಸಾಂಸ್ಕೃತಿಕ, ಧರ್ಮ, ನೀತಿ ಶಾಸ್ತ್ರಗಳ ನಿಲುವುಗಳನ್ನು ಎತ್ತಿಹಿಡಿಯುವುದು.

ಹಲವು ಬಾರಿ ಸಮಸ್ಯೆಗಳ ವಸ್ತುಸ್ಥಿತಿಗಳನ್ನು ಸುಧಾರಿಸುವ ಅವುಗಳ ತೀವ್ರತೆಯನ್ನು ಕಡಿಮೆ ಮಾಡುವ ಉಪಶಮನಕಾರಿ ಕ್ರಮಗಳನ್ನು ಅನುಸರಿಸಲಾಯಿತು. ಆದರೆ ಅವು ಫಲಕಾರಿಯಾಗಲಿಲ್ಲ. ಭಾರತ ದೃಷ್ಟಿಕೋನ ಗ್ರಹಿಸುವ, ಜೊತೆಗೆ ಭಾರತೀಯರ ಅಗತ್ಯ ಮತ್ತು ಆದ್ಯತೆಗಳನ್ನು ಗುರುತಿಸುವ, ಸಾಮಾಜಿಕ, ಆರ್ಥಿಕತೆಯ ಬಗೆಗಿನ ನಾನಾ ದೃಷ್ಟಿಗಳನ್ನು, ರಾಜಕೀಯ, ಸಾಂಸ್ಕೃತಿಕ, ಪಾರಂಪರಿಕ ಅಭಿರುಚಿಯನ್ನು ಹಾಗೂ ನೈತಿಕ ಪ್ರಜ್ಞಾವಂತಿಕೆಯನ್ನು ಎತ್ತಿಹಿಡಿದು ಭ್ರಷ್ಟಾಚಾರ ನಿಯಂತ್ರಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

ಭಾರತದ ನಾಗರಿಕ ಪ್ರಜ್ಞೆ, ಸಾಮಾಜಿಕ ಪ್ರಜ್ಞೆಯನ್ನು ನಮ್ಮ ಋಷಿ ಮುನಿಗಳು ಹಾಗೂ ತತ್ವಜ್ಞಾನಿಗಳು ಅತ್ಯಂತ ಸಮರ್ಥವಾಗಿ ವಿಶ್ಲೇಷಿಸಿದ್ದಾರೆ. ಅವರ ಮೂಲ ಇರುವುದು ವಿಶ್ವ ಹಿಂದುತ್ವ

ಅಥವಾ ಭಾರತೀಯ ದೃಷ್ಟಿಯ ಬೇರುಗಳಲ್ಲಿ. ಈ ವಿಶ್ವಹಿಂದುತ್ವ ದೃಷ್ಟಿಕೋನ ಅತ್ಯಂತ ಪವಿತ್ರವಾದದ್ದು ಹಾಗೂ ಆಧ್ಯಾತ್ಮಿಕವಾದದ್ದು. ಇದು ಸೃಷ್ಟಿ ಕ್ರಿಯೆಯಲ್ಲಿ ಅಂತರ್ಗತವಾದ ಎಲ್ಲಾ ವೈವಿಧ್ಯತೆಗಳನ್ನು ಒಪ್ಪಿಕೊಳ್ಳುತ್ತದೆ. ಕೇವಲ ಒಪ್ಪಿಕೊಳ್ಳುವುದು ಮಾತ್ರವಲ್ಲ, ಅದನ್ನು ಅಳವಡಿಸಿಕೊಳ್ಳುತ್ತದೆ. . ಗೌರವಿಸುತ್ತದೆ. ಭಾರತೀಯ ಜೀವನ ವಿಧಾನ ವೈವಿಧ್ಯತೆಯನ್ನು ಏಕತೆಯನ್ನು ಒಪ್ಪಿಕೊಳ್ಳುತ್ತದೆ. ಭಾರತೀಯ ಜೀವನ ವಿಧಾನ ಅತ್ಯಂತ ಹೆಚ್ಚು ಒಳನೋಟವಿರುವ ಹಾಗೂ ಆಧ್ಯಾತ್ಮಿಕ ಅಸ್ತಿತ್ವ ಹೊಂದಿರುವಂತಹುದು. ಭಾರತೀಯ ಚಿಂತನೆ ರಾಷ್ಟ್ರೀಯ ಭೌಗೋಳಿಕ ಎಲ್ಲೆ ಮೀರಿ ವಿಸ್ತರಿಸಿರುವಂತಹುದು. ಇದನ್ನೇ ವೇದ ಕಾಲದ ಋಷಿಗಳು ತಮ್ಮ ಕೃತಿಗಳಲ್ಲಿ 'ವಸುದೈವ ಕುಟುಂಬಕಂ' ಎಂದು ಹೇಳಿದ್ದಾರೆ. ವಿಶ್ವ ಕುಟುಂಬದ ಕಲ್ಪನೆ ನೀಡಿದ್ದಾರೆ. ವಿಶ್ವವೇ ನಮ್ಮ ಕುಟುಂಬ ಎಂದಿದ್ದಾರೆ. ಈ ಭಾರತೀಯ ವಿಶಾಲ ದೃಷ್ಟಿಕೋನವು ಎಲ್ಲೇ ಮೀರಿ ಬಾಮಿಯಾ/ಕಂದಹಾರ್‌ದಿಂದ ಬೋರ್‌ಬಂದರ್/ ಇಂಡೋನೇಷಿಯಾವರೆಗೆ ಹಾಗೂ ಶ್ರೀಲಂಕಾದಿಂದ ಜಪಾನ್ ದೇಶದವರೆಗೆ ಹರಡಿದೆ. ಭಾರತೀಯ ಸಂಸ್ಕೃತಿಯ ಕುರುಹುಗಳನ್ನು ನಾವು ವಿಶ್ವದ ಇತರ ಅನೇಕ ದೇಶಗಳಲ್ಲೂ ನೋಡಬಹುದು. ಪುರಾಣ ಕಾಲದಲ್ಲಿ ಭಾರತ ಭೌಗೋಳಿಕವಾಗಿ ದ್ವೀಪದಂತಿದ್ದರೂ ಅದರ ಶ್ರೀಮಂತ ಸಾಂಸ್ಕೃತಿಕ ಸಂಬಂಧಗಳ, ವಾಣಿಜ್ಯ ವ್ಯವಹಾರಗಳು ವಿಶ್ವವಿಖ್ಯಾತಿಯಾಗಿದ್ದವು.

ಮನುಕುಲದ ಐಕ್ಯತೆಯ ಬಗ್ಗೆ ನಂಬಿಕೆಯೇ ಹಿಂದೂ ವೈಚಾರಿಕತೆಯ ವೈಶಿಷ್ಟ್ಯ. ವೇದ ಕಾಲಿನ ಋಷಿಗಳು 'ಏಕಂ ಸದಾ ವಿಪ್ರ ಬಹುದಾ–ವದಂತಿ' (ಸತ್ಯ ಅಥವಾ ವಾಸ್ತವ ಒಂದೇ. ಆದರೆ ಬುದ್ಧಿವಂತರು ಅದನ್ನು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ.) ಎಂದು ಹೇಳಿದ್ದು ಇದನ್ನೇ. ಇದು ಅಪ್ಪಟ ಜಾತ್ಯಾತೀತೆಯ ದೃಷ್ಟಿಕೋನ. ಏಕೆಂದರೆ ಈ ಸಿದ್ಧಾಂತ ಮನುಷ್ಯ ತನ್ನ ಗುರಿ ಮುಟ್ಟಲು ತನ್ನದೇ ಆದ ಮಾರ್ಗ ಅನುಸರಿಸಲು ಮುಕ್ತ ಅವಕಾಶ ನೀಡುತ್ತದೆ. ಹಿಂದೂಗಳು ಧರ್ಮ ಸಹಿಷ್ಣುತೆಗೆ ಹೆಸರಾದವರು. ಈ ಕಾರಣದಿಂದಾಗಿಯೇ ವಿಶ್ವದ ನಾನಾ ಭಾಗಗಳಲ್ಲಿ ಅಸ್ತಿತ್ವದಲ್ಲಿರುವ, ಆಚರಿಸಲ್ಪಡುತ್ತಿರುವ ನಾನಾ ಧರ್ಮಗಳು ಭಾರತದಲ್ಲಿ ಅತ್ಯಂತ ಶಾಂತಿಯುತ ವಾತಾವರಣದಲ್ಲಿ ಆಚರಣೆಯಲ್ಲಿದೆ. ಈ ಧರ್ಮ ಸಹಿಷ್ಣುತೆ ಹಾಗೆಯೇ ಮುಂದುವರೆಯುತ್ತಿದೆ.

ಆದರೆ ಸ್ವಾತಂತ್ರ್ಯ ಬಂದು ಆರು ದಶಕಗಳೇ ಉರುಳಿದರೂ ಭಾರತ ತನ್ನ ಸ್ವಭಾವ ಸಿದ್ಧವಾದ ಸಹಜ ಚೈತನ್ಯವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ. ಯಾವ ದಿಕ್ಕಿನಲ್ಲಿ ಕಾರ್ಯೋನ್ಮುಖವಾಗಬೇಕೋ ಅದಾಗುತ್ತಿಲ್ಲ. ಈ ಕೊರತೆ ರಾಷ್ಟ್ರೀಯ ಜೀವನದ ಎಲ್ಲ ಆಯಾಮಗಳನ್ನು ಆಕ್ರಮಿಸಿದೆ. ಈ ಪರಿಸ್ಥಿತಿ ಒಂದು ಹೊಸ ಬದಲಾವಣೆಯ, ಹೊಸ ಮಾದರಿಯ ಅನ್ವೇಷಣೆಯ ಅಗತ್ಯವನ್ನು ಪ್ರತಿಪಾದಿಸುತ್ತಿದೆ. ಅಂತಾರಾಷ್ಟ್ರೀಯ ರಂಗದಲ್ಲಿ ಭಾರತದ ಧ್ವನಿ ಕೇಳಬೇಕೆಂದರೆ ಭಾರತ ಸಮೃದ್ಧಿ, ಪ್ರಗತಿ ಹಾಗೂ ಶಕ್ತಿಶಾಲಿಯಾಗಬೇಕಾಗಿರುವುದು ಇಂದಿನ ಅಗತ್ಯ.

ಭಾರತೀಯರು ಅತ್ಯಂತ ಗಂಭೀರವಾಗಿ ಇದನ್ನು ಪರಿಗಣಿಸಿದಲ್ಲಿ ಗುರಿ ಮುಟ್ಟಲು ಸಾಧ್ಯವಿದೆ. ನಮ್ಮಲ್ಲಿ ಅಗಾಧವಾದ ಮಾನವ ಸಂಪನ್ಮೂಲ ಹಾಗೂ ನೈಸರ್ಗಿಕ ಸಂಪನ್ಮೂಲ ಲಭ್ಯವಿದೆ. ಭಾರತದ ಯುವಜನತೆ ಬದುಕಿನ ನಾನಾ ರಂಗಗಳಲ್ಲಿ ತಮ್ಮ ಸಾಮರ್ಥ್ಯ ಪ್ರದರ್ಶಿಸಿದ್ದಾರೆ. ಶಕ್ತಿ ನಿರೂಪಿಸಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನ, ಬಾಹ್ಯಾಕಾಶ ತಂತ್ರಜ್ಞಾನ, ಅಣುಶಕ್ತಿ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದ ಸೌಲಭ್ಯಗಳು ನಮ್ಮಲ್ಲಿ ಲಭ್ಯವಿಲ್ಲದೇ ಹೋದರೂ ತಮ್ಮ ಸಾಮರ್ಥ್ಯ ತೋರಿಸಿದ್ದಾರೆ. ಅವರ ಸಾಧನೆ ಗಮನಾರ್ಹ. ಕೈಗಾರಿಕೆ, ವಾಣಿಜ್ಯ ವ್ಯವಹಾರ, ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಅವರು

ಅತ್ಯಂತ ಸವಾಲೊಡ್ಡುವ ಕಷ್ಟ ಸಾಧ್ಯ ಗುರಿಗಳನ್ನು ಸಮರ್ಥ ರೀತಿಯಲ್ಲಿ ನಿಭಾಯಿಸಿದ್ದಾರೆ. ಇಂತಹ ಅತ್ಯಂತ ಶಕ್ತಿಯುತ, ಕ್ರಿಯಾಶೀಲವಾದ ಯುವಶಕ್ತಿ ಮತ್ತು ನೈಸರ್ಗಿಕ ಸಂಪನ್ಮೂಲದ ಸಮರ್ಥ ಬಳಕೆಯಿಂದ ಭಾರತ ಪವಾಡ ಸದೃಶ ಸಾಧ್ಯತೆ ಮೆರೆಯಬಲ್ಲದು. ಸ್ವಸಾಮರ್ಥ್ಯ ಮತ್ತು ಹೆಮ್ಮೆಯ ಭಾರತ ನಿರ್ಮಿಸಬಹುದು. ನಾವು ನಮ್ಮ ಯುವ ಜನಾಂಗಕ್ಕೆ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ, ನೀತಿ ನಿರೂಪಣೆಯ ಪ್ರಕ್ರಿಯೆಯಲ್ಲಿ ಅತ್ಯಂತ ಗುರುತರವಾದ ಜವಾಬ್ದಾರಿ ನೀಡಬೇಕಾಗಿದೆ.ಅವರೇ ಭಾರತದ ಭವಿಷ್ಯದ ಹಾಗೂ ಸಮೃದ್ಧತೆಯ ಆಧಾರಸ್ತಂಭಗಳು.

ಭಾರತ ತನ್ನ ಅಭಿವೃದ್ಧಿಗಾಗಿ ಯಾವುದೇ ಒಂದು ಮಾದರಿಯನ್ನು ಕಣ್ಣು ಮುಚ್ಚಿ ಅನುಸರಿಸಬೇಕಾಗಿಲ್ಲ. ಅದು ತನ್ನ ಸಂಪನ್ಮೂಲ ಹಾಗೂ ಮೇಧಾವಿತನದ ಮೂಲಕ ಒಂದು ಹೊಸ ಮಾದರಿಯನ್ನೇ ಸೃಷ್ಟಿಸಬೇಕಾಗಿದೆ. ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರು ಹೇಳಿರುವ ಮಾನವೀಯ ಅಂತಃಕರಣದ ಸಾಮರ್ಥ್ಯ ಅವಲಂಬಿಸಬೇಕು. ಅದು ಸ್ವಅನ್ವೇಷಕವಾಗಬೇಕು. ಸ್ವಸಾಮರ್ಥ್ಯದಿಂದ ಜಾಗತಿಕ ನಾಯಕತ್ವದ ಏಣಿ ಹತ್ತಬೇಕು. ಪ್ರಸ್ತುತ ಪದ್ಧತಿಯಲ್ಲಿ ಇಡೀ ವಿಶ್ವ ಜಾಗತಿಕ ಆರ್ಥಿಕ ಹಿಂಜರಿತ ಹಾಗೂ ಭಯೋತ್ಪಾದನೆಯ ವಿಪತ್ತಿನಿಂದ ತತ್ತರಿಸುತ್ತಿದೆ. ಇದಕ್ಕೆ ಪರಿಹಾರ ಕಂಡುಕೊಳ್ಳಬೇಕಾಗಿರುವುದು ಪ್ರಸ್ತುತದ ಅಗತ್ಯ. ಈ ಅತ್ಯಂತ ಸಂಕೀರ್ಣ, ಸಂಕ್ರಮಣ ಕಾಲದಲ್ಲಿ ಭಾರತ ಅತ್ಯಂತ ಜವಾಬ್ದಾರಿಯುತವಾದ, ಐತಿಹಾಸಿಕ ಮಹತ್ವದ ಪಾತ್ರ ವಹಿಸಬೇಕಾಗಿದೆ. ಬಿಜೆಪಿ ಇದಕ್ಕಾಗಿ ಆಧುನಿಕವಾದ, ಸಶಕ್ತವಾದ, ಸಮೃದ್ಧವಾದ, ಪ್ರಗತಿಪರವಾದ ಸುಭದ್ರ ಭಾರತದ ನಿರ್ಮಾಣಕ್ಕೆ ಬದ್ಧವಾಗಿದೆ.

–ಡಾ.ಮುರಳಿ ಮನೋಹರ್ ಜೋಷಿ

ಅಧ್ಯಕ್ಷರು

ಚುನಾವಣಾ ಪ್ರಣಾಳಿಕೆ ಸಮಿತಿ

ಏಪ್ರಿಲ್ 3, 2009

ಸದೃಢ ಮತ್ತು ರಕ್ಷಣೆಗೆ

ಭಾರತಕ್ಕೆ ನಿರ್ಣಾಯಕ ನಾಯಕನ ಅಗತ್ಯವಿದೆ

ವಿಧಿಯ ಅದೃಷ್ಟದಾಟದಿಂದ ಕಾಂಗ್ರೆಸ್ 2004ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂತು. ಎಡಪಕ್ಷಗಳ ಜೊತೆಗೆ ಇನ್ನೂ ಹಲವಾರು ಪಕ್ಷಗಳ ಜೊತೆಗೆ ಮೈತ್ರಿ ಮಾಡಿಕೊಂಡು ಯುಪಿಎಯನ್ನು ರಚಿಸಿ ಬಹುಮತಗಳಿಸಿ ಸರ್ಕಾರ ರಚಿಸಿತು ಕಾಂಗ್ರೆಸ್. ಆದರೆ ಒಬ್ಬೊಬ್ಬ ಮಂತ್ರಿಗಳು ತಮ್ಮ ಅಧಿಕಾರವನ್ನು ಜಹಗೀರಿನಂತೆ ಭಾವಿಸಿರುವುದರಿಂದ ಅವರಲ್ಲಿ ಹೊಂದಾಣಿಕೆಯ ಅಭಾವ ಎದ್ದು ಕಾಣುತ್ತಿದೆ. ಎರಡು ವಿರುದ್ಧ ತತ್ವಗಳನ್ನು ಹೊಂದಿದ್ದ ಪಕ್ಷಗಳ ಸರ್ಕಾರ ರಚನೆಯಿಂದ ಹೊಂದಾಣಿಕೆ ಹೇಗೆ ಸಾಧ್ಯ?

ನಮ್ಮ ಪ್ರಧಾನಮಂತ್ರಿಗಳು ಹೆಸರಿಗೆ ಪ್ರಧಾನಿಯಾದರೂ ಅವರಿಗೆ ಅಧಿಕಾರವಿಲ್ಲ. ಸರ್ಕಾರ ಅಧಿಕಾರದಲ್ಲಿದ್ದರೂ ಅದು ಸ್ವತಂತ್ರವಲ್ಲ. ಇಂತಹ ಸರ್ಕಾರ ಜನಸಾಮಾನ್ಯರ ಕಲ್ಯಾಣಕ್ಕಾಗಿ ಏನು ಮಾಡಲು ಸಾಧ್ಯ. ಐದು ವರ್ಷಗಳ ಆಡಳಿತ ನಡೆಸಿದ ಸರ್ಕಾರ ಜನಗಳಿಗೆ ತೋರಿಸಲು ಯಾವ ಸಾಧನೆ ಮಾಡಿದೆ.

ಈ ಸರ್ಕಾರ ನಾಲ್ಕು ಸಂಗತಿಗಳಿಗೆ ನೆನಪಿನಲ್ಲಿರುತ್ತದೆ. ಸ್ವತಂತ್ರ ಭಾರತದ ಇತಿಹಾಸದಲ್ಲೇ ಮೊದಲ ಬಾರಿಗೆ ಅತ್ಯಂತ ದುರ್ಬಲ ಪ್ರಧಾನಿಯನ್ನು ಹೊಂದಿದ್ದ ಸರ್ಕಾರ. ಎನ್‌ಡಿಎಗೆ ವಿರುದ್ಧವಾದ ನೀತಿಗಳಿಂದ ದೇಶದಲ್ಲಿ ಹುಟ್ಟಿದ ಅಭದ್ರೆಯಿಂದ ನಿರಂತರವಾದ ಭಯೋತ್ಪಾದಕ ದಾಳಿ, ಮಾವೋವಾದಿಗಳ ದಂಗೆ, ಪ್ರತ್ಯೇಕವಾದಿಗಳ ಹಿಂಸೆಯಿಂದ ನೂರಾರು ಜನರ ಪ್ರಾಣಹಾನಿಯಾಯಿತು. ಈ ಸರ್ಕಾರದ ಆರ್ಥಿಕ ನೀತಿಯಿಂದ ಹಣದುಬ್ಬರ, ನಿರುದ್ಯೋಗ ಕಾರ್ಖಾನೆಗಳು ಮುಚ್ಚಲ್ಪಟ್ಟವು. ಸಿಬಿಐನಂತಹ ಸಂಸ್ಥೆಯ ನೆರವಿನಿಂದ ಭ್ರಷ್ಟಾಚಾರವನ್ನು ರಕ್ಷಿಸಿತು.

ಭಯೋತ್ಪಾದಕ ದಾಳಿಗಳಿಂದ ಜನರನ್ನು ರಕ್ಷಿಸಲು ಸಂಪೂರ್ಣ ಸೋತಿರುವ ಸರ್ಕಾರ ತನ್ನ ಕಳಂಕ ನಿವಾರಿಸಲು ಹಳೆಯ ರಕ್ಷಣಾ ಕಾನೂನುಗಳನ್ನು ಅಲ್ಲಲ್ಲಿ ಬದಲಾಯಿಸಿತು. ಆದ್ದರಿಂದ ಏನೂ ಪ್ರಯೋಜನವಾಗಲಿಲ್ಲ. 2008ರಲ್ಲಿ ಇದ್ದ ಆಹಾರ ಧಾನ್ಯಗಳ ಬೆಲೆಗಿಂತ ಈಗ ಶೇ. 8ರಷ್ಟು ಹೆಚ್ಚಾಗಿದೆ ಮತ್ತು ಅದು 2004ರಲ್ಲಿ ಇದ್ದಕ್ಕಿದ್ದಂತೆ ಹೆಚ್ಚು ದುಬಾರಿಯಾಗಿದೆ. ಆದರೆ ಅದನ್ನು ಮರೆಮಾಚಲು ಸುಳ್ಳು ಅಂಕಿ ಸಂಖ್ಯೆಗಳನ್ನು ಜನರ ಮುಂದೆ ಇಡಲಾಗುತ್ತಿದೆ.

ಖಾಸಗಿ ಸಂಸ್ಥೆಗಳಲ್ಲಿ ದುಡಿಯುತ್ತಿದ್ದ ಲಕ್ಷಾಂತರ ಜನ ತಮ್ಮ ಉದ್ಯೋಗವನ್ನು ಕಳೆದುಕೊಂಡಿದ್ದಾರೆ. ವ್ಯವಸ್ಥಿತ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕುಶಲಕರ್ಮಿಗಳು ತಮ್ಮ ಕೆಲಸಗಳನ್ನು ಕಳೆದುಕೊಳ್ಳುತ್ತಿದ್ದಾರೆ. ನಿರುದ್ಯೋಗಕ್ಕಿಂತಲೂ ಈ ಸಮಸ್ಯೆ ಹೆಚ್ಚು ಭೀಕರ. ಏಕೆಂದರೆ ಉದ್ಯೋಗಸ್ಥರ ಜನರ ಸಂಪಾದನೆಯ ಮೇಲೆ ಅವರ ಕುಟುಂಬ ವರ್ಗದವರು ಅವಲಂಬಿತರಾಗಿರುತ್ತಾರೆ.

ತಮ್ಮ ಶಿಕ್ಷಣ ಮುಗಿಸಿ ಉದ್ಯೋಗ ಅರಸುತ್ತಿರುವ ಯುವ ಜನತೆ, ನಿರುದ್ಯೋಗ ಸಮಸ್ಯೆಯಿಂದ ಹೆಚ್ಚು ಬಳಲುತ್ತಿದ್ದಾರೆ. ಯುಪಿಎ ಸರ್ಕಾರದಿಂದಾಗಿ ಅವರ ಭವಿಷ್ಯ ಮಂಕಾಗಿದೆ.

ಬಡವರನ್ನಂತೂ ಕಾಂಗ್ರೆಸ್ ಮುಂದಾಳತ್ವದ ಯುಪಿಎ ಸರ್ಕಾರ ಮರೆತೇ ಬಿಟ್ಟಿದೆ. ಭಾರೀ ಪ್ರಚಾರ ಮಾಡಿದ ಖಚಿತ ಗ್ರಾಮೀಣ ಉದ್ಯೋಗ ಕಾರ್ಯಕ್ರಮ ಬೇರೆಲ್ಲಾ ಕಾರ್ಯಗಳಂತೆಯೇ ಸೋತಿದೆ. 55 ಕೋಟಿಯಷ್ಟು ಜನಸಂಖ್ಯೆಯನ್ನು ಬಡತನ ರೇಖೆಗಳಿಗಿಂತ ಕೆಳಗೆ ತಳ್ಳಲಾಗಿದೆ. ಯುಪಿಎ ಸರ್ಕಾರದ ಅಪ ಯಶಸ್ಸು ಈ ಅಂಕಿ ಅಂಶಗಳು. ಇಂಡಿಯನ್ ಸ್ಯಾಟಿಸ್ಟಕಲ್ ಇನ್‌ಸ್ಟಿಟ್ಯೂಟ್‌ನ ಮಾದರಿ ಸರ್ವೆಯಿಂದ ತಿಳಿದು ಬಂದಿರುವುದರ ಈ ಅಂಕಿ ಅಂಶ. ನಿಜವಾದ ಅಂಕಿ ಅಂಶ ಇದಕ್ಕಿಂತ ಹೆಚ್ಚಿರಬಹುದು.

ಭಾರತ ಹಳ್ಳಿ ಹಳ್ಳಿಗಳಲ್ಲಿ ರೈತರು ಸಾಲದ ಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ಸರ್ಕಾರದ ನಿರ್ಲಕ್ಷ್ಯದ ಫಲ.

ಕಾಂಗ್ರೆಸ್ ಮುಂದಾಳತ್ವದ ಯುಪಿಎ ಸರ್ಕಾರದ ಕಾಲದಲ್ಲಿ ನಗರ ಪ್ರದೇಶಗಳಲ್ಲೂ ಬಡತನ ಹೆಚ್ಚುತ್ತಿದೆ. ಅರ್ಬನ್ ಪಾವರ್ಟಿ ರಿಪೋರ್ಟ್ (ಭಾರತದ ಬಡತನ ವರದಿ) 2009ರ ಪ್ರಕಾರ ಶೇ. 23.7ರಷ್ಟು ನಗರದ ಜನಸಂಖ್ಯೆ ಕೊಳಚೆ ಪ್ರದೇಶಗಳಲ್ಲಿ ಬಡತನ, ಕಾಯಿಲೆ, ಅಪರಾಧ, ಉದ್ವಿಗ್ನ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ.

ಇಂತಹ ಸ್ಥಿತಿಗತಿಗಳಿಂದ, ಬಡತನ ರೇಖೆಗಳಿಗಿಂತ ಕೆಳಗಿರುವವರ ಜನಸಂಖ್ಯೆಯ ಹೆಚ್ಚಳ ದೇಶದ ಪ್ರಗತಿಗೆ ಮಾರಕ. ಇದನ್ನು ಸರ್ಕಾರದ ಸಹಾಯದಿಂದ ತಡೆಗಟ್ಟದಿದ್ದರೆ ಭಾರತ ಪ್ರಪಂಚದ ದೊಡ್ಡ ಶಕ್ತಿಯಾಗಿ ಹೊರಹೊಮ್ಮುವುದು ಅಸಾಧ್ಯ.

ಎನ್‌ಡಿಎ ಸರ್ಕಾರವಿದ್ದ ದಿನಗಳಲ್ಲಿ ಭಾರತ ಪ್ರಗತಿಯ ಹಾದಿಯಲ್ಲಿತ್ತು. ಆದರೆ ಯುಪಿಎ ಸರ್ಕಾರ ಪ್ರಗತಿಪಥವನ್ನು ಹಿಂದಕ್ಕೆ ತೆಗೆದುಕೊಂಡು ಹೋಗುತ್ತಿದೆ. ಬಿಜೆಪಿ ಸರ್ಕಾರದಿಂದ ಮಾತ್ರ ಮತ್ತೆ ಭಾರತ ಪ್ರಗತಿಯ ಪಥದಲ್ಲಿ ನಡೆಯಲು ಸಾಧ್ಯ.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ಆದ್ಯತೆಯ ಮೇರೆಗೆ ರಕ್ಷಣೆ ಮತ್ತು ಆರ್ಥಿಕತೆಗೆ ಗಮನ ಕೊಡಲಿದೆ. ಅಟಲ್ ಬಿಹಾರಿ ವಾಜಪೇಯಿ ಅವರ ನಾಯಕತ್ವದ ಎನ್‌ಡಿಎ ಸರ್ಕಾರದ ನೀತಿಗಳಾದ ಉದ್ಯೋಗ ಅವಕಾಶ, ದೇಶದ ಪ್ರಗತಿ ಮೂಲಭೂತ ಸೌಕರ್ಯ, ಕೃಷಿಗೆ ಹೆಚ್ಚಿನ ಆದ್ಯತೆ, ಕೈಗಾರಿಕೆ ಸುಲಭ ಸಾಲ ಒದಗಿಸುವಿಕೆ, ಸಾಮಾನ್ಯ ಜನರಿಗೆ ಭಯೋತ್ಪಾದಕರಿಂದ ರಕ್ಷಣೆ ಒದಗಿಸುವ ಯೋಜನೆಗಳನ್ನು ಜಾರಿಗೆ ತರಲು ಕಂಕಣಬದ್ಧವಾಗಿದೆ.

ಭಾರತದಲ್ಲಿ ಈಗ ನಾಯಕತ್ವದ ತೀವ್ರ ಕೊರತೆಯಿದೆ. ಈಗ ದೇಶಕ್ಕೆ ದೃಢ ಸಂಕಲ್ಪ ಮತ್ತು ನಿರ್ಣಾಯಕ ನಾಯಕನ ಅವಶ್ಯಕತೆ ಇದೆ. ನಿಷ್ಠೆ ಮತ್ತು ಬದ್ಧತೆಯಿಂದ ಪರಿಸ್ಥಿತಿಯನ್ನು ನಿಭಾಯಿಸಿ, ದೇಶವನ್ನು ಮುನ್ನಡೆಸುವ ನಾಯಕ ಬೇಕು. ಜನಗಳಲ್ಲಿ ಸರ್ಕಾರದ ಬಗ್ಗೆ ವಿಶ್ವಾಸ ಮತ್ತು ನಂಬಿಕೆಯನ್ನು ಮೂಡಿಸುವಂತಹ ನಾಯಕ ಬೇಕು. ಸಂಘರ್ಷಕ್ಕಿಂತ ಒಮ್ಮತದಲ್ಲಿ, ಎದುರಿಸಿ ನಿಲ್ಲುವುದಕ್ಕಿಂತ ಸಮಾಲೋಚನೆಯಲ್ಲಿ ನಂಬಿಕೆ ಇರುವಂತಹ ನಾಯಕ ಬೇಕು. ಆಗ ಮಾತ್ರ ಎಲ್ಲಾ ಕ್ಷೇತ್ರಗಳಲ್ಲೂ ಸೋತಿರುವ ಕಾಂಗ್ರೆಸ್ ಸರ್ಕಾರಕ್ಕಿಂತ ಒಳ್ಳೆಯ ಸರ್ಕಾರವನ್ನು ನೀಡಬಹುದು.

ಈ ಎಲ್ಲಾ ಗುಣಗಳಲ್ಲಿರುವ ನಾಯಕ ಶ್ರೀ ಎಲ್.ಕೆ. ಅಡ್ವಾಣಿ.

ಈ ಆರು ದಶಕಗಳಲ್ಲಿ ಶ್ರೀ ಅಡ್ವಾಣಿಯವರು ಅನುಕರಣೀಯವಾದ ಸೇವೆಯನ್ನು ದೇಶಕ್ಕೆ ಸಲ್ಲಿಸಿದ್ದಾರೆ. ತುರ್ತು ಪರಿಸ್ಥಿತಿಯಲ್ಲಿ ಸರ್ಕಾರದ ವಿರುದ್ಧ ಚಳವಳಿಯಲ್ಲಿ ಭಾಗವಹಿಸಿ ಸ್ವತಂತ್ರಕ್ಕಾಗಿ 19 ತಿಂಗಳು ಜೈಲುವಾಸ ಅನುಭವಿಸಿದವರು. ಅಯೋಧ್ಯೆ ಚಳುವಳಿಯಲ್ಲಿ ದೊಡ್ಡ ಜನಸಮೂಹದಲ್ಲಿ ನಾಯಕತ್ವ

ವಹಿಸಿ ಜಾತ್ಯಾತೀತತೆ ಮತ್ತು ದೇಶದ ಸಂಸ್ಕೃತಿಯ ಬಗ್ಗೆ ಶಕ್ತವಾದ ಮಂಡಿಸಲು ಕಾರಣರಾದರು. ಶ್ರೀ ವಾಜಪೇಯಿ ಅವರ ಜೊತೆ ಸೇರಿ ಎನ್‌ಡಿಎ ಕಾಂಗ್ರೆಸ್ಸೇತರ ಸ್ಥಿರ ಸರ್ಕಾರ ರಚಿಸುವುದರಲ್ಲಿ ನೆರವಾದರು. ವಾಜಪೇಯಿ ಸರ್ಕಾರದಲ್ಲಿ ಉಪ ಪ್ರಧಾನಿಯಾಗಿ, ಗೃಹಮಂತ್ರಿಯಾಗಿ ಸರ್ಕಾರ ಸುಲಲಿತವಾಗಿ ಕಾರ್ಯ ನಿರ್ವಹಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು.

ಶ್ರೀ ಎಲ್.ಕೆ. ಅಡ್ವಾಣಿಯವರ ಸಮರ್ಥ ನಾಯಕತ್ವದಲ್ಲಿ ಎನ್‌ಡಿಎ ಮಿತ್ರಪಕ್ಷಗಳು 2009ರ ಚುನಾವಣೆ ಎದುರಿಸುತ್ತಿರುವುದು ಬಿಜೆಪಿಗೆ ಹೆಮ್ಮೆಯ ವಿಷಯ.

ಬಿಜೆಪಿ ಮೂರು ಮುಖ್ಯ ವಿಷಯಗಳ ಬದ್ಧತೆಯೊಂದಿಗೆ 2009ರ ಚುನಾವಣೆಯನ್ನು ಎದುರಿಸಲು ಸಜ್ಜಾಗಿದೆ. ಉತ್ತಮ ಆಳ್ವಿಕೆ, ಅಭಿವೃದ್ಧಿ ಮತ್ತು ರಕ್ಷಣೆ. ಯುವಜನತೆಯ ಆಶೋತ್ತರಗಳನ್ನು ಈಡೇರಿಸುವುದರಲ್ಲಿ ನಮ್ಮ ಗಮನ ಕೇಂದ್ರೀಕರಿಸಲಾಗುವುದು. ಸಮರ್ಥ ಶಿಕ್ಷಣದ ಮೂಲಕ ಅಧಿಕಾರ ಬಲಪಡಿಸುವುದು. ಜನರ ಪ್ರಾಣ ಮತ್ತು ಆಸ್ತಿಗಳಿಗೆ ಸೂಕ್ತ ರಕ್ಷಣೆ, ಆರ್ಥಿಕ ಅಭಿವೃದ್ಧಿ, ಕೃಷಿ ಪ್ರೋತ್ಸಾಹ, ಗ್ರಾಮೀಣ ಅಭಿವೃದ್ಧಿ, ಅಸಂಘಟಿತ ವಲಯಗಳಿಗೆ ಸಹಾಯ, ಯುವಜನತೆಗೆ ಉದ್ಯೋಗ ಅವಕಾಶ, ಬೆಲೆ ಇಳಿಕೆ, ಮೂಲಭೂತ ಸೌಕರ್ಯಗಳಿಗೆ ಸಾಕಷ್ಟು ಹಣ ಒದಗಿಸುವುದು. ಇವುಗಳಿಗೆ ನಮ್ಮ ಕಾರ್ಯಕ್ರಮ ಪಟ್ಟಿಯಲ್ಲಿ ಮೊದಲ ಆದ್ಯತೆ.

ಐದು ವರ್ಷಗಳ ಅಸಮರ್ಥ ಆಡಳಿತ ನಂತರ ಈಗ ಸಮರ್ಥವಾಗಿ ಕೆಲಸ ಮಾಡುವ ಜನಗಳ ಅವಶ್ಯಕತೆಗೆ ಗಮನ ಕೊಡುವ ಸರ್ಕಾರದ ಅಗತ್ಯವಿದೆ ಎಂಬುದು ಬಿಜೆಪಿಯ ನಂಬಿಕೆ. ಎಲ್ಲಕ್ಕಿಂತ ಮುಖ್ಯವಾಗಿ ಈಗ ಭಾರತದ ಸರ್ವಾಂಗೀಣ ಅಭಿವೃದ್ಧಿಯತ್ತ ನಮ್ಮ ಗಮನ ಕೇಂದ್ರೀಕರಿಸಿ ಜನಗಳಿಗೆ ಉತ್ತಮ ಜೀವನ ಕಲ್ಪಿಸುವುದು. ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಹಣ ಸಹಾಯ ಮಾಡಿ ಆ ಮೂಲಕ ಕೃಷಿ ಉತ್ಪನ್ನಗಳನ್ನು ಹೆಚ್ಚಿಸಿ ಕೃಷಿಕರ ವರಮಾನ ಹೆಚ್ಚಿಸುವುದು ಮತ್ತು ಅವರ ಜೀವನ ಮಟ್ಟವನ್ನು ಸುಧಾರಿಸುವ ಭರವಸೆಯನ್ನು ಕೊಡಲಾಗುವುದು.

## ರಾಷ್ಟ್ರೀಯ ಭದ್ರತೆ

### ಈ ಭೂಮಿಯಲ್ಲಿ ಇನ್ನು ಮುಂದೆ ಯಾವುದೇ ಬೆದರಿಕೆ ಇಲ್ಲ

ಕಳೆದ ಐದು ವರ್ಷಗಳಲ್ಲಿ ಸತತವಾಗಿ ಭಯೋತ್ಪಾದಕರು, ಪ್ರತ್ಯೇಕತಾ ಶಕ್ತಿಗಳು ಹಾಗೂ ನೆರೆ ಗಡಿಯಿಂದ ನುಸುಳಿ ಬರುವ ಬಂಡುಕೋರರನ್ನು ಸದೆಬಡಿಯುವಲ್ಲಿ ಬಲಹೀನವಾದ ಈ ಯುಪಿಎ ಸರ್ಕಾರದಿಂದ ಜನತೆ ಬೆಚ್ಚಿ ಬೀಳುವಂತಾಗಿದೆ. 2005ರ ದೀಪಾವಳಿಯ ಮುಂಚೆ ದೆಹಲಿಯ ಮೇಲೆ ನಡೆದ ದಾಳಿಯಿಂದ ಹಿಡಿದು ಸಶಸ್ತ್ರ ಬೆಂಗಾವಲು ಪಡೆ ಹೊಂದಿರುವ ಅಯೋಧ್ಯೆಯ ರಾಮಮಂದಿರದ ಮೇಲಿನ ಫಿದಾಯಿನ್ ದಾಳಿಯವರೆಗೆ ಹೈದರಾಬಾದ್‌ನಲ್ಲಿ ಭೀತಿಗೊಳಿಸಿದ ಮೆಕ್ಕಾ ಮಸೀದಿ ದಾಳಿ, ಬೆಂಗಳೂರು, ಜೈಪುರ, ಅಹಮದಾಬಾದ್, ಅಹಮದಾಬಾದ್ ಹಾಗೂ ಗೌಹಾತಿಯ ಮೇಲೆ ನಡೆದ ದಾಳಿ, ಬನಾರಸ್‌ನಲ್ಲಿ ಸಂಕಟಮೋಚನ ಮಂದಿರದಲ್ಲಿ ನಡೆದ ಭಕ್ತರ ಮಾರಣ ಹೋಮವಿರಬಹುದು. ಭಯೋತ್ಪಾದಕರು ಯಾವುದೇ ಭಯವಿಲ್ಲದೇ ದಾಳಿ ನಡೆಸುತ್ತಿದ್ದು ಪ್ರಧಾನಿ ಸಂಶಯಾಸ್ಪದ ಭಯೋತ್ಪಾದಕರ ಬಗ್ಗೆ ಉಗ್ರ ಕ್ರಮ ಕೈಗೊಳ್ಳುವ ಬದಲು

ಕಾರ್ಯಾಚರಣೆಯಲ್ಲಿ ಸತ್ತ ಭಯೋತ್ಪಾದಕ ಆಪ್ತರಿಗೆ ಬಹುಮಾನ ನೀಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.
ಯುಪಿಎ ಸರ್ಕಾರ ಈ ಮುಂಚೆ ಭಾಜಪ ನೇತೃತ್ವದ ಎನ್‌ಡಿಎ ಸರ್ಕಾರ ತಂದ ಭಯೋತ್ಪಾದಕ ವಿರುದ್ಧ ಶಿಸ್ತಿನಿ ನಿಯಮಗಳನ್ನು ಹಂತ ಹಂತವಾಗಿ ಸಡಿಲಿಸಿತು. ಪೋಟೊ ಕಾಯ್ದೆ ರದ್ದುಪಡಿಸಿತು. ತನಿಖೆಗಳನ್ನು ನಿಲ್ಲಿಸಿತು. ವಿಚಾರಣೆಗಳನ್ನು ನಿಧಾನಗೊಳಿಸಿತು.
ಪಾರ್ಲಿಮೆಂಟ್‌ನ ಮೇಲೆ ಹಾಡು ಹಗಲೇ ನಡೆದ ನಿರ್ಭೀತ ದಾಳಿಯ ರೂವಾರಿ ಮೊಹಮ್ಮದ್ ಅಫ್ಜಲ್‌ಗುರುವಿಗೆ ಭಾರತದ ಅತ್ಯುಚ್ಛ ನ್ಯಾಯಾಲಯ ಪೋಟಾ ಕಾಯ್ದೆಯಡಿ ಮರಣದಂಡನೆ ವಿಧಿಸಿದರೂ ಆ ಸರ್ಕಾರ ಅದನ್ನು ನಿರ್ವಹಿಸುವ ಅನಿಶ್ಚಿತ ಪ್ರಧಾನಿ ಇದನ್ನು ಜಾರಿಗೊಳಿಸಲಾಗದಿರುವುದು ಭಾರತದ ಶತ್ರುಗಳಿಗೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿರುವವರೆಗೆ ಯಾವುದೇ ಭಯೋತ್ಪಾದಕ ಕೃತ್ಯಗಳಿಗೂ ದಂಡನೆಯಾಗುವುದಿಲ್ಲ ಎಂಬ ಸ್ಪಷ್ಟ ಸಂದೇಶ ರವಾನೆಯಾಗುತ್ತಿದೆ.
ಆದುದರಿಂದ ನಮ್ಮ ನಗರಗಳ ಮೇಲೆ ಭಯೋತ್ಪಾದಕ ದಾಳಿ ಸತತವಾಗಿ ನಡೆಯುತ್ತಿರುವುದಕ್ಕೆ ಯಾವುದೇ ಅಚ್ಚರಿಯಾಗುವುದಿಲ್ಲ. ಈ ದಾಳಿ ರಕ್ತಪಾತ, ಸಾವು ಹಾಗೂ ನಾಶಗಳೇ ಗುರಿಯಾಗಿಟ್ಟುಕೊಂಡು ನಿರ್ವಹಿಸಲಾಗುತ್ತಿದೆ. ರಾಷ್ಟ್ರದ ರಾಜಧಾನಿ ನವದೆಹಲಿ ವಾಣಿಜ್ಯ ರಾಜಧಾನಿ ಮುಂಬೈ ಎರಡೆರಡು ಬಾರಿ ದಾಳಿಗೊಳಗಾಗಿದೆ. ಅದರಂತೆ ತಂತ್ರಜ್ಞಾನ, ಐಟಿ ರಾಜಧಾನಿ ಬೆಂಗಳೂರು ಸಹ. ಪ್ರಯಾಣಿಕ ರೈಲುಗಳ ಮೇಲೆ ಬಾಂಬ್ ದಾಳಿ. ಐಎಸ್‌ಐ ಪ್ರೇರಿತ ಫಿದಾಯ್ ನವೆಂಬರ್ 26ರಂದು ಮುಂಬೈನಲ್ಲಿ ವಿವಿಧ ಸ್ಥಳಗಳ ಮೇಲೆ ನಡೆದ ಭಯೋತ್ಪಾದಕ ದಾಳಿ 60 ಗಂಟೆಗಳಿಗೂ ಮೀರಿ ನಡೆಯಿತ್ತೆಂದರೆ ಭಾರತ ಈ ಹಿಂದೆಂದೂ ಅನುಭವಿಸದ ಅಸಹಾಯಕತೆ ಭಯೋತ್ಪಾದನೆ ವಿಷಯದಲ್ಲಿ ಎದ್ದು ಕಾಣುತ್ತಿದೆ.
ಪಾಕಿಸ್ತಾನಿ ಏಜೆನ್ಸಿಗಳ ಪ್ರೇರಿತವಾಗುತ್ತಿರುವ ಭಯೋತ್ಪಾದನೆ ಕತೆ ಈಗ 'ಹಳ್ಳಿ, ಪಟ್ಟಣ, ನಗರದಲ್ಲಿ ನೆಲೆಗೊಂಡಿರುವ ಜನರು ಯಾವಾಗಲೂ ಭಯದ ನೆರಳಿನಲ್ಲಿರುವಂತೆ ಅನುಭವಪಡುತ್ತಿದ್ದಾರೆ. ಜನಸಾಮಾನ್ಯರ ಜೀವ ಯಾವಾಗಲೂ ಭಯ ಹೆದರಿಕೆಗಳು ಮಾವೋವಾದಿಗಳು 13 ರಾಜ್ಯಗಳ 156 ಜಿಲ್ಲೆಗಳಲ್ಲಿ ಹರಡಿರುವುದು ಕಾರಣವಾಗುತ್ತಿದೆ. ಅಂತರ ರಾಜ್ಯಗಳ ಹೊಂದಾಣಿಕೆಗಾಗಿ ಎನ್‌ಡಿಎ ಸರ್ಕಾರ ಸೇರಿಸುತ್ತಿದ್ದ ಸಭೆಗಳನ್ನು ಸದಾ ಈ ಸರ್ಕಾರ ಹಂತ ಹಂತವಾಗಿ ಸಡಿಲಿಸಿ ನಿಷ್ಕ್ರಿಯಗೊಳಿಸಿದೆ. ರಾಜ್ಯ ಸರ್ಕಾರಗಳು ಮಾವಾವಾದಿಗಳ ಹಗೆಯ ದಾಳಿಯ ಎದುರು ತಾವೇ ಕ್ರಮ ವಹಿಸಬೇಕಾದ ಸನ್ನಿವೇಶ ಎದುರಿಸುತ್ತಿವೆ. ಜಮ್ಮು-ಕಾಶ್ಮೀರದಲ್ಲಿ ವಿಭಜನ ಶಕ್ತಿಗಳು ಪಾಕಿಸ್ತಾನ ಏಜೆನ್ಸಿಗಳ ಸಹಾಯದಿಂದ ನಿಲ್ಲದ ಹಿಂಸಾಕೃತ್ಯಗಳ ನಡೆಯುತ್ತಲೇ ಇದೆ; ಇನ್ನು ಪೂರ್ವೋತ್ತರ ರಾಜ್ಯಗಳಲ್ಲಿ ಬಂಡುಕೋರರ ನಿರ್ಧಯವಾದ ದಾಳಿ, ಮುಗ್ಧ ಜನರನ್ನು ನಿಶ್ಚೇತರನ್ನಾಗಿ ಮಾಡುತ್ತಿದೆ. ಅಸ್ಸಾಂನಲ್ಲಿನ ಉಗ್ರ ದಾಳಿಯನ್ನು ಎನ್‌ಡಿಎ ಬಗ್ಗುಬಡಿದಿತ್ತು. ಈಗ ಮತ್ತೆ ಬಲಗೊಂಡು ತಮ್ಮ ದಾಳಿಯನ್ನು ಮೊನಚುಗೊಳಿಸಿ ಭಯದ ಅಲೆಗಳನ್ನು ಎಬ್ಬಿಸುತ್ತಿದ್ದಾರೆ. ಕಾಂಗ್ರೆಸ್ ರಾಜ್ಯ ಸರ್ಕಾರಗಳು ಉಲ್ಫಾ ಬಂಡುಕೋರರನ್ನು ಶಿಕ್ಷಿಸುವ ಬದಲು ಷರತ್ತು ರಹಿತ ಮಾತುಕತೆಗಳಿಗೆ ಆಹ್ವಾನ ನೀಡಲಾಗುತ್ತಿದೆ.
ಭಾರತದ ಆಂತರಿಕ ಭದ್ರತೆಗೆ ಧಕ್ಕೆ.

ಅನಿಯಮಿತ ಬಂಡುಕೋರರರು ಪೂರ್ವ ಭಾಗದ ದೇಶಗಳಿಂದ ನುಸುಳುತ್ತಿದ್ದಾರೆ. ಇದು ಗಡಿನಾಡಿನಲ್ಲಿನ ಸಡಿಲತೆಯನ್ನು ಉಪಯೋಗಿಸಿಕೊಳ್ಳುತ್ತಿರುವ ಐಎಸ್ಐ ಹಾಗೂ ಜಿಹಾದಿ ಸಂಸ್ಥೆಗಳು ಸ್ಥಳೀಯರಲ್ಲಿ ಬಾಂಬ್ ದಾಳಿಗಳಿಂದ ಭಯದ ವಾತಾವರಣ ಸೃಷ್ಟಿಸುತ್ತಿದ್ದು ಇದಕ್ಕೆ ಪೂರಕ ಸಾಧನಗಳನ್ನು ಒದಗಿಸಿ ಈ ವಿದೇಶಿ ಭಯೋತ್ಪಾದಕರ ಬಲಪಡಿಸುತ್ತಿದ್ದಾರೆ. ಐಎಂಡಿಟಿ ಕಾಯ್ದೆಯನ್ನು ರದ್ದುಪಡಿಸಿದ ಪ್ರಕರಣದಲ್ಲಿ ಅಕ್ರಮ ವಲಸೆ , ದೇಶದ ವಿರುದ್ಧ ಬಾಹ್ಯದಾಳಿ ಎಂದೇ ಬಣ್ಣಿಸಿದೆ. ಆದರೆ ಕಾಂಗ್ರೆಸ್‌ನ ಕೇಂದ್ರ ಹಾಗೂ ಅಸ್ಸಾಂ ರಾಜ್ಯ ಸರ್ಕಾರ ನ್ಯಾಯಾಲಯದ ತೀರ್ಮಾನಗಳನ್ನೇ ಆದೇಶಗಳಿಂದ ತಿರುಚುತ್ತಿವೆ. ಗೌಹಾತಿ ಉಚ್ಚ ನ್ಯಾಯಾಲಯ ಕಳೆದ ವರ್ಷ ಅಕ್ರಮ ವಲಸೆ ವಿರುದ್ಧ, ರಾಜ್ಯ ವಿರುದ್ಧ, ಕಠಿಣವಾದ ಶಬ್ದಗಳಿಂದ ತರಾಟೆ ತೆಗೆದುಕೊಂಡಿದೆ. ಪಾಕಿಸ್ತಾನದವರು ಅಕ್ರಮವಾಗಿ ನುಸುಳಿ ಕೊನೆಗೆ ರಾಜ್ಯದ ಚುನಾವಣೆಗೆ ಸ್ಪರ್ಧಿಸಿದ್ದರೂ ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಮತ ಬ್ಯಾಂಕ್‌ಗಳು ಈ ಪ್ರದೇಶಗಳ ಜನ ಸಾಂದ್ರತೆಯ ಪರಿಮಾಣವನ್ನು ಬಹಳವಾಗಿ ಬದಲಾಯಿಲ್ಪಟ್ಟಿದೆ. ದೇಶ ಒಂದು ಸ್ಫೋಟಕ ಪೆಟ್ಟಿಗೆಯ ಮೇಲೆ ನಿಂತಿದೆ. ಹಾಗೂ ಮುಂದಿನ ಅನಾಹುತಗಳಿಗೆ ಈ ಸತತ ಅಕ್ರಮ ವಲಸೆ ಕಾರಣವಾಗುವುದು.

ತನ್ನ ಅವಧಿಯ ಮುಕ್ತಾಯದಲ್ಲಿ ಯುಪಿಎ ಸರ್ಕಾರ ಜನರನ್ನು ಮೂರ್ಖರನ್ನಾಗಿಸಲು ಹಾಲಿ ಇರುವ ನಿಯಮಗಳಲ್ಲಿ ಛೇದಿಸಿ ರಾಷ್ಟ್ರೀಯ ಬೇಹುಗಾರಿಕಾ ಸಂಸ್ಥೆಯೊಂದನ್ನು ಭಯೋತ್ಪಾದಕತೆ ಹತ್ತಿಕ್ಕಲು ರಚಿಸುತ್ತಿದೆ. ಇಂತಹ ಅರ್ಧ ಮನಸ್ಸಿನ ಕಾರ್ಯಗಳಿಂದ 26/11 ದಾಳಿಯಿಂದ ಉಂಟಾದ ಜನರ ಕೋಪ ತಣಿಸುವ ಕ್ರಮವಷ್ಟೇ ಇದಾಗಿದೆ. ಆದರೆ ಭಯೋತ್ಪಾದನೆ ಎದುರಿಸುವ ನೇರ ಕ್ರಮವಾಗಿರುವುದಿಲ್ಲ.

ಭಾಜಪ ತನ್ನ ಅಧಿಕಾರಕ್ಕೆ ಬರುವ 100 ದಿನಗಳಲ್ಲಿ ಈ ಕೆಳಕಂಡ ಕ್ರಮಗಳನ್ನು ಭಯೋತ್ಪಾದನೆ ಹತ್ತಿಕ್ಕಲು ಬದ್ಧವಾಗಿದೆ.

1) ಕಾಂಗ್ರೆಸ್ ಸರ್ಕಾರವು ಸಡಿಲಗೊಳಿಸಿ ಧರಾಶಾಯಿಗೈದಿದ್ದ ಭಯೋತ್ಪಾದಕ ವಿರುದ್ಧ ಕಾಯ್ದೆಯನ್ನು ಪುನರ್ ಸ್ಥಾಪಿಸುತ್ತದೆ. ಪೋಟೋವನ್ನು ಹೆಚ್ಚು ಪರಿಣಾಮಕಾರಿಯಾಗಿ ಪುನರ್ ರಚಿಸಿ ಇದನ್ನು ಸಶಕ್ತ ಆಯುಧವನ್ನಾಗಿಸಿ ಕಾನೂನಿನಿಂದ ನುಣುಚಿಕೊಳ್ಳುವವರ ವಿರುದ್ಧ ಉಪಯೋಗಿಸಲಾಗುತ್ತದೆಯಲ್ಲದೆ ರಾಷ್ಟ್ರೀಯ ಬೇಹುಗಾರಿಕಾ ಸಂಸ್ಥೆಯನ್ನು ಬಲಪಡಿಸುತ್ತದೆ.

2) ರಾಜ್ಯ ಸರ್ಕಾರಗಳು ಭಯೋತ್ಪಾದನೆ ಹಾಗೂ ಸಾಂಸ್ಕೃತಿಕ ಸ್ವರೂಪದ ಅಪರಾಧಿ ಕೃತ್ಯಗಳನ್ನು ಹತ್ತಿಕ್ಕಲು ಘಟಿಸುವ ಕಾಯ್ದೆ ನಿಯಮಗಳಿಕೆ ತ್ವರಿತ ಒಪ್ಪಿಗೆ ನೀಡುತ್ತದೆ. ಹಾಗೂ ಇಂತಹ ಕಾನೂನುಗಳನ್ನು ರಚಿಸುವ ಪ್ರೇರಣೆ ಬೆಂಬಲ ಒದಗಿಸುತ್ತದೆ.

3) ಅಕ್ರಮ ವಲಸೆ ವಿರುದ್ಧ ಚಳವಳಿ ಹಮ್ಮಿಕೊಳ್ಳುವುದಲ್ಲದೆ ಇಂತಹ ಬಂಡುಕೋರರನ್ನು ಗುರುತಿಸಲು ವಶಕ್ಕೆ ತೆಗೆದುಕೊಳ್ಳಲು ಹಾಗೂ ಅವರನ್ನು ತಮ್ಮ ದೇಶಕ್ಕೆ ರವಾನಿಸಲು ಕ್ರಮ ವಹಿಸುತ್ತದೆ.

4) ಆಂತರಿಕ ಹಾಗೂ ಬಾಹ್ಯ ಮಾಹಿತಿ ಸಂಸ್ಥೆಗಳನ್ನು ಪುನರ್ ರಚಿಸುವುದಲ್ಲದೇ ಹಾಲಿ ಇರುವ ಪದ್ಧತಿಗಳಲ್ಲಿ ಪರಿಣಾಮಕಾರಿಯಾದ ಹೊಂದಾಣಿಕೆ ನಿಖರತೆ ಹಾಗೂ ವಿನಿಮಯಕ್ಕೆ ಪೂರಕವಾಗುವಂತೆ ಅಳವಡಿಸಿ ಆಧುನಿಕ ತಂತ್ರಜ್ಞಾನ ಉಪಯೋಗದಿಂದ ವೇಗದಲ್ಲಿ ಬದಲಾಗುತ್ತಿರುವ ವಿದೇಶಿ ಶಕ್ತಿಗಳು ನಡೆಸುವ ಭಯೋತ್ಪಾದನೆಗೆ ವಿರುದ್ಧವಾಗಿ ರೂಪಿಸಿ

ಪರಿಣಾಮಕಾರಿಯಾಗಿ ಸಿದ್ಧಪಡಿಸಲಾಗುವುದು. ರಾಷ್ಟ್ರೀಯ ಭದ್ರತಾ ಮಂಡಳಿಯನ್ನು ರಾಜ್ಯಗಳಿಗೆ ಸಂಬಂಧಿಸಿದ ಭದ್ರತಾ ವಿಷಯಗಳಿಗೆ ವೇದಿಕೆಯನ್ನಾಗಿಸಿ ನೈಜ ಹಾಗೂ ಸಮಯಾಧಾರಿತ ಗೌಪ್ಯ ವಿಚಾರಗಳನ್ನು ಹಂಚಿಕೊಳ್ಳಲು ಹಾಗೂ ಭದ್ರತಾ ಲೋಪಕ್ಕೆ ಸಂಬಂಧಿಸಿದ ಬೇಹುಗಾರಿಕಾ ಸಂಸ್ಥೆಗಳನ್ನು ಜವಾಬ್ದಾರಿ ಮಾಡಲಾಗುವುದು. ಬೇಹುಗಾರಿಕಾ ಸಂಸ್ಥೆಗಳಿಗೆ ಆಯ್ಕೆ ಮಾಡುವ ಸಿಬ್ಬಂದಿಯನ್ನು ಅರ್ಹತೆಯ ಆಧಾರದಲ್ಲಿ ಮಾತ್ರ ನೇಮಕ ಮಾಡುವುದು. ಕಾಂಗ್ರೆಸ್ ಸರ್ಕಾರಗಳು ಕ್ರಮಗೊಂಡ ರಾಜಕೀಯ ಉತ್ತೇಜಿತ ಪ್ರೇರಿತ ನೇಮಕಾತಿಗಳನ್ನು ಅನುಸರಿಸುವುದಿಲ್ಲ.

5) ಆಧುನಿಕ ಸೈಬರ್‌ನ್ನು ಭದ್ರತಾ ಉಪಯೋಗಕ್ಕೆ ಡಿಜಿಟಲ್‌ಗೊಳಿಸುವುದಲ್ಲದೇ ಭಯೋತ್ಪಾದಕತೆಗೆ ಸೈಬರ್ ಸೆಕ್ಯುರಿಟಿ ಹಾಗೂ ಡಿಜಿಟಲ್ ತಂತ್ರಜ್ಞಾನದಿಂದ ದೇಶದ ಆಸ್ತಿಯನ್ನಾಗಿ ರೂಪಿಸಲಾಗುವುದು.
6) ರಾಜ್ಯ ಸರ್ಕಾರಗಳಿಗೆ ಸಹಾ ಸೈಬರ್ ಹಾರ್ಡ್‌ವೇರ್ ಹಾಗೂ ಡಿಜಿಟಲ್ ತಂತ್ರಜ್ಞಾನ ಹಾಗೂ ಪೊಲೀಸ್ ವ್ಯವಸ್ಥೆಗೆ ಅಗತ್ಯ ಉಪಕರಣ ಸರಬರಾಜು ಒದಗಿಸಿ ಮುಖ್ಯ ಹಾಗೂ  ಮಾವ್ಯಸ್ಟರು, ಅಕ್ರಮ ಬಂಡುಕೋರರ ಸನ್ನಿವೇಶಗಳಲ್ಲಿ ಸ್ಥೈರ್ಯವಾಗಿ ಎದುರಿಸಲು ಸಿದ್ಧಪಡಿಸಲಾಗುವುದು.
7) ಗಡಿ ಪ್ರದೇಶಗಳ ನಿರ್ವಹಣೆ ಸಮೀಕ್ಷ ಮಾಡಿ ಹಿಂಡು ಹಿಂಡಾಗಿ ನುಸುಳುವ ಬಂಡುಕೋರರ ವಿರುದ್ಧ ಶಿಕ್ಷಾರ್ಹ ದಂಡನೆ ಕ್ರಮ ಅನುಸರಿಸಲಾಗುವುದು.
8) ಭಾರತದ ವಿಸ್ತಾರವಾದ ಕರಾವಳಿ ಪ್ರದೇಶದ ಭದ್ರತೆಯನ್ನು ನಿರಂತರ ಪೆಟ್ರೋಲಿಂಗ್ ನಡೆಸಿ , ಸಮುದ್ರ ಮಾರ್ಗದಲ್ಲಿ ನುಸುಳುವುದನ್ನು ಹತ್ತಿಕ್ಕಲಾಗುವುದು. ಈ ಬಗ್ಗೆ ರಾಷ್ಟ್ರೀಯ ಕಡಲ ಪ್ರಾಧಿಕಾರ ರಚಿಸಲಾಗುವುದು.
9) ಭಯೋತ್ಪಾದನೆ ಪ್ರಕರಣಗಳಲ್ಲಿ ವಿಶೇಷ ನ್ಯಾಯಾಲಯ ಸ್ಥಾಪಿಸಿ ವಿಳಂಬವಾಗದಂತೆ ನ್ಯಾಯ ಒದಗಿಸಲಾಗುವುದು.
10) ಅಂತಾರಾಷ್ಟ್ರೀಯ ಗಡಿ ಉಲ್ಲಂಘನೆ ಹಾಗೂ ಭಯೋತ್ಪಾದಕತೆ ವಿರುದ್ಧ ರಾಜತಾಂತ್ರಿಕ ಒತ್ತಡದ ಮೂಲಕ ಸಹಮತ ರೂಪಿಸಲಾಗುವುದು. ಜಾಗತಿಕ ಭಯೋತ್ಪಾದನೆ ವಿರುದ್ಧ ತನ್ನ ಹೋರಾಟದಲ್ಲಿ ಯಾವುದೇ  ಬದಲಾವಣೆ ಇರುವುದಿಲ್ಲ. ಸಂಪೂರ್ಣವಾಗಿ ಸಹರಾಷ್ಟ್ರಗಳೊಡನೆ ಭಯೋತ್ಪಾದನಾ ವಿಷಯದಲ್ಲಿ ಸಹಕರಿಸಲಾಗುವುದು.
11) ಅಕ್ರಮ ಬಂಡುಕೋರರ ಜೊತೆ ಮಾತುಕತೆ ನಿಬಂಧನೆ ಹಾಗೂ ಷರತ್ತಿಗೆ ಒಳಪಟ್ಟಿದ್ದು ಭಾರತದ ಸಂವಿಧಾನದ ಚೌಕಟ್ಟಿನಲ್ಲಿ ಮಾತ್ರ ಕೈಗೊಳ್ಳಲಾಗುವುದು. ಭಾಜಪ ದೃಢವಾದ ಧ್ವನಿಯಲ್ಲಿ ನೇರ ಸಂದೇಶವನ್ನು ಭಯೋತ್ಪಾದಕರಿಗೆ ಭಯೋತ್ಪಾದಕತೆ ಪ್ರಾಯೋಜಿಸುವವರಿಗೆ ರವಾನಿಸುತ್ತಿದ್ದು ಎಷ್ಟೇ ದೊಡ್ಡವರಾದರೂ, ಬಲಶಾಲಿಗಳಾದರೂ, ಅದಕ್ಕೆ ತಕ್ಕ ಬೆಲೆಯನ್ನು ನೀಡಬೇಕಾಗುತ್ತದೆ.

ಕಾಂಗ್ರೆಸ್ ಅವಧಿಯಲ್ಲಿರುವ ಮತ ರಾಜಕಾರಣ ಪ್ರೇರಿತ ನ್ಯಾಯ ನಿರಾಕರಣವನ್ನು ಸ್ಥಗಿತಗೊಳಿಸಿ ನ್ಯಾಯಪರತೆ ಬಿಂಬಿಸುವ ವ್ಯವಸ್ಥೆಯನ್ನು ಪುನರ್ ಸ್ಥಾಪಿಸಲಾಗುವುದು.

ಎಲ್ಲಾ ನಾಗರೀಕರಿಗೆ ರಾಷ್ಟ್ರೀಯ ಗುರುತಿನ ಚೀಟಿ

ಭಾಜಪ ವಿವಿಧೋದ್ದೇಶಗಳಿಗೆ ಬಳಸುವಂಥ ರಾಷ್ಟ್ರೀಯ ಗುರುತಿನ ಚೀಟಿ ವಿತರಿಸಲು ತೀರ್ಮಾನಿಸಿದೆ. ಇದು ರಾಷ್ಟ್ರೀಯ ಭದ್ರತೆಗೆ ಹಾಗೂ ಇತರೆ ಮಾಹಿತಿಗಳಾದ ಪಾನ್ ಕಾಡ್, ಪಾಸ್‌ಪೋರ್ಟ್ ವಿವರ, ಬಿಪಿಎಲ್‌ನಿಂದ ರೇಷನ್, ಕಲ್ಯಾಣ ಕಾರ್ಯಕ್ರಮಗಳಿಗೆ ಸಹಾ ಉಪಯೋಗಿಸಲಾಗುವುದು. ಈ ಹಿಂದೆ ಇದಕ್ಕೆ ವಿವಿಧ ಗುರುತಿನ ಚೀಟಿಗಳಿದ್ದು ಭಾವಚಿತ್ರ ದೃಢೀಕರಿಸಿರಲಿಲ್ಲ. ಒಂದೇ ರಾಷ್ಟ್ರೀಯ ಗುರುತಿನ ಚೀಟಿಯಲ್ಲಿ ಭಾವಚಿತ್ರ ದೃಢೀಕರಣ ಇದ್ದು ಬಹು ಉಪಯೋಗವಾಗಿರುತ್ತದೆ. ಮುಖ್ಯವಾಗಿ ಅಕ್ರಮ ವಲಸೆ ತಡೆಯುತ್ತದೆ. ಎನ್‌ಡಿಎ ಮೂರು ವರ್ಷಗಳ ಅವಧಿಯಲ್ಲಿ ದೇಶದ ಜನರಿಗೆ ರಾಷ್ಟ್ರೀಯ ಗುರುತಿನ ಚೀಟಿ ಒದಗಿಸುತ್ತದೆ.

ರಾಷ್ಟ್ರೀಯ ಗುರುತಿನ ಚೀಟಿ ಒದಗಿಸುವುದರಿಂದ ಎನ್‌ಡಿಎ, ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನವಲ್ಲದೆ ತೆರಿಗೆ ಸಂಗ್ರಹದಲ್ಲೂ ಪರಿಣಾಮಕಾರಿ ಉಪಯೋಗ ಪಡೆಯಲು ಹಾಗೂ ಬ್ಯಾಂಕ್ ಖಾತೆಯೊಂದಿಗೆ ಸಂಯೋಜನೆ ಅಥವಾ ವೃದ್ಧಾಪ್ಯ ವೇತನ ಪಾವತಿಗಳಗೊಂಡಂತೆ ಪರಿಹಾರಗಳನ್ನು ಪಾವತಿಗಳನ್ನು ಅಳವಡಿಸುತ್ತದೆ. ಇತರ ಯೋಜನೆಗಳಾದ ತಾಯಿ–ಮಗು, ಆರೈಕೆ, ಕಿಸಾನ್ ಕ್ರೆಡಿಟ್ ಕಾರ್ಡ್, ವಿದ್ಯಾರ್ಥಿಗಳಿಗೆ ಸಹಾಯ ಹಾಗೂ ಇತರೆ ಸಣ್ಣ ಸಾಲಗಳನ್ನು ಹೊಂದಲು ಈ ಕಾರ್ಡ್‌ನಲ್ಲಿ ಅಳವಡಿಸಿದ ಮಾಹಿತಿಯ ನೇರ ಪ್ರಯೋಜನ ಪಡೆಯಬಹುದಾಗಿದೆ. ವ್ಯಕ್ತಿಯು ತಾನು ಪಡೆದ ಸಾಲ ಅಥವಾ ತನ್ನ ಖಾತೆಯಲ್ಲಿ ಉಳಿತಾಯ ತೊಡಗಿಸಲು ಹಾಗೂ ಭೂದಾಖಲೆಗಳನ್ನು ಅಳವಡಿಸಲು ಸಾಧ್ಯವಾಗುವಂತೆ ತಯಾರಿಸಲಾಗುವುದು.

ರಾಷ್ಟ್ರೀಯ ಗುರುತಿನ ಚೀಟಿಯಿಂದ ದೇಶದ ಪೌರನ ಗುರ್ತು ದೃಢೀಕರಿಸುವುದರಿಂದ ಭದ್ರತೆಯನ್ನು ಬಲಗೊಳಿಸಿ, ಅಕ್ರಮ ವಲಸೆಗಾರ ಪತ್ತೆ ಹಚ್ಚಲು ಸಹಾಯ ಮಾಡುತ್ತದೆ. ಎಲ್ಲಾ ರೀತಿಯ ಹಣಕಾಸಿನ ವಿವರಗಳು ಸಾರ್ವಜನಿಕ ಮಾಹಿತಿ ವಿವರಗಳು, ಇದರಿಂದ ದೃಢಗೊಳ್ಳುವುದರಿಂದ ಮೋಸ, ವಂಚನೆಗಳ ಪ್ರಕರಣಗಳಿಗೆ ಅವಕಾಶ ಇರುವುದಿಲ್ಲ.

## ಭಾರತದ ಧ್ವನಿಯನ್ನು ಜಗತ್ತು ಕೇಳಲಿ

ಭಾಜಪವು ಎಚ್ಚೆತ್ತ ಭಾರತವು ಎಲ್ಲಾ ದೇಶಗಳ ಹಾಗೂ ಅಂತರಾಷ್ಟ್ರೀಯ ಸಂಸ್ಥೆಗಳಲ್ಲಿ ತನ್ನ ಹಕ್ಕು ಸ್ಥಾಪನೆಯಿಂದಲೇ ತನ್ನ ಸ್ಥಾನ ಗುರುತಿಸಿಕೊಳ್ಳಬೇಕೆಂದು ಬಯಸುತ್ತದೆ.

ಭಾಜಪ ವಿವಿಧ ವಲಯ ಜಗತ್ತಿನ ತತ್ವದಲ್ಲಿ ನಂಬಿಕೆ ಇಟ್ಟುಕೊಂಡು ಈ ನಿಟ್ಟಿನಲ್ಲಿ ಯಾವುದೇ ದೇಶ ಮತ್ತೋರ್ವ ದೇಶದ ಮೇಲೆ ತನ್ನ ಹಕ್ಕು ಚಲಾಯಿಸದಿರುವಂತೆ ನೋಡಿಕೊಳ್ಳಬೇಕಿದೆ. ಆದರೆ ಎಲ್ಲಾ ದೇಶಗಳು ಪರಸ್ಪರ ಕೊಟ್ಟು ತೆಗೆದುಕೊಳ್ಳುವ ಸಮಾನಭಾವದಲ್ಲಿ ವ್ಯವಹರಿಸಲು ರಾಜತಾಂತ್ರಿಕತೆ ಸಾಧಿಸಬೇಕಿದೆ. ಭಾಜಪದ ವಿದೇಶಿ ನೀತಿಯು ನಮ್ಮ ದೇಶೀ ಭಾವನೆ ಹಾಗೂ ಇಚ್ಛೆಯನ್ನು ಬಿಂಬಿಸಬೇಕಿದೆ.

ಭಾಜಪವನ್ನು ಭಾರತ ಅಮೆರಿ ಸಂಬಂಧಗಳನ್ನು ಗೌರವಿಸಿ ಸದುದ್ದೇಶ ಪಾಲುದಾರಿಕೆಯಲ್ಲಿ ಸಮಾನತೆ ಕಾಯ್ದುಕೊಳ್ಳಲು ಇಚ್ಛಿಸುತ್ತದೆ. ರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ರಾಜಿ ಕಬೂಲು ಮಾಡಿಕೊಳ್ಳಲು ಇಷ್ಟಪಡುವುದಿಲ್ಲ. ಇತರೆ ದೇಶಗಳೊಂದಿಗೆ ಸಹ ಸ್ನೇಹ ಸಂಬಂಧಗಳನ್ನು

ಗಟ್ಟಿಪಡಿಸುವಲ್ಲಿ ರಾಷ್ಟ್ರೀಯ ಹಿತವನ್ನು ಬಲಿ ಕೊಡುವುದಿಲ್ಲ. ಈ ವಿಷಯದಲ್ಲಿ ಯುಪಿಎ ಕೈಗೊಂಡ ತಾರತಮ್ಯವನ್ನು ಸರಿಪಡಿಸುತ್ತದೆ.

ರಷ್ಯಾ ಹಾಗೂ ಮಧ್ಯ ಪ್ರಾಚ್ಯ ದೇಶಗಳೊಂದಿಗಿನ ಸಂಬಂಧಗಳನ್ನು ಮರು ಪರಿಶೀಲಿಸಿ ಪ್ರಸಕ್ತ ನೈಜ ಸನ್ನಿವೇಶದೊಡನೆ ಗರಿಷ್ಠ ಪರಸ್ಪರ ಉಪಯೋಗ ಪಡೆಯುವಂತೆ ಮರು ವಿನ್ಯಾಸಗೊಳಿಸುತ್ತದೆ.

ಅಂತೆಯೇ ಯೂರೋಪಿಯನ್ ಒಕ್ಕೂಟ, ಪಶ್ಚಿಮ ಏಷ್ಯಾ ದೇಶಗಳು, ದಕ್ಷಿಣ ಪೂರ್ವ ದೇಶಗಳೊಂದಿಗೆ ಮಧುರ ಸಂಬಂಧ ಬಯಸುತ್ತದೆ. ಅರಬ್ ದೇಶವಲ್ಲದೆ ಇಸ್ರೇಲ್‌ನೊಂದಿಗೂ ಸಂಬಂಧ ಸುಧಾರಣೆ ಕೈಗೊಂಡು ರಾಜತಾಂತ್ರಿಕ ಉಪಯೋಗವನ್ನು ವೃದ್ಧಿಸುವಂತೆ ಮಾಡುತ್ತದೆ.

ಚೀನಾದೊಂದಿಗೆ ಇರುವ ಗಡಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಲ್ಲಿ ಎನ್‌ಡಿಎ ತನ್ನ ಅವಧಿಯಲ್ಲಿ ಸಶಕ್ತ ಪ್ರಧಾನಿ ಎ.ಬಿ.ವಾಜಪೇಯಿಯವರು ತೆಗೆದುಕೊಂಡ ಕ್ರಮವು ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸಲು ತನ್ಮೂಲಕ ಇಂಡೋ, ಚೈನಾ ಪರಸ್ಪರ ಅಭಿವೃದ್ಧಿ, ಆರ್ಥಿಕ ಸಹಕಾರ ವರ್ಧಿಸಲು ಸಹಾ ಸಂಕಲ್ಪಿಸಿದೆ.

ಹೀಗೆಯೇ ಹಿಂದೂ ಮಹಾಸಾಗರ ಪ್ರದೇಶದಲ್ಲಿನ ಸನ್ನಿವೇಶಗಳಲ್ಲಿ ಭಾರತ ಪಾತ್ರ ನಿಶ್ಚಳವಾಗಿದ್ದು ಇದನ್ನು ಪರಿಣಾಮಕಾರಿಯಾಗಿ ಮುಂದುವರಿಸುತ್ತದೆ. ಭಾಜಪ ತನ್ನ ನೆರೆಹೊರೆ ರಾಜ್ಯಗಳಲ್ಲಿ ಸ್ನೇಹ ಸಂಬಂಧ ರೂಪಿಸಲು ದೃಢವಾಗಿದೆ. ರಾಜಕೀಯ ಸ್ಥಿರತೆ, ಅಭಿವೃದ್ಧಿ ಹಾಗೂ ಶಾಂತಿ ದೃಷ್ಟಿಯಿಂದ ಅತ್ಯಂತ ಅವಶ್ಯಕವಾಗಿದೆ. ಸಾರ್ಕ್ ಈ ಉದ್ದೇಶ ಸಾಧನೆಗೆ ಉಪಯುಕ್ತ ವೇದಿಕೆಯಾಗಿದೆ.

ಆದರೆ ಭಾಜಪ ಕೇವಲ ರಾಷ್ಟ್ರೀಯ ಹಿತಾಸಕ್ತಿಯನ್ನು ಮಾತ್ರ ಪರಿಗಣಿಸುತ್ತದೆ. ನೆರೆ ರಾಷ್ಟ್ರಗಳೊಂದಿಗೆ ಸಂಬಂಧ ಇದರ ಉದ್ದೇಶಗಳನ್ನು ಪುಷ್ಟೀಕರಿಸುತ್ತದೆ.

ಪಾಕಿಸ್ತಾನ: ಪಾಕಿಸ್ತಾನದೊಂದಿಗೆ ಶಾಂತಿ ಸ್ಥಾಪಿಸಲು ಸಮಗ್ರ ಮಾತುಕತೆ, ಪಾಕಿಸ್ತಾನವು

1) ಭೂಪ್ರದೇಶದಲ್ಲಿ ನಡೆಯುತ್ತಿರುವ ಭಯೋತ್ಪಾದಕತೆ ತಯಾರಿಕೆಯನ್ನು ತಡೆಯಬೇಕಿದೆ.

2) ಭಯೋತ್ಪಾದಕತೆಯಲ್ಲಿ ತೊಡಗುವ ಶಕ್ತಿಗಳು ಹಾಗೂ ಸಂಸ್ಥೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಿದೆ. ಅಂತಾರಾಷ್ಟ್ರೀಯ ಗಡಿ ಭಯೋತ್ಪಾದಕತೆಗೆ ಸಂಪೂರ್ಣ ಕಾಯಂ ತಡೆ ನೀಡಬೇಕು. ಇದು ದೇಶದ ಪಾಲಿಸಿ ಆಗಬೇಕು.

3) ಭಯೋತ್ಪಾದಕತೆ ಪ್ರೇರೇಪಿಸುವವರಿಗೆ ತನ್ನ ದೇಶದ ನೆಲ ಉಪಯೋಗ ನೀಡಬಾರದು.

4) ಭಾರತ ನೆಲದಲ್ಲಿ ವಿಧ್ವಂಸಕ ಕಾರ್ಯಗಳಲ್ಲಿ ಭಾಗಿಯಾದವರನ್ನು ಭಾರತಕ್ಕೆ ವಿಚಾರಣೆಗೆ ಒಪ್ಪಿಸಬೇಕು. ಭಯೋತ್ಪಾದಕ ಕೃತ್ಯಗಳನ್ನು ನಡೆಸಲು ಮಾರಣಾಸ್ತ್ರಗಳನ್ನು ಬಳಸಬಾರದು.

ನೇಪಾಳ:

ನೇಪಾಳದ ಸಂಬಂಧದಲ್ಲಿ ಯುಪಿಎ ಸ್ವಹಿತಾಸಕ್ತಿಯಿಂದ ರೂಪುಗೊಳಿಸಿದ ಕ್ರಮಗಳನ್ನು ಪುನರ್ ಪರಿಶೀಲಿಸುತ್ತದೆ. ನೇಪಾಳ, ಭಾರತ ಸಂಸ್ಕೃತಿ ಹಾಗೂ ಚರಿತ್ರೆಯನ್ನು ಪರಸ್ಪರ ಹಂಚಿಕೊಂಡಿದೆ. ಸ್ನೇಹ ಪರವಾದ ಸಹಕಾರ ಹಾಗೂ ಸೌಹಾರ್ದತೆಯ ಮೇಲೆ ನೇಪಾಳದೊಂದಿಗೆ ವ್ಯವಹರಿಸಲಾಗುವುದು. ಪರಸ್ಪರ ಹಿತಾಸಕ್ತಿಗಳನ್ನು ಮಾತುಕತೆ ಮೂಲಕ ದೃಢಪಡಿಸಿಕೊಳ್ಳಬೇಕು. ನೇಪಾಳದವರು, ದೃಢ, ಅಭಿವೃದ್ಧಿಶೀಲ ದೇಶವಾಗಲು ಭಾರತ ಬಯಸಿದ್ದು ಚಾರಿತ್ರಿಕ ಸಂಬಂಧಗಳ ಹಿನ್ನೆಲೆಯಲ್ಲಿ ಬಲಪಡಿಸಲು ಸಂಕಲ್ಪಿಸಿದೆ.

ಭೂತಾನ್: ಭೂತಾನ್‌ನೊಂದಿಗೆ ಇರುವ ಆಪ್ತ ಸಂಬಂಧಗಳನ್ನು ಬಲಪಡಿಸಲಾಗುವುದು.
ಬಾಂಗ್ಲಾದೇಶ: ಬಾಂಗ್ಲಾದೇಶದೊಂದಿಗೆ ಸಹಕಾರ ವೃದ್ಧಿಗೆ ಸ್ನೇಹಪೂರ್ವಕ ಸಹಾಯಗಳನ್ನು ಕೈಗೊಳ್ಳಲಾಗುವುದು. ಢಾಕಾದಲ್ಲಿ ಸ್ನೇಹಿ ಸರ್ಕಾರ ಭಾಜಪದ ಹಿತಾಸಕ್ತಿಗೆ ಪೂರಕವಾಗಿರುತ್ತದೆ.
ಶ್ರೀಲಂಕಾ: ಶ್ರೀಲಂಕಾ ತನ್ನ ನೆಲದಲ್ಲಿ ನಡೆಯುತ್ತಿರುವ ಭಯೋತ್ಪಾದಕತೆ ನಿಗ್ರಹಿಸಲು ಸಂಪೂರ್ಣ ಹಕ್ಕನ್ನು ಪ್ರತಿಪಾದಿಸಬೇಕೆಂದು ಭಾಜಪ ನಂಬಿರುತ್ತದೆ. ಅದೇ ಸಮಯದಲ್ಲಿ ಶ್ರೀಲಂಕಾ ಅಲ್ಪಸಂಖ್ಯಾತ ತಮಿಳು ಪ್ರದೇಶದ ಪ್ರಜೆಗಳ ರಾಜಕೀಯ ಆರ್ಥಿಕ ಹಾಗೂ ಮಾನಸಿಕ ಹಕ್ಕುಗಳನ್ನು ಕೊಲಂಬೋ ಸರ್ಕಾರ ರಕ್ಷಿಸಬೇಕಾಗಿದೆ. ಭಾಜಪ ಶ್ರೀಲಂಕಾದೊಡನೆ ದೃಢ ಸಂಬಂಧಗಳನ್ನು ಹೊಂದಲು ಕಳೆದ ವರ್ಷಗಳಲ್ಲಿ ಸಡಿಲವಾದ ಸಂಬಂಧಗಳನ್ನು ಬಲಗೊಳಿಸಲು ಕಟಿಬದ್ಧವಾಗಿದೆ.
ಆಫ್ಘಾನಿಸ್ತಾನ: ಭಾಜಪ ಆಫ್ಘಾನ್‌ರಿಗೆ ಸಹಾಯ ಹಸ್ತ ನೀಡಿ ಮಹತ್ವದ ಪುನರ್ ಸ್ಥಾಪನೆ ಹಾಗೂ ಸ್ಥಿರತೆ ತರುವಲ್ಲಿ ನೆರವಾಗಲು ಇಚ್ಛಿಸುತ್ತದೆ. ತಾಲಿಬಾನ್‌ಗಳು ಪಾಕಿಸ್ತಾನದ ಪ್ರದೇಶದಿಂದ ನಿರ್ದೇಶಿಸುವ ಕೃತ್ಯಗಳಿಂದ ಕಾಪಾಡಲು ಅಗತ್ಯ ಪೂರಕ ಸಹಾಯ ನೀಡಲು ಬಯಸುತ್ತದೆ. ಭಾಜಪ ಇತರೆ ಅಂತಾರಾಷ್ಟ್ರೀಯ ಸಂಸ್ಥೆಗಳೊಳಗೂಡಿ ಸ್ಥಿರ, ಅಭಿವೃದ್ಧಿಪರ ಭದ್ರತೆ ಒದಗಿಸುವ ಸಂಪೂರ್ಣ ಸಹಕರಿಸುತ್ತದೆ

ವಿದೇಶಗಳಲ್ಲಿರುವ ಭಾರತೀಯ ಸಂಜಾತರು

ಭಾಜಪ ಹೊರ ದೇಶಗಳಲ್ಲಿ ನೆಲೆಸಿರುವ ಭಾರತೀಯ ಸಂಜಾತರೊಡನೆ ಆಪ್ತ ಸಂಬಂಧ ಬೆಳವಣಿಗೆ ಬಯಸುತ್ತದೆ. ಹೊರ ದೇಶಗಳಲ್ಲಿ ನೆಲೆಸಿರುವ ಭಾರತೀಯರುಗಳ ಹಿತಾಸಕ್ತಿಗಳನ್ನು ಕಾಪಾಡಲು ಶ್ರಮಿಸುತ್ತಿದ್ದು ಈ ನಿಟ್ಟಿನಲ್ಲಿ 'ಪ್ರವಾಸಿ ಭಾರತೀಯ ದಿನ' ಆಚರಿಸಿ ಪ್ರವಾಸಿ ಭಾರತೀಯರು ತಮ್ಮ ಮೂಲ ನೆಲದೊಳಗಿನ ಬಾಂಧವ್ಯ ವೃದ್ಧಿಸಲು ವಿಶೇಷ ಪಿಐಓ ಕಾರ್ಡ್ ಹೊರತಂದಿದೆ. ಪ್ರವಾಸಿ ಭಾರತೀಯರನ್ನು ಗುರುತಿಸಿ ಸೂಕ್ತ ಸಮ್ಮತಿ ನೀಡಲು ಸಹಾ ಇಚ್ಛಿಸುತ್ತದೆ.

ಭಾರತದ ರಕ್ಷಣೆಗೆ ಯಾವುದೇ ರಾಜಿ ಇಲ್ಲ–ಯಾವುದೇ ರಿಯಾಯ್ತಿ ಇಲ್ಲ

ಭಾರತೀಯ ಭೂಸೇನೆ, ವಾಯುಸೇನೆ ಹಾಗೂ ನೌಕಾಸೇನೆಗಳನ್ನು ಬದಲಾದ ಪ್ರಾದೇಶಿಕ ಹಾಗೂ ಜಾಗತಿಕ, ಸಾಧ್ಯತೆಗಳ ಹಿನ್ನೆಲೆಯಲ್ಲಿ ಬಲಪಡಿಸಬೇಕಾಗಿದೆ. ದುರಾದೃಷ್ಟವಶಾತ್, ಕಾಂಗ್ರೆಸ್ ರಕ್ಷಣಾ ಪಡೆ ನಿರ್ವಹಣೆಯಲ್ಲಿ ಸಾಕಷ್ಟು ತಿರಸ್ಕಾರ ಭಾವದಿಂದ ನೋಡಲಾಗುತ್ತಿದೆ. ದೇಶದ ರಕ್ಷಣೆಯ ಪ್ರಮುಖ ಪಾತ್ರ ವಹಿಸುವ ವಿಷಯಗಳಲ್ಲಿ ಬಾಕಿ ಇರುವ ಎಲ್ಲಾ ಪ್ರಸ್ತಾವಗಳನ್ನು ಇತ್ಯರ್ಥಗೊಳಿಸಲಾಗುವುದು.

1) ಅತ್ಯಂತ ಪಾರದರ್ಶಕತೆ ಹಾಗೂ ಕಾಲಬದ್ಧ ಪದ್ಧತಿಯೊಡನೆ ಬಹಳ ಕಾಲದಿಂದ ಬಾಕಿ ಇರುವ ರಕ್ಷಣಾ ಉಪಕರಣಗಳನ್ನು ಪಡೆಯಲಾಗುವುದು.

2) ರಕ್ಷಣೆಗೆ ಗೊತ್ತುಪಡಿಸಿರುವ ಆಯವ್ಯಯವು ಯಾವುದೇ ಕಾರಣಕ್ಕೂ ಕಾಲಾವಧಿ ರದ್ದತಿಯಾಗದಂತೆ ಉಪಯೋಗಿಸಲಾಗುವುದು. ಕಳೆದ ಯುಪಿಎನ ಆಡಳಿತದ ಐದು ವರ್ಷಗಳಲ್ಲಿ 24 ಸಾವಿರ ಕೋಟಿ ರೂ.ಗಳ ಆಯವ್ಯಯ ನೀಡಿಕೆ ಲ್ಯಾಪ್ಸ್ ಆಗಿದ್ದು ನಮ್ಮ ದೇಶದ ಭದ್ರತೆ ಹಾಗೂ ಸೈನಿಕರ ಜೀವದ

ಮೇಲಿನ ಅಪಾಯಗಳನ್ನು ಭಾಜಪ ಮನಗಾಣುತ್ತದೆ ಹಾಗೂ ಅವರ ಹಿತಾಸಕ್ತಿ ಕಾಪಾಡುತ್ತಿದೆ. ಈ ನಿಟ್ಟಿನಲ್ಲಿ ಆಧುನಿಕ ಉಪಕರಣಗಳು ಪಡೆಯಬೇಕಾಗಿದೆ.

3) ನಮ್ಮ ಸೇನಾಸಿಬ್ಬಂದಿ ದೇಶ ಸೇವೆಗೆ ಮುಡಿಪಾಗಿರುವುದರಿಂದ ಅವರಿಗೆ ಉತ್ತಮ ವೇತನ ಹಾಗೂ ಅನುಕೂಲತೆಗಳನ್ನು ನೀಡಬೇಕಿದೆ. ಭಾಜಪ ಈ ನಿಟ್ಟಿನಲ್ಲಿ ಕೆಳಕಂಡ ಕ್ರಮಗಳಿಗೆ ಬದ್ಧವಾಗಿದೆ.

ಎ) ಸಿಬ್ಬಂದಿಗಳಿಗೆ ಬಾಕಿ ಇರುವ ವೇತನ ಅನುಕೂಲತೆಗಳನ್ನು ಮರುಪರಿಶೀಲಿಸಿ ಸೇವಾ ಸಿಬ್ಬಂದಿಯ ತೃಪ್ತಿಗನುಸಾರವಾಗಿ ರೂಪಿಸಲಾಗುವುದು. ಈ ಸಂಬಂಧ ಸೇನೆಗೆಂದೇ ಪ್ರತ್ಯೇಕ ವೇತನ ಆಯೋಗವನ್ನು ರಚಿಸಲು ಶೀಘ್ರ ಕ್ರಮ ವಹಿಸಲಾಗುವುದು.

ಬಿ) ಎಲ್ಲಾ ಸೇನಾ ಸಿಬ್ಬಂದಿ, ಭೂಸೇನಾ, ವಾಯುಸೇನಾ, ನೌಕಾಸೇನೆಯಲ್ಲಿ ಅರೆ ಮಿಲಿಟರಿ ಪಡೆಗಳ ವೇತನ ಸೌಲಭ್ಯಗಳ ಮೇಲಿನ ವರಮಾನ ತೆರಿಗೆಯಿಂದ ಮುಕ್ತಗೊಳಿಸಲಾಗುವುದು.

ಸಿ) ಸೇನಾ ಪ್ರಶಸ್ತಿಗಳಾದ ಪರಮವೀರ ಚಕ್ರವರ್ತಿ ಮೊದಲಾದ ಪ್ರಶಸ್ತಿಗಳ ಮೇಲಿನ ಗೌರವ ಸಂಭಾವನೆಯನ್ನು ರೂ. 500ರಿಂದ 3000 ಸಾವಿರ ರೂ.ವರೆಗೆ ಇದ್ದು ಇದನ್ನು ರೂ. 5000ದಿಂದ 30000 ಸಾವಿರ ರೂ.ಗಳವರೆ ಏರಿಸಲಾಗುವುದು.

ಡಿ) ಒಂದು ಹುದ್ದೆ, ಒಂದು ಪಿಂಚಣಿಯ ತತ್ವವನ್ನು ಅನುಷ್ಠಾನಕ್ಕೆ ತರಲಾಗುವುದು. ಹಾಲಿ ಸೇನೆಯಲ್ಲಿ ಸೇನಾಧಿಕಾರಿಗಳ ಕೊರತೆ ಇದ್ದು, ಯುವಕರು ಹಾಗೂ ಯುವತಿಯರು ಭಾರತೀಯ ಸೇನೆಗೆ ಸೇರುವುದಕ್ಕೆ ಉತ್ತೇಜನ ನೀಡಲು ಹಾಲಿ ಇರುವ ಸೌಲಭ್ಯಗಳನ್ನು ವೃದ್ಧಿಸಲಾಗುವುದು. ನಿವೃತ್ತ ಸೇನಾ ನೌಕರರಿಗೆ ಗೌರವಾನ್ವಿತ ಪುನರ್‌ವಸತಿ ನೀಡಲು ರಾಜ್ಯ ಸರ್ಕಾರಗಳಿಗೆ ಸೌಲಭ್ಯಗಳನ್ನು ಒದಗಿಸಲಾಗುವುದು.

4) ಸೇನೆಯಲ್ಲಿ ಹಾಲಿ ಇರುವ ಸಿಬ್ಬಂದಿ ಕೊರತೆ ನೀಗಿಸಲು ಸೇನಾ ವೃತ್ತಿಗಳನ್ನು ಆಕರ್ಷಕಗೊಳಿಸಲು ಕ್ರಮ ವಹಿಸಲಾಗುವುದು. ವೇತನ ಸೌಲಭ್ಯಗಳು ಪಿಂಚಣಿ ವ್ಯವಸ್ಥೆಗಳನ್ನು ಒಳಗೊಂಡಿದ್ದು ಕಾಲಬದ್ಧ ಅವಧಿಯಲ್ಲಿ ಜಾರಿಗೆ ತರಲಾಗುವುದು.

5) ಡಿಆರ್‌ಡಿಓ ಮೊದಲಾದ ಸೇನಾ ಸಂಬಂಧಿತ ಸಂಶೋಧನಾ ಸಂಸ್ಥೆಗಳ ಸಂಖ್ಯೆ ಗಾತ್ರವನ್ನು ಹೆಚ್ಚಿಸಲಾಗುವುದು. ಪಿಪಿಪಿಯ ಸೂಕ್ತ ಹೆಚ್ಚಳದಿಂದ ಸಾಂಪ್ರದಾಯಿಕ ರಕ್ಷಣಾ ಉತ್ಪತ್ತಿಯನ್ನು 2020 ಜಾಗತಿಕ ಮಾರುಕಟ್ಟೆ ಗಮನದಲ್ಲಿಟ್ಟುಕೊಂಡು ವಿಸ್ತರಿಸಲಾಗುವುದು.

ಸ್ವಾವಲಂಬಿಯಾದ ತಾಂತ್ರಿಕ ಪರಮಾಣು ಕಾರ್ಯಕ್ರಮ

ಭಾರತದ ಸಾರ್ವಭೌಮತೆಯ ಪ್ರತಿಪಾದನೆ

ಕಾಂಗ್ರೆಸ್ಸಿನ ಪರಮಾಣು ತಂತ್ರ ಕಾರ್ಯಕ್ರಮವು ಭಾರತದ ಹಿತಾಸಕ್ತಿಗೆ ಮಾರಕವಾಗಿದೆಯೆಂದು ಭಾಜಪದ ಅಭಿಪ್ರಾಯವಾಗಿದೆ. ಪ್ರೋಕ್ರಾನ್ II ರಿಂದ ಪಡೆದ ಹೆಚ್ಚಿನ ಲಾಭವನ್ನು ತದನಂತರ

ಭಾರತವನ್ನು ಹಿಡಿತದಲ್ಲಿ ತರಲು ಹಿಂಪಡೆದು ತದನಂತರ ಹಂತ ಹಂತವಾಗಿ ಕಡಿಮೆಗೊಳಿಸುವ ಹುನ್ನಾರಗಳಿಗೆ ಎಡೆಮಾಡಿಕೊಡಲಾಗುತ್ತಿದೆ.

ಭಾಜಪ ಇದನ್ನು ಪುನರ್ ಸ್ಥಾಪಿಸುತ್ತದೆ. ಭಾರತದ ಥೂರಿಯಂ ಸ್ವಾಯತ್ತ ತಂತ್ರಜ್ಞಾನವನ್ನು ವೃದ್ಧಿಗೊಳಿಸಿ ಆರ್ಥಿಕ ಸಹಯೋಗವೆಂಬ ಹೆಸರಿನ ಯು.ಪಿ.ಎ ಸರ್ಕಾರದ ತಪ್ಪುಗಳನ್ನು ಸರಿಪಡಿಸಿಕೊಳ್ಳಲಾಗುವುದು. ಕಾಂಗ್ರೆಸ್ ಇಂಡೋ–ಅಮೆರಿಕಾ ಸಿವಿಲ್ ನ್ಯೂಕ್ಲಿಯರ್ ಒಪ್ಪಂದವನ್ನು ಬಹು ಜನಪ್ರಿಯಗೊಳಿಸಲು ಉತ್ತೇಜನಕಾರಿ ಮಾರಾಟ ತಂತ್ರವಾಗಿಸಿ ಇದು ಭಾರತಕ್ಕೆ ಅತ್ಯವಶ್ಯಕವಾದರೂ ಇದರಿಂದ ಭಾರತದ ಎಲ್ಲಾ ಮನೆಗಳನ್ನು ಬೆಳಕಿನಿಂದ ಪ್ರಕಾಶಿಸುವದೆಂದು ತಿಳಿಸುತ್ತಾ ಎರಡು ಮುಖ್ಯ ವಿಷಯಗಳನ್ನು ಮುಚ್ಚಿಡುತ್ತಿದೆ. ಮಹಾಲೆಕ್ಕ ಪರಿಶೋಧಕರು ತಮ್ಮ ವರದಿಯಲ್ಲಿ ತಿಳಿಸಿರುವಂತೆ ಭಾರತ ಸರ್ಕಾರವು ತಮ್ಮಲ್ಲಿರುವ ಪರಮಾಣು ಇಂಧನವನ್ನು ಗುರುತಿಸಿ ಉಪಯೋಗಿಸುವಲ್ಲಿ ಯಾವುದೇ ಪ್ರಯತ್ನ ಮಾಡಿಲ್ಲ. ಹೀಗಾಗಿದ್ದಲ್ಲಿ ಈಗಿರುವುದಕ್ಕಿಂತ ಬಹಳಷ್ಟು ಹೆಚ್ಚಿನ ವಿದ್ಯುತ್‌ನ್ನು ನಮ್ಮ ಪರಮಾಣು ರಿಯಾಕ್ಟರುಗಳು ಒದಗಿಸುತ್ತಿದ್ದವು.

ಎರಡನೆಯದಾಗಿ ಪರಮಾಣು ವಿದ್ಯುತ್ ಉತ್ಪಾದನೆ ಬಹಳ ದುಬಾರಿಯಾದುದ್ದರಿಂದ ಸಾಮಾನ್ಯ ಜನರಿಗೆ ಇದು ಕೈಗೆಟುಕಲಾರದು ಎಂಬ ಅಂಶ ಕಡೆಗಣಿಸಿ ಯುಪಿಎ ಸರ್ಕಾರ ಸ್ವಾವಲಂಬಿ ಪರಮಾಣು ಇಂಧನ ಹೊರತರುವುದರಲ್ಲಿ ಅಗತ್ಯ ಕ್ರಮ ವಹಿಸಲಿಲ್ಲ. ಭಾರತವನ್ನು ಸಶಕ್ತಗೊಳಿಸುವುದಕ್ಕಿಂತ ದುರ್ಬಲಗೊಳಿಸುವುದಕ್ಕೆ ಅಮೆರಿಕಾದಿಂದ ಸರಬರಾಜು ತಂದು ಈ ನಿಟ್ಟಿನಲ್ಲಿ ಪಾಕಿಸ್ತಾನದಂತೆ ಸ್ವನೀತಿಯಿಂದ ಮುಕ್ತವಾದಂತಹ ಸನ್ನಿವೇಶ ಉಂಟು ಮಾಡಿಲ್ಲ.

ಭಾಜಪದ ಇನ್ನೊಂದು ಮುಖ್ಯ ಬದ್ಧತೆ ನಿಷ್ಯಸ್ತ್ರೀಕರಣ ತಡೆ. ಈ ಬಗ್ಗೆ ನಮ್ಮದೇ ಪರಮಾಣು ನೀತಿ ಇದ್ದು ಈ ಕೆಳಕಂಡ ಅಂಶಗಳಲ್ಲಿ ಅಡಕವಾಗಿದೆ.

1) ಎಲ್ಲಾ ಸ್ವಇಚ್ಛೆಯು ಮುಕ್ತವಾಗಿದ್ದು ಎಲ್ಲಾ ರೀತಿಯ ಅಗತ್ಯ ಕ್ರಮಗಳಿಂದ ಪ್ರಜಾ ಸಮುದಾಯ ಹಾಗೂ ರಕ್ಷಣಾ ಪರಮಾಣು ಕಾರ್ಯಕ್ರಮಗಳ ತಾಂತ್ರಿಕ ಅಭಿವೃದ್ಧಿಗೆ ಪೂರಕವಾಗಿರುತ್ತದೆ.

2) ಬದಲಾಗುತ್ತಿರುವ ಜಾಗತಿಕ ಪರಿಸ್ಥಿತಿಯಲ್ಲಿ ವಿಶ್ವಾಸಯೋಗ್ಯ ಕನಿಷ್ಠ ಪರಮಾಣು ಅಸ್ತ್ರಗಳನ್ನು ಹೊಂದುವ ಹಕ್ಕಿನ ಪ್ರತಿಪಾದನೆ.

3) ಸಿಟಿ ಬಿಟಿ, ಎಫ್‌ಎಂಸಿಆರ್ ಹಾಗೂ ಎಂಟಿಸಿಆರ್ ಅಂತಹ ನಿರ್ಬಂಧ ಹೇರುವ ವಿಷಯಗಳ ಮಂಡನೆ ಅನುಷ್ಠಾನ ಮಾಡಲು ಎಲ್ಲಾ ಪಕ್ಷಗಳ ಒಪ್ಪಿಗೆಯನ್ನು ಪಡೆಯಬೇಕಿದೆ.

ಗೌಪ್ಯ ವಿಷಯಗಳ ಹೆಸರಿನಲ್ಲಿ ಕಾಂಗ್ರೆಸ್ ಹಾಗೂ ಪ್ರಧಾನಿ ಜಾರಿಗೆ ತಂದ ಇಂಡೋ–ಅಮೆರಿಕಾ ಒಪ್ಪಂದದ ಹಿನ್ನೆಲೆಯಲ್ಲಿ ಭಾಜಪ ಸಂವಿಧಾನ ತಿದ್ದುಪಡಿ ತಂದು ಸರ್ಕಾರ 2/3 ಭಾಗದ ಪಾರ್ಲಿಮೆಂಟ್ ಬಹುಮತದೊಡನೆ ಎಲ್ಲಾ ದ್ವಿ ಹಾಗೂ ಬಹುಪಕ್ಷ ಒಪ್ಪಂದಗಳನ್ನು ಮುಖ್ಯವಾಗಿ ನೀತಿ ಸಂಬಂಧಿತ ಕಾರ್ಯಕ್ರಮಗಳ ಪ್ರಾದೇಶಿಕ ಸಮಗ್ರತೆ ಹಾಗೂ ವಿತ್ತೀಯ ವಿಷಯಗಳಲ್ಲಿ ಮಾನ್ಯ ಮಾಡುವಂತೆ ಭಾಜಪ ಸಾಂವಿಧಾನಿಕ ಕ್ರಮ ವಹಿಸಲಾಗುವುದು.

ಆಹಾರ ಭದ್ರತೆ– ಭಾರತವನ್ನು ಹಸಿವು ಮುಕ್ತವನ್ನಾಗಿಸುವುದು

ಭಾಜಪ ಆಹಾರ ಭದ್ರತಾ ವಿಷಯವನ್ನು ದೇಶದ ಭದ್ರತೆಗೆ ಪೂರಕ ಅಂಶವಾದುದ್ದೆಂದು ಪ್ರತಿಪಾದಿಸುತ್ತದೆ. ಆಹಾರ ಕೊರತೆ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಕಾಡಿಸುತ್ತಿರುವ ಸಮಸ್ಯೆಯಾಗಿ

ಹೊರಹೊಮ್ಮುತ್ತಿದೆ. 'ಕೃಷಿ' ಕಾಂಗ್ರೆಸ್ ಸರ್ಕಾರ ನಿರ್ಲಕ್ಷಿಸಿದ ವಿಭಾಗವಾಗಿದ್ದು ಭಾರತವು ಆಹಾರ ಕೊರತೆಯ ಕೂಪದತ್ತ ಧಾವಿಸುತ್ತಿದೆ.

ಭಾರತ ಇತ್ತೀಚೆಗೆ ಕೃಷಿ ವಸ್ತುಗಳ ಆಮದು ಮಾಡಿಕೊಳ್ಳುತ್ತಿರುವುದರಿಂದ ಆಹಾರ ಭದ್ರತೆ ಆತಂಕಕಾರಿಯಾಗುತ್ತಿದೆ. ಇದರಲ್ಲಿ ಮೂರು ಮುಖ್ಯ ವಿಷಯಗಳು ಅಡಗಿದ್ದು ಸಾಮಾನ್ಯ ಜನರಿಗೆ ಆಹಾರ ವಿಷಯದಲ್ಲಿ ಅಭದ್ರತೆ ಉಂಟು ಮಾಡತತಕ್ಕದ್ದಾಗಿದೆ. ಮೊದಲನೆಯದಾಗಿ ಕಾರ್ಮಿಕರು ಹಾಗೂ ರೈತರ ನೈಜ ವರಮಾನವು ಆಹಾರ ಬೆಲೆ ಏರಿಕೆಗೆ ಏರದೇ ಇರುವುದು ಇದರಿಂದ ಈ ವರ್ಗದ ಖರೀದಿ ಶಕ್ತಿ ಕಡಿಮೆಯಾಗಿರುವುದು. ಸಾರ್ವಜನಿಕ ವಿತರಣಾ ವ್ಯವಸ್ಥೆ ಅಧಿಕಾರಾವಧಿಯಲ್ಲಿ ಕುಂಠಿತವಾಗಿ ಆಹಾರ ಧಾನ್ಯಗಳ ಆಮದಿಗೆ ಅವಕಾಶ ಮಾಡಿಕೊಟ್ಟು ಆಹಾರ ಬೆಲೆ ಏರಲು ಕಾರಣವಾಗಿದೆ.

ಮಾರನೆಯದಾಗಿ 55 ದಶಲಕ್ಷ ಜನರು ಕಳೆದ ಐದು ವರ್ಷಗಳಲ್ಲಿ ಬಡತನದ ರೇಖೆಗಿಂತ ಕೆಳಗಿಳಿದ ವಿಭಾಗಕ್ಕೆ ಸೇರ್ಪಡೆಯಾಗಿರುವುದರಿಂದ ಇವರುಗಳು ಪೌಷ್ಠಿಕಾಂಶದ ಕೊರತೆ ಅನುಭವಿಸುತ್ತಿದ್ದಾರೆ.

ಅಲ್ಲದೆ ಜಾಗತಿಕ, ಆರ್ಥಿಕ, ಹಿಂಜರಿತ ಈ ಸಮಸ್ಯೆಯನ್ನು ಅದರಲ್ಲೂ ಅಸಂಘಟಿತ ವರ್ಗದ ಜನರಿಗೆ ಅಪಾರ ಹಾನಿಯನ್ನುಂಟು ಮಾಡಿದೆ.

ಭಾಜಪ ಆಹಾರ ಜನರ ಹಕ್ಕು ಎಂದು ಪ್ರತಿಪಾದಿಸುತ್ತಾ ಆಹಾರ ಭದ್ರತೆ ಹಾಗೂ ಹಸಿವು ನಿವಾರಣೆ ಬಗ್ಗೆ ಕ್ರಮ ವಹಿಸಿದೆ.

1) ಪ್ರತಿ ಬಿಪಿಎಲ್ ಕುಟುಂಬಕ್ಕೆ ಕೆಜಿ ಒಂದಕ್ಕೆ 2 ರೂ.ನಂತೆ ಒಟ್ಟು 35 ಕೆಜಿ ಅಕ್ಕಿ ಅಥವಾ ಗೋಧಿಯನ್ನು ಅಂತ್ಯೋದಯ ಅನ್ನ ಯೋಜನಾ ಮುಂದುವರಿಕೆ ಕಾರ್ಯಕ್ರಮದಲ್ಲಿ ನೀಡಲು ಉದ್ದೇಶಿಸಿ ಹಿಂದೆ ಪಡೆದುಕೊಳ್ಳುವಂತಹ ಆಹಾರ ಕೂಪನ್‌ಗಳ ಮೂಲಕ ಸಾರ್ವಜನಿಕರ ವಿತರಣಾ ವ್ಯವಸ್ಥೆ ಹಾಗೂ ಖಾಸಗಿ ಡಿಪೋಗಳಿಂದ ಈ ಯೋಜನೆ ಕೈಗೊಳ್ಳಲಾಗುವುದು.

2) ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಹೆಚ್ಚು ವಿಸ್ತಾರಗೊಳಿಸಿ ಎಲ್ಲರಿಗೂ ಉಪಯೋಗವಾಗುವಂತೆ ಕಾರ್ಯ ನಿರ್ವಹಿಸಲು ಅನುದಾನವನ್ನೂ ನೀಡುವುದು.

3) ಆದಷ್ಟು ಹೆಚ್ಚು ಹೆಚ್ಚು ಕುಟುಂಬಗಳ ಬಿಪಿಎಲ್ ಮಟ್ಟಕ್ಕೆ ಇಳಿಯದಿರುವಂತೆ ಕ್ರಮ ವಹಿಸುವುದು.

4) ಅತೀ ಹಿಂದುಳಿದ ಪ್ರದೇಶಗಳಲ್ಲಿ ಎನ್‌ಜಿಓ ಗಳ ಮೂಲಕ ಹಂಚಿಕೊಳ್ಳುವ ಅನುದಾನದ ಮೇರೆಗೆ ಸಾರ್ವಜನಿಕ ಆಹಾರ ತಯಾರಿಕಾ (ಅಡಿಗೆ ಮನೆ) ಘಟಕ ನಿರ್ಮಾಣ ಮಾಡುವುದು.

5) ಪೌಷ್ಠಿಕಾಂಶ ಕೊರತೆ ಎದುರಿಸಲು ಮಧ್ಯಾಹ್ನದ ಊಟ ವ್ಯವಸ್ಥೆಯನ್ನು ಹೆಚ್ಚು ಹೆಚ್ಚು ಸಮರೋಪಾದಿಯಲ್ಲಿ ಕೈಗೊಳ್ಳುವುದು.

6) ದ್ವಿದಳ ಧಾನ್ಯಗಳ ಉತ್ಪತ್ತಿಗೆ ಪ್ರೋತ್ಸಾಹ ನೀಡುವುದು. ಫಲವತ್ತಾದ ಜಮೀನನ್ನು ಔದ್ಯೋಗಿಕ ಕಾರಣಗಳಿಗೆ ಬದಲಾಯಿಸುವುದನ್ನು ವಿರೋಧಿಸುವುದು.

7) ಅಗತ್ಯ ಆಹಾರ ಧಾನ್ಯಗಳನ್ನು ಸಂಗ್ರಹಿಸಿ ಆಹಾರ ಸಮಸ್ಯೆ ಉಂಟಾದಾಗ ಆಮದು ತಪ್ಪಿಸಲು ಹಾಗೂ ಜನರ ಸಂಕಷ್ಟ ಸಮಯದಲ್ಲಿ ಬಿಡುಗಡೆ ಮಾಡುವುದು.

ವಿದ್ಯುತ್ ರಕ್ಷಣೆ

ಭವಿಷ್ಯದ ಸಂಕಷ್ಟಗಳಿಂದ

ಶಕ್ತಿ ಮೂಲ ಅಗತ್ಯತೆಯನ್ನು ಭಾರತ ಇನ್ನು ಮುಂದೂಡಲಾಗದು. ಕಾಂಗ್ರೆಸ್ ಈ ವಿಷಯದಲ್ಲಿ ನಿರ್ಲಕ್ಷ್ಯದಿಂದ ವರ್ತಿಸುತ್ತಿದೆ. ಶಕ್ತಿ ಮೂಲ ಉತ್ಪಾದನೆಯಲ್ಲಿ ನಮ್ಮ ನೆರೆ ರಾಜ್ಯ ಚೀನಾ ಹೆಚ್ಚು ಸಾಧನೆ ಮಾಡಿದೆ. ಈಗಿನ ಮುಂದಿನ ಸಂಕಷ್ಟ ದಿನಗಳಿಗೆ ಶಕ್ತಿ ಮೂಲಗಳ ಅಗತ್ಯತೆ ಭದ್ರಗೊಳಿಸಬೇಕಾಗಿದೆ.
ಪ್ರಸಕ್ತ ಅಗತ್ಯ ತೈಲ ಮತ್ತು ಅನಿಲ ಪೂರೈಕೆಗೆ ಆಮದು ಮೂಲಕವೇ ಕ್ರಮ ವಹಿಸಲಾಗುತ್ತಿದೆ. ನಮ್ಮ ತಲೆವಾರು ಇಂಧನ ಅಗತ್ಯ ಜಾಗತಿಕ ಅಗತ್ಯದ 1/6 ಭಾಗ ಮಾತ್ರ ಇದೆ. 67 ಪ್ರತಿಶತ ಇಂಧನವು ಕಲ್ಲಿದ್ದಲು ಮೂಲವಾಗಿದೆ. ಅದರಲ್ಲೂ 70 ಭಾಗ ಆಮದಾಗಬೇಕು. 2008ರಲ್ಲಿ ಆದಂತಹ ದರದಲ್ಲಿನ ಏರುಪೇರು ಹಾಗೂ ಮೋಸದ ಲೆಕ್ಕಾ ಜಾಲವನ್ನು ಬಾಹ್ಯ ಮೂಲಗಳಿಂದ ಎದುರಿಸಬೇಕಾಗಿದೆ.
ಭಾಜಪ ಅತಿ ಮುಖ್ಯವಾದ ಅಸಂಪ್ರದಾಯಿಕ, ಶುದ್ಧ ಇಂಧನ ಮೂಲಗಳನ್ನು ಪ್ರತಿಪಾದಿಸುತ್ತದೆ. ವಿದ್ಯುಚ್ಛಕ್ತಿ ಉತ್ಪಾದನೆಗೆ ಮಹತ್ವ. ಈ ರೀತಿಯ ಮೂಲಗಳಿಗೆ ನೀಡಬೇಕಿದೆ.
ಭಾಜಪ ಇನ್ನು ಐದು ವರ್ಷದಲ್ಲಿ 1.20 ಲಕ್ಷ ಮೆಗಾವ್ಯಾಟ್‌ನಷ್ಟು ವಿದ್ಯುತ್ ಉತ್ಪಾದನೆ ಗುರಿಯನ್ನು ಇಟ್ಟುಕೊಂಡಿದೆ ಅದರಲ್ಲಿ ಶೇ. 20 ಭಾಗ ಮರುಪೂರೈಕೆ ಮೂಲದಿಂದಲೇ ಬರಬೇಕಿದೆ. ಇದರಂತೆ ಪೆಟ್ರೋಲ್ ಹಾಗೂ ಡೀಸೆಲ್‌ಗಳಿಗೆ ಪರಿಹಾರವಾಗಿ ಇತರ ಮೂಲಗಳನ್ನು ಹೊಂದಲು ಒತ್ತು ನೀಡಲು ತನ್ಮೂಲಕ ಆಮದು ತೈಲ ಹಾಗೂ ಅನಿಲಗಳಿಂದ ಉಂಟಾಗುವ ಪರಿಸರ ರಕ್ಷಣೆ ಕೈಗೊಳ್ಳಲಾಗುವುದು.
ಅಂತೆಯೇ ಸಂಶೋಧನಾತ್ಮಕ ತಾಂತ್ರಿಕ ಹಾಗೂ ಅದರ ಪ್ರಾಯೋಗಿಕತೆ ಪ್ರೋತ್ಸಾಹ ನೀಡಲಾಗುವುದು. ಮರು ಉಪಯೋಗಿಕವಾದ ಸೌರಶಕ್ತಿಯನ್ನು, ಗಾಳಿ–ಹರಿಯುವ ನದಿಯ ಜಲಶಕ್ತಿ ಅಲ್ಲದೆ ಜೈವಿಕ ಇಂಧನಗಳಲ್ಲಿ ಸಂಶೋಧನೆ ಬಹುಮಾನಿಸಲಾಗುವುದು.
ಅಸಂಪ್ರದಾಯಿಕ ಶಕ್ತಿ ಮೂಲಗಳಿಂದ ಶಕ್ತ ಉತ್ಪಾದಿಸಿ ಅದನ್ನು ಪವರ್ ಗ್ರೀಡ್‌ಗಳಲ್ಲಿ ಸಂಗ್ರಹಿಸಿ ಅಗತ್ಯ ಬಂದಾಗ ಉಪಯೋಗಿಸುವ ಕ್ರಮಕ್ಕೆ ಆದ್ಯತೆ ನೀಡಲಾಗುವುದು.

ರಾಷ್ಟ್ರೀಯ ಆರ್ಥಿಕತೆಯ ಪುನರ್ ಜೀವನ

ಜಾಗತಿಕ ಹಿಂಜರಿತದಿಂದ ಉದ್ಯೋಗ

ಉತ್ಪಾದನಾ ಬೆಳವಣಿಗೆ ಕಡೆಗೆ ನಡಿಗೆ

ಯುಪಿಎ ಸರ್ಕಾರದ ದುರಾಡಳಿತ, ವಿತ್ತೀಯ ಅಶಿಸ್ತು, ಈ ಮುಂಚೆ ಎನ್‌ಡಿಎ ಸಾಧಿಸಿದ ಅಭೂತ ಲಾಭಗಳನ್ನು ನಿಷ್ಕ್ರಿಯಗೊಳಿಸಿದೆ. ಬೆಳವಣಿಗೆ ದರದಲ್ಲಿ ನಿಧಾನವಾಗಿ ಜನಸಾಮಾನ್ಯರ ಮೇಲೆ ಇದರ ಪರಿಣಾಮವಾಗಿದೆ. ಯುಪಿಎ ಸರ್ಕಾರ ಹಾಗೂ ಪೂರೈಕೆ ಬತ್ತಿಸಿರುವುದರಿಂದ ಸಂಘಟಿತ ಹಾಗೂ ಅಸಂಘಟಿತ ವರ್ಗಗಳನ್ನು ಆತಂಕಕ್ಕೀಡು ಮಾಡಿದೆ. ಇದೀಗ ಎಚ್ಚೆತ್ತುಕೊಂಡಿರುವ ಸರ್ಕಾರ ತಪ್ಪಾದ ನೀತಿಯನ್ನು ಮರಳಿ ಹಳಿಯ ಮೇಲೆ ತರಲು ಪ್ರಯತ್ನಪಡುತ್ತಿದೆಯಾದರೂ ಇದು ಸಂಪೂರ್ಣ ಮನಸ್ಸಿನಿಂದಾಗದೆ ಅರ್ಧ ಮನಸ್ಸಿನಿಂದಾಗಿರುವುದರಿಂದ ಇದು ಸಾರ್ಥಕತೆ ಪಡೆಯಲಾಗಿಲ್ಲ. ಸಂದಿಗ್ಧ ವಿಷಯ ನಿಶ್ಚಿತ ಧೋರಣೆ ನಿರೀಕ್ಷಿಸುತ್ತಿದ್ದು ಸರ್ಕಾರದ ನೇರ ಹಾಗೂ ಎಲ್ಲರಿಗೂ ಕಾಣಿಸುವಂತೆ ಮಧ್ಯಪ್ರವೇಶ ಅಗತ್ಯವಿದೆ. ಭಾಜಪ ಈ ಸಂಬಂಧ ದೃಢ ನೀತಿಯಿಂದ ಕೆಳ ಸರಿದು ಹೋಗುತ್ತಿರುವ ಆರ್ಥಿಕ ಕುಸಿತದಿಂದ ಮೇಲೇರಿಸಲು ಉದ್ಯೋಗ ಸೃಷ್ಟಿ ಮೂಲಕ ಅಭಿವೃದ್ಧಿ ಸಾಧಿಸಲು ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ.

1) ಕಡಿಮೆ ತೆರಿಗೆ, ಕಡಿಮೆ ಬಡ್ಡಿ ಪದ್ಧತಿಯಿಂದ ಜನರಲ್ಲಿ ಹೆಚ್ಚು ಹಣ ಹೂಡಿಕೆ ಹಾಗೂ ಖರೀದಿ ಶಕ್ತಿ ಉತ್ಪಾದನೆ ತನ್ಮೂಲಕ ಆರ್ಥಿಕ ಚೇತರಿಕೆ.

2) ವರಮಾನ ತೆರಿಗೆ ಪಾವತಿಗೆ ಮೂರು ಲಕ್ಷ ರೂ.ಗಳವರೆಗೆ ವಿನಾಯ್ತಿ, ಮಹಿಳೆಯರು, ಹಿರಿಯ ನಾಗರೀಕರಿಗೆ ಹೆಚ್ಚುವರಿ 50 ಸಾವಿರದವರೆಗೆ ವಿನಾಯ್ತಿ ನೀಡುವುದು.

3) ಹಿರಿಯ ನಾಗರಿಕರ ಎಲ್ಲಾ ರೀತಿಯ ವರಮಾನವನ್ನು ವರಮಾನ ತೆರಿಗೆಯಿಂದ ಮುಕ್ತಗೊಳಿಸುವುದು.

4) ಉಳಿತಾಯವನ್ನು ಪ್ರೋತ್ಸಾಹಿಸಲು ಎಲ್ಲಾ ರೀತಿಯ ಬ್ಯಾಂಕ್ ಠೇವಣಿ ಮೇಲಿನ ಬಡ್ಡಿಯನ್ನು ಕಾರ್ಪೋರೇಟ್‌ಗಳು ಹಾಗೂ ವ್ಯಾಪಾರಿ ವರಮಾನ ಹೊರತುಪಡಿಸಿ ತೆರಿಗೆ ಮುಕ್ತಗೊಳಿಸುವುದು.

5) ಕೃಷಿ ಮೂಲ ವರಮಾನ ತೆರಿಗೆಯನ್ನು ಇತರ ಮೂಲದ ತೆರಿಗೆಗಳಿಂದ ಬೇರ್ಪಡಿಸಿ ಕೇವಲ ಇತರೆ ಮೂಲಗಳಿಂದ ಬರುವ ವರಮಾನವನ್ನು ತೆರಿಗೆಗಾಗಿ ಪರಿಗಣಿಸುವುದು.

6) ಕೇಂದ್ರ ಮೂಲ ತೆರಿಗೆ ತೆಗೆದು ಹಾಕುವುದು. ಜಿಎಸ್‌ಟಿಯನ್ನು 12–15 ಶೇ. ಸರಳೀಕರಣಗೊಳಿಸುವುದು. ಎಫ್‌ಬಿಟಿ ತೆಗೆದು ಹಾಕುವುದು. ಇಎಸ್‌ಒಪಿಎಸ್ ಮತ್ತು ಎಂಎಟಿ ತೆರಿಗೆ ಪದ್ಧತಿಯನ್ನು ಸರಳೀಕರಿಸುವುದು ಮತ್ತು ಸರಿಸಮಗೊಳಿಸುವುದು.

7) ದೇಶದಲ್ಲಿರುವ ಕಪ್ಪು ಹಣ ಚಲಾವಣೆಯ ಮೇಲೆ ಹಿಡಿತದ ಮೂಲಕ ಕನಿಷ್ಠಗೊಳಿಸುವುದು. ಸ್ವಿಸ್ ಬ್ಯಾಂಕ್‌ಗಳಲ್ಲಿ ಅಕ್ರಮವಾಗಿ ಹೂಡಿಕೆಯಾಗಿರುವ ಕಪ್ಪು ಹಣ ಸರಿ ಸುಮಾರು 25–75 ಲಕ್ಷ ಕೋಟಿ ರೂ.ಗಳನ್ನು ವಾಪಸ್ಸು ತರಿಸಿ ಮೂಲ ಅಭಿವೃದ್ಧಿ ಕಾರ್ಯಗಳಲ್ಲಿ ಹೂಡಿಕೆ, ವಸತಿ, ಆರೋಗ್ಯ ಹಾಗೂ ಸಮಾಜ ಕಲ್ಯಾಣ ಕಾರ್ಯಕ್ರಮಗಳಲ್ಲಿ ತೊಡಗಿಸುವುದು.

8) ಉದ್ಯೋಗ ಕಡಿತದ ಮರುಚಾಲನೆಗೊಳಿಸುವುದು. ಇದು ನಿರುದ್ಯೋಗಕ್ಕಿಂತ ಹೆಚ್ಚು ಸಮಸ್ಯೆಯಾಗಿರುವುದರಿಂದ ಹೆಚ್ಚು ಹೆಚ್ಚು ಸರ್ಕಾರಿ ಸ್ವಾಮ್ಯದ ಹೂಡಿಕೆ ಮೂಲಕ ಉದ್ಯೋಗ ಸೃಷ್ಟಿ ಮೂಲ ಸ್ವತ್ತು ಬೆಳವಣಿಗೆ ಕಟ್ಟಡಗಳು, ರಸ್ತೆಗಳು ಹಾಗೂ ಹೆದ್ದಾರಿಗಳು ಹಾಗೂ ನದಿಗಳ ಜೋಡಣೆಯಂತಹ ಬೃಹತ್ ಕಾರ್ಯಕ್ರಮಗಳಲ್ಲಿ ತೊಡಗಿಸುವುದು.

9) ಜಾಗತಿಕ ಆರ್ಥಿಕ ಕುಸಿತದಿಂದ ಬಳಲುತ್ತಿರುವ ಹಿಂದೂಸ್ತಾನ ಡೈಮಂಡ್ ಕಾರ್ಪೋರೇಷನ್‌ಗೆ ಸೂಕ್ತ ಪ್ರೋತ್ಸಾಹ ನೀಡಿ ಇದರ ಚೇತರಿಕೆಗೆ ಸಹಾಯ ತನ್ಮೂಲಕ ಕಚ್ಚಾ ವಜ್ರದ ಪೂರೈಕೆ ನೀಡಿ

ಅದನ್ನು ಕಡಿದು ಪಾಲಿಷ್‌ಗೈಯುವ ವಿಭಾಗಗಳಿಗೆ ಒದಗಿಸುವುದು ಹಾಗೂ ಮುಂದಿನ ವ್ಯಾಪಾರಕ್ಕಾಗಿ ಬ್ಯಾಂಕ್ ಸೌಲಭ್ಯ ನೀಡುವುದು.

10) ಹೆದ್ದಾರಿ ನಿರ್ಮಾಣ ಎನ್‌ಡಿಎ ಅಧಿಕಾರದಲ್ಲಿ ಪ್ರಬುದ್ಧ ಬೆಳವಣಿಗೆ ಕಂಡಿದ್ದು ಅದು ಈಗಿನ ಎನ್‌ಡಿಎ ಕಾರ್ಯಕ್ರಮಗಳಲ್ಲಿ ಮುಖ್ಯಸ್ಥಾನ ಪಡೆದಿದೆ. ಪ್ರತಿದಿನ 15–20 ಕಿಲೋ ಮೀಟರ್ ಹೆದ್ದಾರಿ ನಿರ್ಮಿಸಲಾಗುವುದು.

11) ಪ್ರಧಾನಮಂತ್ರಿಗಳ ಗ್ರಾಮ ಸಡಕ್ ಯೋಜನೆದಂತಹ ಬೃಹತ್ ಗ್ರಾಮೀಣ ರಸ್ತೆ ಜೋಡಣೆ ಕಾರ್ಯಕ್ರಮ ಎನ್‌ಡಿಎ ಹಮ್ಮಿಕೊಂಡಿದ್ದು ಇನ್ನು 3 ವರ್ಷಗಳಲ್ಲಿ ಪೂರ್ತಿಗೊಳಿಸಲಾಗುವುದು.

12) ಗೃಹ ನಿರ್ಮಾಣ ಬಡ್ಡಿ ದರವನ್ನು ಕಡಿಮೆಗೊಳಿಸುವುದರಿಂದ ವಸತಿ ಎಲ್ಲರಿಗೂ ಲಭ್ಯವಾಗುವಂತೆ ಹಾಗೂ ಈಗ ಸ್ಥಗಿತಗೊಂಡಿರುವ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಚೇತರಿಕೆ ನೀಡಿ ಉದ್ಯೋಗ ನಾಶವನ್ನು ತಡೆಯುವುದು.

13) ಉತ್ಪಾದನಾ ವಲಯಕ್ಕೆ ಸಾಲ ಸೌಲಭ್ಯ ನೀಡಿ ಉತ್ತೇಜನ ನೀಡುವುದು.

14) ಸಣ್ಣ ಹೂಡಿಕೆ ಹಾಗೂ ರೀಟೈಲ್ ವ್ಯಾಪಾರಿಗಳನ್ನು ಉತ್ತೇಜಿಸಿ ತನ್ಮೂಲಕ ಉದ್ಯೋಗ ಸೃಷ್ಟಿ ಹಾಗೂ ರಾಷ್ಟ್ರೀಯ ಆರ್ಥಿಕತೆಗೆ ಅರ್ಥಪೂರ್ಣ ಕೊಡುಗೆ ನೀಡುವಂತೆ ಮಾಡುವುದು. ಸಣ್ಣ ಕೈಗಾರಿಕೆ, ಹೂಡಿಕೆದಾರರ ನಿಷ್ಕರ್ಷ ಮರು ವಿಚಾರ ಮಾಡಿ ಪುನರ್ ನಿಷ್ಕರ್ಷಿಸುವುದು.

15) ಸುಧಾರಣೆಗಳ ಮೂಲಕ ಉತ್ಪಾದನೆಗಳನ್ನು ಹೆಚ್ಚಿಸಿ ಹೆಚ್ಚಿಸಿ ಬಂಡವಾಳ ಸೃಷ್ಟಿಸುವುದು.

16) ಪ್ರವಾಸೋದ್ಯಮಕ್ಕೆ ಚೈತನ್ಯ ನೀಡಲು 50 ಪ್ರವಾಸ ಸ್ಥಳಗಳನ್ನು ನಿಗದಿಗೊಳಿಸಿ ಅಲ್ಲಿಗೆ ಮೂಲ ಸ್ವತ್ತು ನಿರ್ಮಾಣ ಹಾಗೂ ಸಂಪರ್ಕ ನಿರ್ಮಾಣ ಮಾಡುವುದು. ಈಗಿರುವ ಪ್ರವಾಸಿಗರ ಸಂಖ್ಯೆಯನ್ನು ದ್ವಿಗುಣಗೊಳಿಸುವುದು.

17) ಭಾರತದಲ್ಲಿ ವ್ಯಾಪಾರ ನಿರ್ವಹಿಸುತ್ತಿರುವ ವಿದೇಶಿ ಮೂಲದ ಕಂಪನಿಗಳು ಅದರಲ್ಲೂ ಸೇವಾ ವಲಯಗಳಲ್ಲಿ ಇದರ ಬಿಸಿ ತಟ್ಟಿರುವುದರಿಂದ ಇಂತಹ ಸಂಸ್ಥೆಗಳು ತಮ್ಮ ದೇಶದಲ್ಲಿ ಆ ದೇಶೀಯ ಸರ್ಕಾರಗಳು ಭಾರತೀಯ ಸಿಬ್ಬಂದಿಗೆ ಸೇವೆಯ ಮೇಲೆ ನಿರ್ಬಂಧ ಹೇರಿರುವ ಹಿನ್ನೆಲೆಯಲ್ಲಿ ನಿರ್ಬಂಧ ಪೂರ್ವಕ ಪ್ರತಿ ಕ್ರಮ ವಹಿಸುವುದು.

18) ಕಾರ್ಪೊರೇಟ್ ಕಂಪನಿಗಳು ತಮ್ಮ ಬ್ಯಾಲೆನ್ಸ್ ಶೀಟ್‌ನಲ್ಲಿ ತಮ್ಮ ಲೆಕ್ಕ ತೋರಿಸಿ ಹಣ ದುರುಪಯೋಗಗೈದು ಹಾಗೂ ದೇಶದ ಹಿರಿಮೆಗೆ ಕಳಂಕ ತರುತ್ತಿರುವ ಹಿನ್ನೆಲೆಯಲ್ಲಿ ನಿಯಂತ್ರಣ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಕಾರ್ಯಗಳನ್ನು ಪರಿವೀಕ್ಷಿಸುವುದು.

19) ಇಲ್ಲಿ ತಯಾರಾಗುವಂತಹ ಪದಾರ್ಥಗಳು ಹಾಗೂ ಭಾರತೀಯ ಬ್ರಾಂಡ್‌ಗಳಿಗೆ ಜಾಗತಿಕವಾಗಿ ಸ್ಪರ್ಧೆ ನೀಡುವಲ್ಲಿ ಹೆಮ್ಮೆ ಹಿರಿಮೆ ಪಡೆಯುವಂತೆ ಮಾಡುವುದು.

20) ಪ್ರತಿಯೊಬ್ಬರಿಗೂ ಅನಗತ್ಯ ಗ್ರಾಹಕ ಶಕ್ತಿ ಹೊಂದಲು ಉತ್ತೇಜಿಸದೆ ಅಗತ್ಯ ಗ್ರಾಹಕ ಶಕ್ತಿಯ ಮಟ್ಟವನ್ನು ಹೊಂದಲು ಅವಕಾಶ ಮಾಡಿಕೊಡುವುದು.

ನಗರ ಭಾರತ

ಭವಿಷ್ಯದ ಒಂದು ನೋಟ

ದೇಶದ ಆರ್ಥಿಕ ಸುಧಾರಣೆ ಮತ್ತು ಉದ್ಯೋಗಗಳ ಹೆಚ್ಚಳದಿಂದ ಸಹಜವಾಗಿ ನಗರ ಪಟ್ಟಣಗಳು ಬೆಳೆಯುತ್ತವೆ. ಈ ವಿಷಯದಲ್ಲಿ ರಾಜ್ಯ ಸರ್ಕಾರಗಳು ಯೋಜಿಸುವ ನಗರಾಭಿವೃದ್ಧಿ ಕೆಲಸಗಳು ಮತ್ತು ಕೊಳಚೆ ಪ್ರದೇಶಗಳನ್ನು ನಿರ್ಮೂಲನೆ ಮಾಡಿ ಆರೋಗ್ಯಕರ ಜನತಾ ಮನೆಗಳನ್ನು ನಿರ್ಮಿಸುವುದರಲ್ಲಿ ಸಹಾಯ ಮಾಡುವುದಲ್ಲದೆ ಬಿಜೆಪಿ ನಗರಗಳ ಅಭಿವೃದ್ಧಿ ನೀತಿಗಳನ್ನು ಪರಾಮರ್ಶಿಸಲಿದೆ. ಈ ನಿಟ್ಟಿನಲ್ಲಿ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಈ ಕೆಳಗಿನ ಕಾರ್ಯಕ್ರಮಗಳನ್ನು ಯೋಜಿಸಲಾಗುವುದು

1) 'ಎಲ್ಲರಿಗೂ ಸೂರು' ಯೋಜನೆಯಡಿ ಪ್ರತಿ ವರ್ಷ 10 ಲಕ್ಷ ಮನೆಗಳನ್ನು ಕಟ್ಟಿ ಬಡವರಿಗೆ ನೀಡುವುದು.

2) ಪ್ರಪಂಚದಲ್ಲೇ ಅದ್ಭುತವಾದ ಮೂಲಭೂತ ಸೌಕರ್ಯಗಳಿರುವ 15 ಹೊಸ ನಗರಗಳನ್ನು 5 ವರ್ಷಗಳಲ್ಲಿ ಅಭಿವೃದ್ಧಿಪಡಿಸುವುದು.

3) ಈಗ ಇರುವ ನಗರಗಳಿಗೆ ಮೂಲಭೂತ ಸೌಕರ್ಯಗಳಾದ ನೀರು, ಚರಂಡಿ, ರಸ್ತೆ, ವಿದ್ಯುತ್,ಪರಿಸರ, ತ್ಯಾಜ್ಯಗಳ ವಿಲೇವಾರಿಗಳಿಗೆ ಹೆಚ್ಚಿನ ಗಮನ ಕೊಟ್ಟು ನಗರಗಳ ಪರಿಸರ ಉತ್ತಮಪಡಿಸುವುದು.

4) ನಗರದ ಹೊರವಲಯವನ್ನು ಅಭಿವೃದ್ಧಿಪಡಿಸಿ ನಗರದ ಸೌಕರ್ಯವನ್ನು ಕಲ್ಪಿಸಿ ಗ್ರಾಮ ಸೌಂದರ್ಯವನ್ನು ಉಳಿಸಿಕೊಂಡು ನಗರಗಳಿಗೆ ವಲಸೆ ಬರುವುದನ್ನು ತಡೆಗಟ್ಟಲು ಪ್ರಯತ್ನಿಸುವುದು.

5) ಭೌಗೋಳಿಕ ಮಾಹಿತಿಯನುಸಾರ ನಗರಗಳ ಆಸ್ತಿ ಹಕ್ಕುಗಳನ್ನು ವಿಂಗಡಿಸುವುದು.

6) ನಗರಗಳ ಸಾಮಾನ್ಯ ಸಮಸ್ಯೆಯಾದ ವಾಹನ ದಟ್ಟಣೆಯಂತಹ ಸಮಸ್ಯೆಗಳಿಗೆ ವಸ್ತುನಿಷ್ಠ ಪರಿಹಾರವನ್ನು ಕಂಡುಕೊಳ್ಳುವುದು.

ಕೃಷಿ

ಋಣಮುಕ್ತ ಕೃಷಿಕ–ಉಚ್ಛ್ರಾಯ ಭಾರತ

ನಮ್ಮ ದೇಶದ ಕೃಷಿಕರ ಜೀವನ ಎಷ್ಟು ದುರವಸ್ಥೆಗೆ ಇಳಿದಿದೆಯೆಂದರೆ ಸಾಲ ಬಾಧೆಯಿಂದ ತತ್ತರಿಸುತ್ತಿರುವ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಯುಪಿಎ ಸರ್ಕಾರ ರೈತರ ಸಮಸ್ಯೆಗಳನ್ನು ಪರಿಹರಿಸುವ ಕಡೆ ಗಮನ ಕೊಡದೆ, ಆಹಾರ ಧಾನ್ಯಗಳ ಆಮದಿಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದೆ. ಬಿಜೆಪಿ ಈ ನಿಟ್ಟಿನಲ್ಲಿ ಮೂರು ಮುಖ್ಯ ಕಾಲಮಿತಿ

ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ:– ಕೃಷಿಕರಲ್ಲಿ ನಿಶ್ಚಿತ ವರಮಾನ ಬರುವಂತೆ ಮಾಡುವುದು, ಸಾಲ ಬಾಧೆಯಿಂದ ಮುಕ್ತಗೊಳಿಸುವುದು ಮತ್ತು ಕೃಷಿಯಲ್ಲಿ ಸಾರ್ವಜನಿಕ ಬಂಡವಾಳ ಹೆಚ್ಚಿಸುವುದು, ಬೇರೆ ಎಲ್ಲಾ ವಿಷಯಗಳು ಕಾಯಬಹುದು. ಆದರೆ ಕೃಷಿಯಲ್ಲ

ಕೃಷಿಕರನ್ನು ಸಾಲ ಮುಕ್ತರಾಗಿಸಲು ಬಿಜೆಪಿ ಈ ಕೆಳಗಿನ ಕಾರ್ಯಕ್ರಮ ಹಾಕಿಕೊಂಡಿದೆ.

1) ಕೃಷಿ ಸಾಲ ಮನ್ನಾ

2 ಒಂದು ಸಮಿತಿ ರಚಿಸಿ ರೈತರ ಸಾಲದ ಪೂರ್ಣ ವಿವರಗಳನ್ನು ಅಭ್ಯಸಿಸಿ ಅದಕ್ಕೆ ಸೂಕ್ತ ಪರಿಹಾರ 6 ತಿಂಗಳೊಳಗೆ ಕಂಡುಕೊಳ್ಳುವುದು.

3) ಶೇ. 4ರ ಬಡ್ಡಿಗೆ ಕೃಷಿ ಸಾಲವನ್ನು ಬ್ಯಾಂಕುಗಳಿಂದ ರೈತರಿಗೆ ಕೊಡಿಸುವುದು.

4) ವೃದ್ಧ ಮತ್ತು ಅಸಹಾಯಕ ರೈತರಿಗೆ ಮಾಸಾಶನ.

5) ಖರ್ಚು ಕಡಿಮೆಯಾಗುವಂತೆ ಮಾಡಿ ಉತ್ಪನ್ನ ಹೆಚ್ಚಿಸಿ ಲಾಭ ಹೆಚ್ಚುವಂತೆ ಮಾಡುವುದು ಮತ್ತು ಈಗಿನ ಬೆಲೆ ನಿಗದಿ ಕ್ರಮವನ್ನು ಪರಿಶೀಲಿಸುವುದು.

6) ಬೆಳೆ ವಿಮಾ ಯೋಜನೆಯನ್ನು ಜಾರಿಗೊಳಿಸಿ ಬೆಲೆ ಮತ್ತು ಉತ್ಪನ್ನ ಎರಡನ್ನೂ ವಿಮೆ ಮಾಡುವುದು. ಇದರಿಂದ ಬೆಳೆ ನಷ್ಟದ ಸಮಯದಲ್ಲಿ ಪರಿಹಾರ ದೊರೆಯುವುದರಿಂದ ರೈತರು ಬಿಕ್ಕಟ್ಟಿನಿಂದ ಪಾರಾಗಬಹುದು.

7) ನೈಸರ್ಗಿಕ ಮತ್ತು ಸಾವಯವ ಕೃಷಿಗೆ ಪ್ರೋತ್ಸಾಹ ಕೊಡುವುದು, ಇದರಿಂದ ಮಣ್ಣಿನ ಗುಣಮಟ್ಟ ಕಡಿಮೆಯಾಗುವುದು ತಪ್ಪುತ್ತದೆ. ಸಾವಯವ ಕೃಷಿ ಉತ್ಪನ್ನಗಳಿಗೆ ವಿಶೇಷ ಮಾರುಕಟ್ಟೆ ಒದಗಿಸುವುದು.

8) ಮೌಲ್ಯವರ್ಧಿತ ಯೋಜನೆಯನ್ನು ಪರಿಚಯಿಸಿ ನಷ್ಟ ಕಡಿಮೆಗೊಳಿಸುವುದು ಮತ್ತು ಆಹಾರ ಪರಿಷ್ಕರಣೆ ಘಟಕಗಳನ್ನು ಸ್ಥಾಪಿಸಿ ಯುವಕರಿಗೆ ಉದ್ಯೋಗ ಸೃಷ್ಟಿಸುವುದು.

9) 5 ವರ್ಷಗಳಲ್ಲಿ ಇನ್ನೂ 35 ದಶಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸುವುದು. ಇದು ಗ್ರಾಮಗಳಲ್ಲಿ ಉದ್ಯೋಗವನ್ನು ಸೃಷ್ಟಿಸುವುದಲ್ಲದೆ ರೈತರಿಗೂ ಉಪಯೋಗವಾಗುತ್ತದೆ. ಇದರ ಜೊತೆಗೆ ಹನಿ ನೀರಾವರಿಯನ್ನು ಜಾರಿಗೊಳಿಸಿ ನೀರನ್ನು ಸಮರ್ಪಕವಾಗಿ ಉಪಯೋಗಿಸುವಂತೆ ಮಾಡುವುದು.

10) ಒಳ್ಳೆಯ ಗುಣಮಟ್ಟದ ವಿದ್ಯುತ್, ಬೀಜ ಮತ್ತು ಗೊಬ್ಬರವನ್ನು ಒದಗಿಸುವುದು.

11) ಕೃಷಿಯಲ್ಲಿ ಅಧಿಕ ಬಂಡವಾಳ ಹೂಡಿ ಕಾಂಗ್ರೆಸ್ ನೇತೃದದ ಯುಪಿಎ ಸರ್ಕಾರ ಕೃಷಿಗೆ ತೋರಿದ ಉಪೇಕ್ಷೆಯನ್ನು ಸರಿಪಡಿಸಿ ಕೃಷಿಯೂ ಕೈಗಾರಿಕಾ ವಲಯ ಮತ್ತು ಸೇವಾ ವಲಯದಷ್ಟೇ ಬೆಳೆಯುವಂತೆ ಮಾಡುವುದು.

12) ರಾಷ್ಟ್ರೀಯ ಗ್ರಾಮೀಣ ಬ್ಯಾಂಕುಗಳು ಹಾಗೂ ಸಂಬಂಧಿತ ಸೇವೆಯನ್ನು ಉತ್ತಮಗೊಳಿಸುವುದು.

13) ತೋಟಗಾರಿಕೆ, ಪುಷ್ಪ ವ್ಯವಸಾಯ, ಮೀನುಗಾರಿಕೆ ಮತ್ತು ಕೋಳಿ ಸಾಕಾಣಿಕೆಗೆ ಉತ್ತೇಜಿಸಿ ಉದ್ಯೋಗವನ್ನು ಸೃಷ್ಟಿಸುವುದು ಮತ್ತು ವರಮಾನ ಹೆಚ್ಚಿಸುವುದು.

14) ಹುಲ್ಲುಗಾವಲನ್ನು ಹೆಚ್ಚಿಸುವುದು ಮತ್ತು ಕೆರೆ ಬಾವಿಗಳನ್ನು ಸಂರಕ್ಷಿಸುವುದು.

ಜಿ.ಎಮ್. ಬೀಜಗಳು

ಜೈವಿಕವಾಗಿ ಮಾರ್ಪಾಡಾದ ಬೀಜಗಳು ದೀರ್ಘಕಾಲದಲ್ಲಿ ಮಣ್ಣಿನ ಮೇಲೆ ಬೀರುವ ಪರಿಣಾಮ, ಉತ್ಪನ್ನ ಮತ್ತು ಜನರ ಆರೋಗ್ಯದ ಮೇಲೆ ಬೀರುವ ಪರಿಣಾಮವನ್ನು ಪೂರ್ತಿಯಾಗಿ ಅರಿಯದೆ ಅದನ್ನು ಬಿತ್ತನೆ ಮಾಡಲು ಬಿಡುವುದಿಲ್ಲ. ಇಂತಹ ಬೀಜಗಳಿಂದ ಬೆಳೆಯಲಾದ ಎಲ್ಲಾ ಆಹಾರಗಳನ್ನು 'ಜಿ.ಎಮ್. ಫುಡ್' ಎಂದು ಬ್ರಾಂಡ್ ಮಾಡಲಾಗುವುದು.

ಮೂಲಭೂತ ಸೌಕರ್ಯಕ್ಕಾಗಿ ಭೂಮಿಯ ಸ್ವಾಧೀನ

ಕೃಷಿಕರ ಹಿತವನ್ನು ಕಾಪಾಡಲಾಗುವುದು

ಹಿಂದಿನಿಂದಲೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾರ್ವಜನಿಕ ಸೌಕರ್ಯವೆ. ಹೆಸರಿನಲ್ಲಿ ರೈತರ ಭೂಮಿಯನ್ನು ವಶಪಡಿಸಿಕೊಂಡು ಖಾಸಗಿ ವ್ಯಕ್ತಿಗಳಿಗೆ ಕೊಟ್ಟಿದ್ದಾರೆ ಯುಪಿಎ ಸರ್ಕಾರ ಸುಮಾರು 50,000 ಎಕರೆ ವಿಸ್ತೀರ್ಣದ 572 ಆರ್ಥಿಕ ವಲಯವನ್ನು ಅನುಮೋದಿಸಿದೆ. ಇದು ಸಿಂಗಾಪೂರ್‌ನ ವಿಸ್ತೀರ್ಣದ ಮೂರು ಪಟ್ಟು. ಇದು ಪೂರ್ತಿಯಾಗಿ ಅವೈಜ್ಞಾನಿಕ ಮತ್ತು ಕೃಷಿ ಭೂಮಿಯ ದುರುಪಯೋಗ.

ಬಿಜೆಪಿ ರೈತರ ಹಿತ ಕಾಯುವಂತಹ ರಾಷ್ಟ್ರೀಯ ಭೂಬಳಕೆ ನೀತಿಯನ್ನು ರೂಪಿಸುವುದು. ಇದನ್ನು ರಾಜ್ಯ ಭೂ ಉಪಯೋಗ ಪ್ರಾಧಿಕಾರಿಗಳ ಜೊತೆ ಸೇರಿ ರಾಷ್ಟ್ರೀಯ ಭೂ ಉಪಯೋಗ ಪ್ರಾಧಿಕಾರಗಳು ಎಚ್ಚರಿಕೆಯಿಂದ ಪರಿಶೀಲಿಸಿ ಜಾರಿಗೊಳಿಸುವರು. ರಾಷ್ಟ್ರೀಯ ಭೂ ಉಪಯೋಗ ಪ್ರಾಧಿಕಾರದ ಅಧಿಕಾರ ಹಾಗೂ ಕರ್ತವ್ಯ ಇನ್ನಿತರೆ ಪ್ರಾಧಿಕಾರಗಳೇ ರೀತಿಯಲ್ಲಿಯೇ ಇರುತ್ತದೆ.

ಭೂಸ್ವಾಧೀನದ ಅಕ್ರಮಗಳನ್ನು ತಡೆಗಟ್ಟಲು ಬಿಜೆಪಿ ಈಗ ಇರುವ ಕಾನೂನಿಗೆ ತಿದ್ದುಪಡಿ ತರುವುದು. ಯಾವುದೇ ಭೂಮಿಯನ್ನು ವಶಪಡಿಸಿಕೊಳ್ಳುವಾಗ ಆ ಭೂಮಿಯ ಮಾರುಕಟ್ಟೆ ಬೆಲೆ ರೈತರಿಗೆ ದೊರಕುವಂತೆ ಮಾಡಲಾಗುವುದು. ಬಿಜೆಪಿಯು ಯಾವುದೇ ಫಲವತ್ತಾದ ಕೃಷಿ ಭೂಮಿಯನ್ನು ಕೈಗಾರಿಕೆ ಅಥವಾ ವಾಣಿಜ್ಯ ಉಪಯೋಗಕ್ಕೆ ಆಗಲಿ ಅಥವಾ ವಿಶೇಷ ಆರ್ಥಿಕ ವಲಯವನ್ನಾಗಿ ಆಗಲಿ ಮಾರ್ಪಡಿಸಲು ಬಿಡುವುದಿಲ್ಲ.

ಈ ವಿಶೇಷ ಆರ್ಥಿಕ ವಲಯ ಮತ್ತು ಕೈಗಾರಿಕೆಗಾಗಿ ಭೂ ಸ್ವಾಧೀನದ ಇಡೀ ಪ್ರಕರಣದ ಬಗ್ಗೆ ಸಂಸತ್ತಿನ ಸ್ಥಾಯಿ ಸಮಿತಿಯ ವರದಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಕೃಷಿ ಭೂಮಿಯನ್ನು ಕಾಪಾಡುವ ಮತ್ತು ಉತ್ಪನ್ನಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಬಳಸಲಾಗುವುದು.

ಅಂತಾರಾಷ್ಟ್ರೀಯ ವಾಣಿಜ್ಯ ಒಪ್ಪಂದಗಳು

ಕೆಲವು ಅಭಿವೃದ್ಧಿ ರಾಷ್ಟ್ರಗಳು ತೋರುವ ಸಂರಕ್ಷಕ ಭಾವನೆಯ ವಿರುದ್ಧ ಬಿಜೆಪಿ ಹೋರಾಡುತ್ತದೆ. ಯಾವುದೇ ದ್ವಿಪಕ್ಷೀಯ ಅಥವಾ ಬಹುಪಕ್ಷೀಯ ವಾಣಿಜ್ಯ ಒಪ್ಪಂದಗಳಲ್ಲಿ ದೇಶದ ಹಿತವನ್ನು ಕಾಪಾಡುವುದರ ಜೊತೆಗೆ ಏಕಪಕ್ಷೀಯ ಒಪ್ಪಂದ ಮತ್ತು ಪರಸ್ಪರರಿಗೆ ಅನುಕೂಲವಲ್ಲದ ಒಪ್ಪಂದಗಳನ್ನು ಒಪ್ಪುವುದಿಲ್ಲ. ರಾಷ್ಟ್ರೀಯ ಹಿತಕ್ಕೆ ಧಕ್ಕೆ ತರುವಂತಹ ಹಳೆಯ ಒಪ್ಪಂದಗಳನ್ನು ಕೂಡ ನಮ್ಮ ಸರ್ಕಾರ ಮರು ಪರಿಶೀಲಿಸುವುದು. ಆಹಾರ ಮತ್ತು ಆರೋಗ್ಯದ ವಿಚಾರದ ಒಪ್ಪಂದಗಳಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ. ಯಾವುದೇ ಒಪ್ಪಂದದಿಂದ ನಮ್ಮ ದೇಶಕ್ಕೆ ಅನ್ಯಾಯವಾಗುವಂತಿದ್ದರೆ ಅಂತಹ ಒಪ್ಪಂದದಿಂದ ಹಿಂದೆ ಸರಿಯಲು ಹಿಂಜರಿಯುವುದಿಲ್ಲ. ಬಿಜೆಪಿಯು ನಮ್ಮ ದೇಶದ ತಾಂತ್ರಿಕ ಶಕ್ತಿಯ ಹಿತವನ್ನು ಕಾಪಾಡುವುದಲ್ಲದೆ, ಭವಿಷ್ಯದ ಒಪ್ಪಂದಗಳಿಂದ ಹೆಚ್ಚು ಲಾಭ ಗಳಿಸುವತ್ತ ಗಮನ ಹರಿಸುವುದು.

ಚಿಲ್ಲರೆ ವ್ಯಾಪಾರ

ಚಿಲ್ಲರೆ ವ್ಯಾಪಾರ ಸೃಷ್ಟಿಸುವ ಉದ್ಯೋಗ ಅವಕಾಶ ಮತ್ತು ಅದು ನೀಡುವ ಸೇವೆಯ ಪ್ರಾಮುಖ್ಯತೆ ಬಗ್ಗೆ ಬಿಜೆಪಿಗೆ ಅರಿವಿದೆ. ಆದ್ದರಿಂದ ಈ ಅಸಂಘಟಿತ ವಲಯಕ್ಕೆ ಅನುಕೂಲವಾಗುವಂತಹ ಪಾತ್ರ ವಹಿಸುತ್ತದೆ. ಈ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆಯನ್ನು ಒಪ್ಪಿಕೊಳ್ಳುವುದಿಲ್ಲ. ಕೃಷಿಯನ್ನು ಹೊರತಪಡಿಸಿದರೆ ಈ ವ್ಯಾಪಾರದಲ್ಲಿ ತೊಡಗಿರುವ ಜನಸಂಖ್ಯೆ 4 ಕೋಟಿಗೂ ಹೆಚ್ಚು.

1) ಸಣ್ಣ ಪುಟ್ಟ ಎಲ್ಲಾ ವ್ಯಾಪಾರಿಗಳ ಹಿತವನ್ನು ಕಾಪಾಡಲು ಅನುಕೂಲವಾಗುವಂಹ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

2) ಶೇ. 4ರ ಬಡ್ಡಿಯಂತೆ ಸಾಲವನ್ನು ಬಂಡವಾಳ ಹೂಡಿಕೆಗಾಗಿ ಸಣ್ಣ ವ್ಯಾಪಾರಿಗಳಿಗೆ ಒದಗುವಂತೆ ಮಾಡಲಾಗುವುದು.

3) ಸಂಯುಕ್ತ ತೆರಿಗೆ ಪದ್ಧತಿಯನ್ನು ಸರಳಗೊಳಿಸಿ ಸಣ್ಣ ವ್ಯಾಪಾರಿಗಳಿಗೆ ಆಗುತ್ತಿರುವ ತೊಂದರೆಯನ್ನು ನೀಗಿಸಲಾಗುವುದು ಹಾಗೂ ಭ್ರಷ್ಟಾಚಾರಕ್ಕೆ ಕೊನೆ ಹಾಕಲಾಗುವುದು.

4) ಸ್ವತಂತ್ರ ಸಮಿತಿಯನ್ನು ರಚಿಸಿ ಸಣ್ಣ ವ್ಯಾಪಾರಿಗಳ ಕ್ಷೇಮಕ್ಕಾಗಿ, ಮಾಸಾಶನ ಮುಂತಾದ ಯೋಜನೆಗಳನ್ನು ರೂಪಿಸಲಾಗುವುದು.

ಕಾರ್ಮಿಕ

ಕಾರ್ಮಿಕರ ದೀರ್ಘ ಕಾಲದ ಹಿತವನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ಅವರ ಸ್ಥಿತಿಗತಿಗಳ ಸುಧಾರಣೆಯನ್ನು ಬಿಜೆಪಿ ಮಾಡಲಿದೆ. ಕಾರ್ಮಿಕರ ಸಂಘದ ಪ್ರತಿನಿಧಿಗಳೊಂದಿಗೆ ಮತ್ತು ಮಾಲೀಕರೊಂದಿಗೆ ಸಮಾಲೋಚಿಸಿ ಸುಧಾರಣೆಯನ್ನು ಜಾರಿಗೊಳಿಸಲಾಗುವುದು. ಈ ವಿಚಾರದಲ್ಲಿ ನಮ್ಮ ಬದ್ಧತೆಗಳೆಂದರೆ:–

1) ಕೈಗಾರಿಕಾ ವ್ಯಾಜ್ಯಗಳ ಕಾಯಿದೆಗೆ ತಿದ್ದುಪಡಿ ತರುವ ಮೂಲಕ ಕಾರ್ಮಿಕ ಸಂಘಗಳ ಚುನಾವಣೆಗೆ ಗುಪ್ತ ಮತದಾನ ನಡೆಯುವಂತೆ ಮಾಡಲಾಗುವುದು.

2) ಕಾರ್ಮಿಕ ಸಂಘಗಳು ಸಮರ್ಪಕವಾಗಿ ಹಾಗೂ ರಚನಾತ್ಮಕವಾಗಿ ಕೆಲಸ ಮಾಡಲು ಅನುಕೂಲವಾಗುವಂತೆ ಅವರಿಗೆ ತರಬೇತಿ ಶಿಬಿರಗಳನ್ನು ಏರ್ಪಡಿಸಲಾಗುವುದು.

3) ಸಂಘಟಿತ ಮತ್ತು ಅಸಂಘಟಿತ ವಲಯಗಳ ಕಾರ್ಮಿಕರಿಗೆ ಅನುಕೂಲವಾಗುವಂತೆ ಕಾರ್ಮಿಕರ ಬ್ಯಾಂಕ್‌ಗಳನ್ನು ಸ್ಥಾಪಿಸಲಾಗುವುದು.

4) ಕಾರ್ಮಿಕರನ್ನು ಕಡಿಮೆ ಮಾಡಿದ ಪಕ್ಷದಲ್ಲಿ ಪರ್ಯಾಯ ಹಣ ನೀಡಿ ಮತ್ತೆ ಅವಕಾಶ ಸಂದರ್ಭ ಬಂದರೆ ಪುನರ್ ಉದ್ಯೋಗ ನೀಡುವುದು.

5) ರಾಷ್ಟ್ರೀಯ ಬಾಲ ಕಾರ್ಮಿಕ ಆಯೋಗ ಸ್ಥಾಪನೆ.

6 ಅಸಂಘಟಿತ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಸೌಲಭ್ಯ ಮತ್ತು ಸುರಕ್ಷೆ.

ಸಹಕಾರಿ ವಲಯ:

ಸಹಕಾರಿ ವಲಯವನ್ನು ಪ್ರೋತ್ಸಾಹಿಸುವ ಎಲ್ಲಾ ಪ್ರಯತ್ನವನ್ನು ಬಿಜೆಪಿ ಮಾಡಲಿದೆ. ಇದಕ್ಕಾಗಿ ಬಿಜೆಪಿ ಮಾಡಲಿರುವುದೆಂದರೆ:–

1) ವರಮಾನ ತೆರಿಗೆಯಿಂದ ಸಹಕಾರಿ ಬ್ಯಾಂಕ್‌ಗಳನ್ನು ಮುಕ್ತಗೊಳಿಸುವುದು.

2) ದೇಶಾದ್ಯಂತ ಇರುವ ಸಹಕಾರಿ ಸಂಘಗಳಿಗೆ ಹೊಂದುವಂತಹ ಕಾನೂನು ಜಾರಿಗೆ ತರುವುದು.

3) ವಿವಿಧ ರಾಜ್ಯದ ಸಹಕಾರ ಸಂಘದ ಕಾನೂನುಗಳಲ್ಲಿರುವ ನ್ಯೂನತೆ ಮತ್ತು ಅಕ್ರಮಗಳನ್ನು ನಿವಾರಿಸಲು ಬಹುರಾಜ್ಯ ಸಹಕಾರಿ ಕಾಯ್ದೆಗೆ ತಿದ್ದುಪಡಿ ತರಲಾಗುವುದು.

4) ಸಹಕಾರ ಸಂಸ್ಥೆಗಳಿಗೆ ಕೇಂದ್ರ ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸಲಾಗುವುದು.

## ಗ್ರಾಹಕರ ಹಕ್ಕುಗಳು

ಗ್ರಾಹಕರ ಹಕ್ಕುಗಳನ್ನು ಇನ್ನಷ್ಟು ಬಲಗೊಳಿಸಲಾಗುವುದು. ಬಿಜೆಪಿ ತಜ್ಞರ ಸಮಿತಿ ರಚಿಸಿ ಕೆಳಗಿನ ಸಮಸ್ಯೆಗಳನ್ನು ಪರಿಶೀಲಿಸುವುದು.

1) ಗ್ರಾಹಕರ ವ್ಯಾಜ್ಯ ಬಗೆಹರಿಸಲು ನಿಶ್ಚಿತ ಸೇವೆಗಳ ಆಧಾರದ ನ್ಯಾಯಾಲಯಗಳನ್ನು ಸ್ಥಾಪಿಸಲಾಗುವುದು

2) ಗ್ರಾಹಕರು ತಮ್ಮ ಸಮಸ್ಯೆಗಳನ್ನು ನೇರವಾಗಿ ಸರ್ಕಾರದೊಂದಿಗೆ ಸಮಾಲೋಚಿಸಲು ಅನುಕೂಲವಾಗುವಂತೆ ಮಾಡುವುದು.

3) ಗ್ರಾಹಕ ವಸ್ತುಗಳ ಮೇಲೆ ಅಂಟಿಸುವ ಚೀಟಿಗಳಲ್ಲಿ ಎಲ್ಲಾ ವಿವರಗಳನ್ನು ಒದಗಿಸುವಂತೆ ಮಾಡುವುದು.

## ಯುವ ಶಕ್ತಿ

### ಯುವ ಭಾರತ ಶಕ್ತಿಗೆ ಅಧಿಕಾರ

ಪಾಶ್ಚಿಮಾತ್ಯರಿಗೆ ಹೋಲಿಸಿದರೆ ಭಾರತದ ಜನಸಂಖ್ಯೆ ಹೆಚ್ಚು ಯುವಕರಿಂದ ಕೂಡಿದೆ. ಅರ್ಧಕ್ಕೂ ಹೆಚ್ಚು ಭಾರತೀಯರು 25 ವರ್ಷ ಹಾಗೂ ಅದಕ್ಕಿಂತ ಕಡಿಮೆ ವಯಸ್ಸಿನವರು. ಶೇ. 2/3 ಭಾಗ 35 ವರ್ಷಕ್ಕೂ ಕಡಿಮೆ ವಯಸ್ಸಿನವರು. ವಿದ್ಯಾವಂತರನ್ನಾಗಿ ಮಾಡುವುದೇ ಅಲ್ಲದೆ ತಿಳಿವಳಿಕೆ ಮಟ್ಟ ಹೆಚ್ಚಿಸುವುದರ ಮೂಲಕ ಯುವಕರ ಆಸೆ ಆಕಾಂಕ್ಷೆಗಳನ್ನು ಹೆಚ್ಚಿಸಲಾಗುವುದು..

ಈ ಆಕಾಂಕ್ಷೆ, ಆಸೆಗಳನ್ನು ಯುವಕರು ತಂಬಿಕೊಳ್ಳುವಂತೆ ಮಾಡುವುದು ಸರ್ಕಾರದ ಕೆಲಸ. ಹೆಚ್ಚು ಸ್ಪರ್ಧಾ ಮನೋಭಾವ ಬೆಳೆಸಿ ಅವೆಲ್ಲವನ್ನು ಸರಿಯಾಗಿ ಉಪಯೋಗಿಸುವುದು ಮುಖ್ಯ. ಬಿಜೆಪಿ ಈ ಆಶೋತ್ತರಗಳನ್ನು ಯುವಜನತೆಯನ್ನು ಆತ್ಮವಿಶ್ವಾಸಕ್ಕೆ ತೆಗೆದುಕೊಂಡು 'ಯುವ ಭಾರತ' ನಿರ್ಮಿಸಿ ಅವರಲ್ಲಿರುವ ಶಕ್ತಿ ಸಾಮರ್ಥ್ಯವನ್ನು ಹೆಚ್ಚಿಸಿ ತಿಳುವಳಿಕೆ ಭಂಡಾರ ಅವರಿಂದ ಸೃಷ್ಟಿ ಮಾಡಲು ಸಂಕಲ್ಪ ಮಾಡಿದೆ. ಬಿಜೆಪಿ ಪ್ರಣಾಳಿಕೆ ಯುವ ಜನತೆಯ ಆಸೆ–ಆಕಾಂಕ್ಷೆ ಇಟ್ಟುಕೊಂಡು ರಚಿಸಲಾಗಿದೆ.

ಯುವಕರಲ್ಲಿ ರಾಷ್ಟ್ರೀಯ ಭಾವನೆ ಹಾಗೂ ರಾಷ್ಟ್ರ ನಿರ್ಮಾಣದ ಕಲ್ಪನೆಯನ್ನು ಗರಿಗೆದರಿಸಲು ಎನ್.ಎಸ್.ಎಸ್. ಹಾಗೂ ಎನ್.ಸಿ.ಸಿಗಳನ್ನು ಪರಿಣಾಮಕಾರಿಯಾಗಿ ಪುನರ್‌ರಚಿಸಲಾಗುವುದು. ಪ್ರಮುಖ ತೀರ್ಮಾನ ತೆಗೆದುಕೊಳ್ಳುವ ದಾರಿಯಲ್ಲಿ ಹೆಚ್ಚು ತೊಡಗಿಸಿಕೊಳ್ಳುವಂತೆ ಅವರನ್ನು ಪ್ರೋತ್ಸಾಹಿಸಲಾಗುವುದು.

ಬಿಜೆಪಿ ಪಕ್ಷ ವಿನೂತನ 'ರಾಷ್ಟ್ರೀಯ ಅರಿವು ಪರಿಪಕ್ವ ಕಾರ್ಯಕ್ರಮ' ಸ್ಥಾಪಿಸಲಿದೆ. ಇದರ ಯೋಜನೆಯಡಿ ಅರಿವಿನ ಪರಿಪಕ್ವ ಕೇಂದ್ರವನ್ನು ಸಮಾಜದ ಎಲ್ಲಾ ಸ್ತರಗಳ ಯುವಕರ ಪಾಲ್ಗೊಳ್ಳುವರು. ಆರಂಭದಲ್ಲಿ ಶೇ. ಒಂದರಷ್ಟಾದರೂ ಅತಿ ಬುದ್ಧಿವಂತರು ನಂಬಿಕೆಯಿಂದ ಕೂಡಿದ ಅನುಭವಶಾಲಿ ಸಲಹೆಗಾರರಾಗಲಿ ಎಂಬುದು ಇಚ್ಛೆ. ಈ ಯುವಜನತೆಗೆ ಬೇಕಾದ ಸಂಪನ್ಮೂಲವನ್ನು ಒದಗಿಸಲಾಗುವುದು.
ರಾಷ್ಟ್ರೀಯ ವಿದ್ಯಾರ್ಥಿ ಬ್ಯಾಂಕ್ ಸ್ಥಾಪಿಸಿ ಅದರ ಅಡಿಯಲ್ಲಿ ವಿದ್ಯೆಗಾಗಿ ವಿದ್ಯಾರ್ಥಿ ಸಾಲ ಶೇ. 4ರ ಬಡ್ಡಿ ದರದಲ್ಲಿ ಒದಗಿಸಲಾಗುವುದು.

ಸರ್ವಶಿಕ್ಷಣ

ಅಕ್ಷರಸ್ಥ ಭಾರತ, ಶಕ್ತಿಯುತ ಭಾರತ

ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ತಾಂತ್ರಿಕ ಬೆಳವಣಿಗೆಗೆ ಬಿಜೆಪಿ ಶಿಕ್ಷಣಕ್ಕೆ ಸರಿಯಾದ ಸ್ಥಾನಮಾನ ದೊರಕಿಸಲಿದೆ. ಸಹಾ ಸಿದ್ಧ. ಶಿಕ್ಷಣ ಕಲ್ಪಿಸಿಕೊಡುವುದರಿಂದ ಬಡತನ ನಿವಾರಣೆ, ಆರೋಗ್ಯ, ಪರಿಸರ ರಕ್ಷಣೆ, ಸಮಾನತೆ, ತಿಳುವಳಿಕೆ ಹೆಚ್ಚಿಸಲು ಶಿಕ್ಷಣವನ್ನು ಆಯುಧವನ್ನಾಗಿ ಸರ್ಕಾರ ಬೆಳೆಸುತ್ತದೆ. ಶಿಕ್ಷಣಕ್ಕೆ ಅನುದಾನ ಶೇ. 6ರಷ್ಟು ಹೆಚ್ಚಿಸುವುದು. ಆದರೆ ನಮ್ಮ ಗುರಿ ಶೇ. 9ರಷ್ಟು ವಿದ್ಯೆಗಾಗಿ ಖಾಸಗಿ ಸಹಭಾಗಿತ್ವದಲ್ಲಿ ಉಪಯೋಗಿಸುವುದು.

21ನೇ ಶತಮಾನಕ್ಕಾಗಿ 'ರಾಷ್ಟ್ರೀಯ ಶಿಕ್ಷಣ ಆಯೋಗ' ಎಂಬ ವ್ಯಾಪಕ ಯೋಜನೆ ತಯಾರಿಸಲಾಗುವುದು. ಅದರಲ್ಲಿರುವ ವಸ್ತು ಹಾಗೂ ಪದ್ಧತಿ ಯುವಕರ ಬೇಡಿಕೆಗಳಿಗೆ ಆಶೋತ್ತರಗಳಿಗೆ ಪೂರಕವಾಗಿರುವುದು. ಈಗಿರುವ ಡಿಜಿಟಲ್ ವ್ಯವಸ್ಥೆಯನ್ನು ಪರಿಶೀಲಿಸಿ ಮಾಹಿತಿ ತಂತ್ರಜ್ಞಾನ ಪ್ರತಿಯೊಂದು ಮಗುವಿಗೂ ಕಲ್ಪಿಸಲಾಗುವುದು.
ಶಿಕ್ಷಣದ ಮೌಲ್ಯ, ಶಿಕ್ಷಣದ ಅವಶ್ಯಕತೆ, ಬುಡಕಟ್ಟು ಜನರಿಗೆ ಶಿಕ್ಷಣ ಹಾಗೂ ಮತ್ತಷ್ಟು ಸಹಕಾರ ಈ ನಿಟ್ಟಿನಲ್ಲಿ ಬೇಕಾಗಿರುವುದನ್ನು ಗಮನದಲ್ಲಿಡಲಾಗುವುದು. ಭಾರತದ ಶಿಕ್ಷಣದಲ್ಲಿ ಪರೀಕ್ಷಾ ವ್ಯವಸ್ಥೆಯನ್ನು ಪರಿಶೀಲಿಸಿ ಹೊಸ ಯೋಜನೆಯ ಕಾಯಕಲ್ಪ ರೂಪಿಸುವುದು.

ಶಾಲಾ ಶಿಕ್ಷಣ

1) ಎನ್.ಡಿ.ಎ. ಸರ್ಕಾರ 2002ರಲ್ಲಿ ಸ್ಥಾಪಿಸಿದ್ದನ್ನು ಫಲಪ್ರದವಾದ ಸರ್ವ ಶಿಕ್ಷ ಅಭಿಯಾನ–ಇನ್ನಷ್ಟು ಬಲಪಡಿಸಲಾಗುವುದು ಹಾಗೂ ಅದರ ವಿಸ್ತಾರವನ್ನು ಮತ್ತಷ್ಟು ಹರಡಿ ಗುಣಮಟ್ಟವನ್ನು ಕಾಪಾಡುವುದು.

2) ಶಾಲೆಗಳಲ್ಲಿ ನೀಡುವ ಮಧ್ಯಾಹ್ನದ ಭೋಜನವನ್ನು ಆಧುನೀಕರಣಲಾಗುವುದು. ಅಕ್ಷಯ ಪಾತ್ರೆ ಯೋಜನೆ ಇದಕ್ಕೆ ಮಾದರಿ ಆಗಲಿದೆ

3) ನೈಪುಣ್ಯತೆ ಹೊಂದಲು ಪರಿಣಾಮಕಾರಿಯಾದ ನಿರ್ಧಾರಗಳನ್ನು ಕೈಗೊಳ್ಳಲಾಗುವುದು.

4) ಪ್ರಾಥಮಿಕ ಶಾಲೆಗಳ ವೇಳಾಪಟ್ಟಿ ಹಾಗೂ ರಜೆ ದಿನಗಳನ್ನು ಆಯಾ ಪ್ರಾಂತ್ಯ ಶಿಕ್ಷಕರು ಮತ್ತು ಪೋಷಕರ ಜೊತೆಗೂಡಿ ನಿರ್ಧಾರ ಕೈಗೊಳ್ಳಲಾಗುವುದು.

5) ಸಾರ್ವತ್ರಿಕವಾಗಿ ಮಾಧ್ಯಮಿಕ ಶಾಲಾ ಯೋಜನೆಗಳನ್ನು ಅಳವಡಿಸಲಾಗುವುದು. ಹೆಣ್ಣು ಮಕ್ಕಳ ಮಾಧ್ಯಮಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗುವುದು.

6) ರಾಷ್ಟ್ರೀಯ ಮದರಸ ಆಧುನೀಕರಣ ಯೋಜನೆಗಳಿಗೆ ಎಲ್ಲಾ ಸಹಾಯ ನೀಡಲಾಗುವುದು.

7) ಶಾಲಾ ಶಿಕ್ಷಣ ಹಾಗೂ ಉನ್ನತ ಶಿಕ್ಷಣ ನಡುವೆ ಸಮರ್ಪಕ ಸಂಪರ್ಕ ವ್ಯವಸ್ಥೆ ಅಳವಡಿಸಲಾಗುವುದು.

ವೃತ್ತಿ ಶಿಕ್ಷಣ

1) ನೈಪುಣ್ಯತೆ ಹಾಗೂ ವೃತ್ತಿ ಶಿಕ್ಷಣ ತರಬೇತಿಗೆ ವಿಸ್ತೃತ ಸಂಪರ್ಕಜಾಲ ಸ್ಥಾಪಿಸುವುದು. ಈ ನೈಪುಣ್ಯತೆಗಳಿಗೆ ಪ್ರಶಸ್ತಿ ಪತ್ರ ಸಾಂಪ್ರದಾಯಿಕ ಅಥವಾ ಖಾಸಗಿ ಸಹಭಾಗಿತ್ವದಲ್ಲಿ ನೀಡುವುದು.

2) ಮಾಧ್ಯಮಿಕ ಹಂತದಲ್ಲಿ ಸಾಮಾನ್ಯ ವೃತ್ತಿ ಶಿಕ್ಷಣ ನೈಪುಣ್ಯತೆಯ ಮಕ್ಕಳನ್ನು ಗುರುತಿಸಿ ಅವರಿಗೆ ಹೆಚ್ಚುವರಿ ಸೌಲಭ್ಯ ಕಲ್ಪಿಸಲಾಗುವುದು..

3) ಮಕ್ಕಳಿರುವ ನೈಪುಣ್ಯತೆ ಹಾಗೂ ವೃತ್ತಿಪರತೆ ಬಗ್ಗೆ ಪೋಷಕರು ಹಾಗೂ ಆಯಾ ಜನಾಂಗಗಳಲ್ಲಿ ಜಾಗೃತಿ ಮೂಡಿಸಲಾಗುವುದು.

4) ಈ ವೃತ್ತಿ ಶಿಕ್ಷಣದಲ್ಲಿ ತೊಡಗಿಸಿಕೊಂಡವರನ್ನು ಬಳಸಿಕೊಳ್ಳುವುದರಿಂದ ಕಾರ್ಖಾನೆಗಳು ಹಾಗೂ ವೃತ್ತಿಪರರಿಬ್ಬರಿಗೂ ಲಾಭ.

ಉನ್ನತ ಶಿಕ್ಷಣ

1) ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿ ಜವಾಬ್ದಾರಿ ನೀಡಲಾಗುವುದು.

2) ಯಾವುದೇ ರಾಜಿಯಿಲ್ಲದೆ ಗುಣಮಟ್ಟ ಇರುವ ಉನ್ನತ ಶಿಕ್ಷಣ ವಿಸ್ತರಿಸುವುದು. ವಿಸ್ತೃತ ಶೈಕ್ಷಣಿಕ ಆದ್ಯತೆಯ ಮೇರೆಗೆ ಖಾಸಗಿಯವರನ್ನು ಉತ್ತೇಜಿಸಲಾಗುವುದು.

3 ಮಾನವ ಸಂಪನ್ಮೂಲವನ್ನು ಯೋಜಿಸಿ ಸರಿಯಾಗಿ ಕ್ರೂಢೀಕರಿಸಿ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರುವುದು. ಅತ್ಯುನ್ನತ ಮಾನವ ಸಂಪನ್ಮೂಲವನ್ನು ಎಲ್ಲ ವಲಯಕ್ಕೆ ನೀಡುವುದು. ಹೀಗಾಗಿ ಅದರ ಗುಣಮಟ್ಟ ಹಾಗೂ ಪ್ರಸ್ತುತತೆ ದುಪ್ಪಟ್ಟು ಪರಿಣಾಮ ಬೀರುವುದು.

ನೂತನ ರಾಷ್ಟ್ರೀಯ ಶೈಕ್ಷಣಿಕ ಯೋಜನೆ

ಅತಿ ಶೀಘ್ರದಲ್ಲಿ ರಾಷ್ಟ್ರೀಯ ಶಿಕ್ಷಣ ಆಯೋಗ ಸ್ಥಾಪಿಸಲಾಗುವುದು. ಈಗಿರುವ ಎನ್‌ಪಿಇ–1986/92 ಬದಲಿಸುವುದು ಈ ರಾಷ್ಟ್ರೀಯ ಶಿಕ್ಷಣ ಯೋಜನೆ. ಉದ್ದೇಶ, ಶೈಕ್ಷಣಿಕ ಯೋಜನೆಗಳನ್ನು, ಹೊಸ ರೂಪು ರೇಷೆಗಳನ್ನು ಸ್ಥಾಪಿಸಿ ಭಾರತವನ್ನು ಅರಿವಿನ ಶಕ್ತಿ ಕೇಂದ್ರವನ್ನಾಗಿಸಿ ಹಲವಾರು ಸಂಸ್ಥೆಗಳನ್ನು ಉನ್ನತ ಶಿಕ್ಷಣ, ಪ್ರಯೋಗಾಲಯ ಕೇಂದ್ರವನ್ನಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಲಿಕೆಯ ಕೇಂದ್ರ ಮಾಡುವುದು.

ರ್ಯಾಗಿಂಗ್ ಕ್ರಿಮಿನಲ್ ಅಪರಾಧ –ಕಠಿಣ ಶಿಕ್ಷೆ

ರ್ಯಾಗಿಂಗ್ ಹಾವಳಿಯನ್ನು ತಪ್ಪಿಸಲು ಬಿಜೆಪಿ ಸರ್ಕಾರ ಕಟ್ಟುನಿಟ್ಟಿನ ಕ್ರಮ ಜರುಗಿಸಲಿದೆ. ಶೀಘ್ರ ವಿಲೇವಾರಿ ನ್ಯಾಯಾಲಯದಲ್ಲಿ ಇದನ್ನು ಸೇರಿಸಲಾಗುವುದು. ಶಾಲೆ, ಕಾಲೇಜ್, ವಿಶ್ವವಿದ್ಯಾಲಯ ಅಧಿಕಾರಿಗಳು ಆಜ್ಞೆ ಪಾಲಿಸದಿದ್ದರೆ ಶಿಕ್ಷೆಗೆ ಗುರಿಪಡಿಸಲಾಗುವುದು.

ವಿಜ್ಞಾನ ಮತ್ತು ತಂತ್ರಜ್ಞಾನ

ಚಂದ್ರನಡೆಗೆ ಅದರಿಂದಾಚೆಗೆ

ಬಿಜೆಪಿ ಸರ್ಕಾರ ಆಕ್ರಮಣಕಾರಿ ಶೈಲಿಯಲ್ಲಿ ದೇಶದ ನಾಗರಿಕರ ಉಪಯೋಗಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆ ದೃಷ್ಟಿಯಿಂದ ಮುನ್ನುಗ್ಗಿ ವಿಶ್ವ ಮಟ್ಟದಲ್ಲಿ ದೊಡ್ಡ ಶಕ್ತಿಯಾಗಿಸಲಿದೆ. ನಮ್ಮ ವಿಜ್ಞಾನ ಮತ್ತು ತಂತ್ರಜ್ಞಾನ ಹೆಚ್ಚು ವಿನೂತನ ಅವಿಷ್ಕಾರಗಳನ್ನು ಬಹುಮುಖವಾಗಿ ಹಾಗೂ ಪರಿಣಾಮಕಾರಿಕಾಗಿ ಉಪಯೋಗಿಸಿ ಸಮಾಜಕ್ಕೆ ನೆರವಾಗಬೇಕಿದೆ.

ಶ್ರೀ ಅಟಲ್ ಬಿಹಾರಿ ವಾಜಪೇಯಿ ಚಂದ್ರಯಾನ–ಭಾರತದವರು ಚಂದ್ರನ್ನು ತಲುಪುವ ಗುರಿಯ ಭರವಸೆ ನೀಡಿದ್ದರು. ಅದನ್ನು ನಮ್ಮ ವಿಜ್ಞಾನಿಗಳು ಪೂರೈಸಿದ್ದಾರೆ. ಚಂದ್ರಯಾನ–II  ನಮ್ಮ ಗುರಿ. ಐದು ವರ್ಷದಲ್ಲಿ ಭಾರತೀಯರು ಚಂದ್ರಗ್ರಹದಲ್ಲಿ ತಮ್ಮ ಹೆಜ್ಜೆ ಮೂಡಿಸಲಿದ್ದಾರೆ.

ರಾಷ್ಟ್ರದ ರಕ್ಷಣಾ ಸಾಮರ್ಥ್ಯ, ವೈಜ್ಞಾನಿಕ ಬೆಳವಣಿಗೆ, ಸಮೀಕ್ಷೆಗಾಗಿ 'ಸೂಪರ್ ಕಂಪ್ಯೂಟರ್' ಯುಗ ಸ್ಥಾಪಿಸಬೇಕಿದೆ.

ಪ್ರಮುಖ ಪಾತ್ರವನ್ನು ಬಿಜೆಪಿ ವಿಜ್ಞಾನ, ತಂತ್ರಜ್ಞಾನವನ್ನು ಜನರ ಜೀವನದ ಗುಣಮಟ್ಟ ಹೆಚ್ಚಿಸಲು ಅದರಲ್ಲೂ ಸಮಾಜದ ಕೆಳವರ್ಗಕ್ಕೂ ಪಸರಿಸಲು ಬದ್ಧವಾಗಿದೆ. . ಸಂಪನ್ಮೂಲ ಉಪಯೋಗಿಸಿ ಪ್ರಕೃತಿ ಸಂರಕ್ಷಣೆ, ರಾಷ್ಟ್ರೀಯ ರಕ್ಷಣೆ ಮಾಡುವುದರ ಜೊತೆಗೆ ವಿಶ್ವಮಟ್ಟದಲ್ಲೂ ಸ್ಪರ್ಧೆ ನೀಡಲಿದೆ.

1) ನಮ್ಮ ಗುರಿ ಆಹಾರ, ವ್ಯವಸಾಯ, ಪೌಷ್ಠಿಕಾಂಶ, ಪರಿಸರ, ನೀರು, ಆರೋಗ್ಯ ಹಾಗೂ ಶಕ್ತಿ ಸಂರಕ್ಷಣೆ ದೇಶದ ಜನರಿಗೆ ಒದಗಿಸುವುದು.

2) ಬಡತನ ನಿರ್ಮೂಲನೆ,  ಬದುಕಿನ ಸೌಕರ್ಯ ಹೆಚ್ಚಿಸುವುದು. ಹಸಿವು ಮತ್ತು ಅಪೌಷ್ಟಿಕಾಂಶದ ನಿವಾರಣೆ, ಪ್ರಾದೇಶಿಕ ಅಸಮತೋಲನ, ಗುಲಾಮಗಿರಿ ನಿರ್ಮೂಲನೆ, ಉದ್ಯೋಗ ದೊರಕಿಸುವುದು, ಇವೆಲ್ಲವನ್ನು ವೈಜ್ಞಾನಿಕ ತಾಂತ್ರಿಕ ಶಕ್ತಿಯಿಂದ ಹಾಗೂ ಸಾಂಪ್ರದಾಯಿಕ ಜ್ಞಾನದಿಂದ ಮಾಡಲಾಗುವುದು.

3) ಉತ್ಕೃಷ್ಟ ಸಾಮರ್ಥ್ಯವುಳ್ಳ ಕೇಂದ್ರಗಳ ಸ್ಥಾಪನೆ, ಅದರಿಂದ ಉದ್ಯೋಗದ ಮಟ್ಟ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚುವುದು ಹಾಗೂ ಸೂಕ್ತ ಉದ್ಯೋಗ ಸೃಷ್ಟಿಯಾಗುವುದು.

4) ಮಹಿಳಾ ಸಾಮರ್ಥ್ಯಕ್ಕೆ ಬೆಂಬಲ ವೈಜ್ಞಾನಿಕ ಹಾಗೂ ತಂತ್ರಜ್ಞಾನ ವಲಯದಲ್ಲಿ ಸಮಾನವಾಗಿ ಭಾಗಿಯಾಗಿರುವಂತೆ  ನೋಡಿಕೊಳ್ಳುವುದು.

5) ಎಲ್ಲ ಶಿಕ್ಷಕರ ಹಾಗೂ ಸಂಶೋಧನ ಮತ್ತು ಅಭಿವೃದ್ಧಿ ಸಂಸ್ಥೆಗಳಿಗೆ ಸಂಪೂರ್ಣ ಸ್ವಾಯತ್ತತೆ ಹಾಗೂ ಸ್ವಾತಂತ್ರ್ಯ ನೀಡಿ ವೈಜ್ಞಾನಿಕ ಹಾಗೂ ತಾಂತ್ರಿಕ ಉದ್ಯಮಿಗಳು ಸಾಮಾಜಿಕ ಬದ್ಧತೆ ಹಾಗೂ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಲು ವಕಾಶ ಕಲ್ಪಿಸಲಾಗುವುದು.

6) ರಾಷ್ಟ್ರೀಯ ಭದ್ರತೆಗೆ ರೂಪುರೇಷೆ ರಚಿಸುವುದಕ್ಕೆ ಅತ್ಯಾಧುನಿಕ ವೈಜ್ಞಾನಿಕ ತಂತ್ರಜ್ಞಾನ ಬಳಕೆ.

7) ಸಂಶೋಧನೆ, ಅವಿಷ್ಕಾರಗಳನ್ನು ಪ್ರೋತ್ಸಾಹಿಸುವುದು. ಖಾಸಗಿ ಹಾಗೂ ಸಾರ್ವಜನಿಕ ಕ್ಷೇತ್ರಗಳ ಆರ್ಥಿಕ, ಸಾಮಾಜಿಕ ಬೆಳವಣಿಗೆಗೆ ಸಹಾಯವಾಗುವುದು. ಕೃಷಿ ವಲಯ (ಮುಖ್ಯವಾಗಿ ನೀರಾವರಿ, ಮನುಷ್ಯ ಹಾಗೂ ಪ್ರಾಣಿ ಪೌಷ್ಠಿಕಾಂಶ, ಮೀನುಗಾರಿಕೆ) ನೀರು, ಆರೋಗ್ಯ, ಶಿಕ್ಷಣ, ಕಾರ್ಖಾನೆ, ವಿದ್ಯುತ್ ಶಕ್ತಿ, ಹೊಸ ವಿದ್ಯುತ್ ಶಕ್ತಿ, ಅತ್ಯಂತ ಗರಿಷ್ಠ ಆದ್ಯತೆ. ಐಟಿ, ಬಿಟಿ ಹಾಗೂ ಇನ್ನಿತರ ತಂತ್ರಜ್ಞಾನಕ್ಕೆ ವಿಶೇಷ ಆದ್ಯತೆ ನೀಡಲಾಗುವುದು.

8) ಹೊಸದಾಗಿ ಐಪಿಆರ್ (ಬುದ್ಧಿ ಶಕ್ತಿಯ ಸ್ವತ್ತಿನ ಹಕ್ಕು ಇಂಟೆಲೆಕ್ಚ್ಯುಯಲ್ ಪ್ರಾಪರ್ಟಿರೈಟ್) ಸ್ಥಾಪನೆ, ಸಂರಕ್ಷಣೆ, ನೂತನ ಅವಿಷ್ಕಾರ ಮಾಡುವವರಿಗೆ.

9) ಮಾಹಿತಿಯೇ ಮೂಲ ಬೆಳವಣಿಗೆಗೆ ಕಾರಣ. ಅತೀ ವೇಗದ ಮಾಹಿತಿ ಪಡೆಯುವಿಕೆ, ಗುಣಮಟ್ಟ ಹಾಗೂ ಗಾತ್ರದಲ್ಲಿ ಎಲ್ಲರಿಗೂ ಎಟಕುವ ಬೆಲೆಯಲ್ಲಿ ಭಾರತೀಯ ದೇಸಿ ವಸ್ತು ಸಾಮಗ್ರಿ ಒದಗಿಸುವುದು.

10)ಪ್ರಕೃತಿ ವಿಕೋಪ ಎದುರಿಸುವ ನಿಟ್ಟಿನಲ್ಲಿ  ಸಂಶೋಧನೆಯನ್ನು ಕೈಗೊಳ್ಳುವುದು. ಬರ, ಭೂಕಂಪ, ಭೂಕುಸಿತ, ಚಂಡಮಾರುತ ಪತ್ತೆ ಹಚ್ಚುವಿಕೆಗೆ ಬಳಕೆ.

11) ಅಂತರರಾಷ್ಟ್ರೀಯ ಮಟ್ಟದ ವೈಜ್ಞಾನಿಕ ತಂತ್ರಜ್ಞಾನವನ್ನು ರಾಷ್ಟ್ರೀಯ ಅಭಿವೃದ್ಧಿ ಹಾಗೂ ರಕ್ಷಣೆಗೆ ಬಳಸಲಾಗುವುದು.

ಬಿಜೆಪಿ ಈ ಬಗ್ಗೆ ವಿಶೇಷ ಗಮನ ಹರಿಸಲಿದೆ.

1) ವಿಜ್ಞಾನ, ವೈದ್ಯಕೀಯ, ಕೃಷಿ ಹಾಗೂ ಎಂಜಿನಿಯರಿಂಗ್ ಸಂಸ್ಥೆಗಳಲ್ಲಿ ವಿಶೇಷ ಸಂಶೋಧನೆ ಮಾಡಲು ಹಣ ಹೂಡಿಕೆ.

2) ಅವಿಷ್ಕಾರಗಳ ಪ್ರೋತ್ಸಾಹಕ್ಕೆ ರಾಷ್ಟ್ರೀಯ ಅವಿಷ್ಕಾರ ಯೋಜನೆ.

3) ಸ್ವಾತಂತ್ರ ಹೋರಾಟ , ವೈಜ್ಞಾನಿಕ ತಂತ್ರಜ್ಞಾನ ವರ್ಗ ಮಾಡುವ ಸಂಸ್ಥೆ ಸ್ಥಾಪನೆ. ರಾಷ್ಟ್ರಮಟ್ಟದ ಪ್ರಯೋಗಾಲಯಗಳು ಅರಿವಿನ ತಿಳಿವಳಿಗೆ ಕಾರ್ಖಾನೆಗಳಿಗೆ ರವಾನಿಸುವುದು. ಅದರ ಆಶೋತ್ತರಗಳಿಗೆ ಕಾರ್ಖಾನೆಯನ್ನು ಪ್ರೋತ್ಸಾಹಿಸಿ ಶಿಕ್ಷಣ–ತಂತ್ರಜ್ಞಾನ ಸಂಶೋಧನೆಗೆ ಸಹಾಯವಾಗುವಂತೆ ಮಾಡುವುದು.

4) ರಾಷ್ಟ್ರದ ಶ್ರೀಮಂತಿಕೆ ಹೆಚ್ಚಳಕ್ಕೆ ಹಾಗೂ ಉದ್ಯೋಗ ಹೆಚ್ಚಳಕ್ಕೆ ನಮ್ಮ ಶ್ರೀಮಂತ ಪರಂಪರೆ ಹಾಗೂ ಜ್ಞಾನವನ್ನು ಬಳಸಲಾಗುವುದು.

5) ಐಪಿಆರ್ ಅನ್ನು ವಿಸ್ತಾರವಾದ ರೀತಿಯಲ್ಲಿ ಸಾಮಾಜಿಕ, ಆರ್ಥಿಕ, ತಾಂತ್ರಿಕ, ರಾಜಕೀಯ ಸಿದ್ಧಾಂತ ಒಳಪಡಿಸಲಾಗುವುದು. ಸಂಶೋಧನೆ ಅಭಿವೃದ್ಧಿ ಕೇಂದ್ರಗಳನ್ನು ಪ್ರೋತ್ಸಾಹಿಸಲಾಗುವುದು.

ಮಾಹಿತಿ ತಂತ್ರಜ್ಞಾನದ ಸದ್ಬಳಕೆ ಪ್ರಜಾಪ್ರಭುತ್ವ ಭಾರತವನ್ನು ಇನ್ನಷ್ಟು ಸದೃಢ ಮಾಡುವುದೇ ಅಲ್ಲದೆ ಆಧ್ಯಾತ್ಮಿಕ ಸಾಂಪ್ರದಾಯಿಕವನ್ನಾಗಿಸುವುದು, ಮಿಲಿಟರಿ ಶಕ್ತಿ ಅಲ್ಲದೆ ದೇಶ ಆರ್ಥಿಕ–ಸಾಮಾಜಿಕವಾಗಿ ಕಟ್ಟುವುದು ನಮ್ಮ ಗುರಿ. ನಮ್ಮ ವೈಜ್ಞಾನಿಕ ಮತ್ತು ತಂತ್ರಜ್ಞಾನದ ರೂಪು ರೇಷೆಗಳು ವಿಶ್ವದ ಮಟ್ಟದಲ್ಲಿ ಶಾಂತಿ ನೆಮ್ಮದಿ ಕಾಣುವುದಾಗಿದೆ.

ವೈಜ್ಞಾನಿಕ, ತಂತ್ರಜ್ಞಾನದ ಬೆಳವಣಿಗೆ ಪ್ರತಿಯೊಬ್ಬ ಭಾರತೀಯನ ಜೀವನ ಮಟ್ಟದಲಿ ಏರಿಕೆ ಕಂಡು ಎಲ್ಲರಲ್ಲೂ ಮಾನವೀಯತೆ ಹೆಚ್ಚಿಸುವುದಾಗಿದೆ.

ಮಾಹಿತಿ ತಂತ್ರಜ್ಞಾನ

ಇಂಡಿಯಾದೇ ಸೂಪರ್ ಪವರ್

ಎನ್‌ಡಿಎ ಸರ್ಕಾರ ಐಸಿಟಿಯನ್ನು ಬಹುಮುಖ್ಯ ವಿಭಾಗಗಳಲ್ಲಿ ಜಾರಿಗೊಳಿಸುವುದಾಗಿತ್ತು. ಇದು ನಮ್ಮ ದೊಡ್ಡ ಸಾಧನೆಯಾಗಿತ್ತು. ಅದನ್ನು ಈಗ ಮತ್ತಷ್ಟು ಬಲಗೊಳಿಸಿ ಚುರುಕಾಗಿ ಕಾರ್ಯಸಿದ್ಧಿಯಾಗುವುದಾಗಿದೆ. ಒಂದು ವಿಶೇಷ ಐಟಿ ಕಾಗದ ಪತ್ರ ಹೊರಡಿಸಿ ಅದರಲ್ಲಿ ನಿರ್ದಿಷ್ಟ ಯೋಜನೆಗಳನ್ನು ತರಲು ಬಿಜೆಪಿ ಇಚ್ಛಿಸುತ್ತದೆ.

1) ಗ್ರಾಮೀಣ ಭಾರತದಲ್ಲಿ ಐಟಿ ಆಧಾರಿತ 1.2 ಕೋಟಿ ಉದ್ಯೋಗ ಸೃಷ್ಟಿ.

2) ಎಲ್ಲಾ ವಿದ್ಯಾರ್ಥಿಗಳಿಗೆ ಕಂಪ್ಯೂಟರ್‌ಗಳು ಸಿಕ್ಕುವಂತೆ ಮಾಡುವುದು.

3) ಎಲ್ಲಾ ಶಾಲೆಗಳಲ್ಲಿ ಮಾಹಿತಿ ಪಡೆಯಲು ಅಂತರ್ಜಾಲ ವ್ಯವಸ್ಥೆ ಕಲ್ಪಿಸುವುದು.

4) ರಾಷ್ಟ್ರೀಯ ಡಿಜಿಟಲ್ ಹೆದ್ದಾರಿಯನ್ನು ಅಭಿವೃದ್ಧಿ ಯೋಜನೆ ಮೂಲಕ ಬ್ರಾಡ್‌ಬ್ಯಾಂಡ್ ಅಂತರ್ಜಾಲ ಸಂಪರ್ಕ ಎಲ್ಲಾ ಹಳ್ಳಿಗಳಿಗೂ ಒದಗಿಸುವುದು.

5) ಪ್ರತಿಯೊಬ್ಬ ಭಾರತೀಯನಿಗೆ ಬ್ಯಾಂಕ್ ಖಾತೆ ತೆಗೆದು ಕಲ್ಯಾಣ ನಿಧಿ ಅಲ್ಲಿ ತುಂಬಿಸುವುದರಿಂದ ದುರ್ಬಳಕೆ ಭ್ರಷ್ಟಾಚಾರ ತಡೆಗಟ್ಟಿದಂತಾಗುತ್ತದೆ.

6) ವಿಡಿಯೋ, ಕಾನ್‌ಫೆರೆನ್ಸ್ ಸೌಲಭ್ಯ ಒದಗಿಸುವುದು.

7) ಇಂಟರ್‌ನೆಟ್ ಬಳಕೆದಾರರ ಹಾಗೂ ಮೊಬೈಲ್ ಬಳಕೆದಾರರು ಸಮನಾಗಿಸೋದು.

8) ಆರೋಗ್ಯ ಕೇಂದ್ರಗಳಲ್ಲಿ ರಾಷ್ಟ್ರೀಯ ಟೆಲಿಮೆಡಿಸಿನ್ ಸಂಪರ್ಕ ಕಲ್ಪಿಸುವುದು.

9) ವ್ಯವಸಾಯ, ಗ್ರಾಮೀಣಾಭಿವೃದ್ಧಿ, ಎಸ್.ಎಂ.ಇ., ಚಿಲ್ಲರೆ ವ್ಯಾಪಾರ, ಅಸಂಘಟಿತ ವಿಭಾಗಗಳಲ್ಲಿ ಐಟಿ ಉಪಯೋಗ ಪಡೆಯುವುದು.

10) ರಾಷ್ಟ್ರದ ಇ–ಅಧಿಕಾರ ಸರ್ಕಾರಿ ಕಚೇರಿಗಳಲ್ಲೂ ಹಾಗೂ ಪಂಚಾಯತ್ ಮಟ್ಟದಲ್ಲಿ ತರುವುದು ಗುಜರಾತ್ ರಾಜ್ಯದಲ್ಲಿರುವ 'ಇ–ಗ್ರಾಮ, ವಿಶ್ವಗ್ರಾಮ' ಯೋಜನೆ ದೇಶದ ಎಲ್ಲಾ ರಾಜ್ಯಗಳಿಗೂ ವಿಸ್ತರಿಸುವುದು.

11) ಎಲ್ಲಾ ಅಂಚೆ ಕಛೇರಿಗಳನ್ನು ಐಟಿ ಸಂಪರ್ಕ ಹೊಂದಿಸುವುದು. ಬಹುಮುಖೀ ಶಾಖೆಗಳನ್ನಾಗಿಸುವುದು. ಇಂಟರ್‌ನೆಟ್ ಸೌಲಭ್ಯ ಟೆಲಿಫೋನ್ ಬೂತ್‌ಗಳನ್ನು ಸಾಧ್ಯವಾಗಿಸುವುದು

12) ಇ–ಭಾಷೆ– ಐಟಿ ಸೌಲಭ್ಯ ಕಲ್ಪಿಸಲು ರಾಷ್ಟ್ರೀಯ ಆಂದೋಲನ ರಾಷ್ಟ್ರೀಯ ಮಟ್ಟದಲ್ಲಿ ಐಟಿ ಪ್ರೋತ್ಸಾಹ ಭಾರತೀಯ ಭಾಷೆಗಳಿಗೂ ಕಲ್ಪಿಸುವುದು.

13) ಮಹಿಳೆಯರಿಗೆ ಎಸ್.ಸಿ./ಎಸ್.ಟಿ./ ಇತರ ಹಿಂದುಳಿದ ವರ್ಗದವರಿಗೆ ಹಾಗೂ ದುರ್ಬಲರಿಗೆ ಐಟಿ ಯೋಜನೆಯಲ್ಲಿ ತರುವುದು.

14) ಭಾರತದ ಸಾಂಸ್ಕೃತಿಕ ವಂಶಪಾರಂಪರ್ಯವಾದ ಬೆಲೆ ಕಟ್ಟಲಾಗದ ಪರಂಪರೆಯನ್ನು ಐಟಿ ಮುಖಾಂತರ ಸಂರಕ್ಷಣೆ ಮಾಡುವುದು.

15) 'ಮುಕ್ತ ಮಟ್ಟದಲ್ಲಿ' ಮುಕ್ತ ಸಂಪನ್ಮೂಲ ಸಾಫ್ಟ್‌ವೇರ್‌ನ್ನು ಸರ್ಕಾರ ಪ್ರೋತ್ಸಾಹಿಸುವುದು.

16) ಗೃಹ ಐಟಿ ಹಾರ್ಡ್‌ವೇರ್ ತಂತ್ರಜ್ಞಾವನ್ನು ಬಳಸಿ ಆಮದು ಮಾಡಿಕೊಳ್ಳುವುದನ್ನು ಕಡಿಮೆ ಮಾಡುವುದು ಮಾಡಲು ಐಟಿ ಕಾರ್ಯ ನಿರ್ವಹಿಸುವುದು.
17) ದೇಸಿ ಸಮೂಹವ್ನು ಪ್ರೋತ್ಸಾಹಿಸುವುದು ಹಾಗೂ ಅಂತರರಾಷ್ಟ್ರೀಯ ಬ್ಯಾಂಡ್‌ವಿಡ್ತ್ ಶುಲ್ಕ ಕಡಿಮೆಗೊಳಿಸುವುದು.

ಕ್ರೀಡೆಗೆ ಪ್ರೋತ್ಸಾಹ
ಯುವಜನತೆ ಆರೋಗ್ಯ ಸ್ಪರ್ಧಾತ್ಮಕತೆ ಹೆಚ್ಚಿಸುವುದು.
ಅಂತರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆಯು ಪಸರಿಸಲು ಬಿಜೆಪಿ ಎಲ್ಲಾ ರೀತಿಯ ಕ್ರೀಡೆಗಳನ್ನು ಪ್ರೋತ್ಸಾಹಿಸಲು ಖರ್ಚು ಮಾಡಲಿದೆ. ಭಾರತವನ್ನು ಕ್ರೀಡೆಯಲಿ ಮುಂದುವರಿವ ರಾಷ್ಟ್ರವನ್ನಾಗಿಸಿ ಮಾಡುವುದು ಪ್ರೋತ್ಸಾಹದಿಂದ ಸಾಧ್ಯ. ಅದು ಕೇವಲ ಐದು ವರ್ಷದಲ್ಲಿ .
1) ಶಾಲೆಯಲ್ಲಿ ಕ್ರೀಡೆ ಕಡ್ಡಾಯವಾಗಿಸುವುದು. ಭಾರತೀಯ ಸಂಪನ್ಮೂಲ ಇಲಾಖೆ ಈ ದೃಷ್ಟಿಯಲ್ಲಿ ಶಾಲೆ, ಕಾಲೇಜು ಹಾಗೂ ಯೂನಿವರ್ಸಿಟಿಗಳಿಗೆ ತಮ್ಮ ಹಾಗೂ ರಾಜ್ಯ ಸರ್ಕಾರದ ಮೂಲಕ ಸಂಪನ್ಮೂಲ ಒದಗಿಸುತ್ತದೆ. 5000 ಕೋಟಿಯನ್ನು ಯುಜಿಸಿ ಕೇಂದ್ರ ಶಿಕ್ಷಣ ಸಂಸ್ಥೆ, ಸಂಘಟನೆಗಳು ಹಾಗೂ ರಾಜ್ಯ ಸರ್ಕಾರದ ಮೂಲಕ ಕ್ರೀಡೆ ಹಾಗೂ ಯುವಜನ ಅಭಿವೃದ್ಧಿಗೆ ಬಳಸಲಾಗುವುದು.
2) ರಾಷ್ಟ್ರೀಯ ಮಟ್ಟದಲ್ಲಿ ಪ್ರತಿಭಾನ್ವೇಷಣೆ ಕ್ರೀಡೆಯ ವಿಭಾಗದಲ್ಲಿ ಸೃಷ್ಟಿಸಿ ಕಿರಿಯ ವಯಸ್ಸಿನ ಯುವ ಜನತೆಗೆ ಪ್ರೋತ್ಸಾಹ ತುಂಬುವುದು. ವಿಶೇಷ ತರಬೇತಿ ಪ್ರತಿಭಾನ್ವಿತರಿಗೆ ಅಳವಡಿಸುವುದು. ಈಗಿರುವ ರಾಷ್ಟ್ರೀಯ ಮಹಿಳಾ ಗ್ರಾಮೀಣ ಕ್ರೀಡೆ ವಿಸ್ತರಿಸಿ ಎಲ್ಲಾ ಹಳ್ಳಿಗಳಿಗೂ ತಲುಪುವಂತೆ ಮಾಡುವುದು. ಗ್ರಾಮೀಣ ಪ್ರತಿಭೆ ಹುಡುಕಿ ಸರಿಯಾಗಿ ರೂಪಿಸುವುದು.
3) ಕೋಚ್‌ಗಳಿಗೆ ವಿಶೇಷ ತರಬೇತಿ ನೀಡಿ ನಮ್ಮ ಕ್ರೀಡಾಪಟುಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಲು ನೀಡುವುದು. ಪ್ರತಿ ವರ್ಷ 1000 ಕೋಟಿ ವೆಚ್ಚವನ್ನು ಅಂತರರಾಷ್ಟ್ರೀಯ ಮಟ್ಟದ ತರಬೇತಿ ಹಾಗೂ ಸ್ಪರ್ಧೆಗೆ ನೀಡಲಾಗುವುದು.
4) ಪ್ರಶಸ್ತಿ ಪಡೆದವರಿಗೆ ಖಾಸಗಿ ಹಾಗೂ ಸಾರ್ವತ್ರಿಕ ಇಲಾಖೆಗಳಲ್ಲಿ ರಾಷ್ಟ್ರೀಯ ಕ್ರೀಡೆ, ಕಾಮನ್‌ವೆಲ್ತ್, ಏಷ್ಯನ್ ಗೇಮ್ಸ್, ಒಲಂಪಿಕ್‌ಲ್ಲಿ ಉದ್ಯೋಗಾವಕಾಶ. ಈಗಿರುವ ಸಿ ಮತ್ತು ಡಿ ಪಂಗಡವನ್ನು ನವೀಕರಿಸಿ ಎ ಮತ್ತು ಬಿ ತಂಡಕ್ಕೂ ಈ ಉದ್ಯೋಗಾವಕಾಶ ವಿಸ್ತರಿಸಲಾಗುವುದು. ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಯಲ್ಲಿ ಪ್ರಶಸ್ತಿ ಪಡೆದವರಿಗೆ ಸಾರ್ವತ್ರಿಕ ಸಂಸ್ಥೆಗಳು ಎ ಮತ್ತು ಬಿ ಗುಂಪಿನಲ್ಲಿ ಉದ್ಯೋಗ ನೀಡಬೇಕು.
5) ವ್ಯಾಪಾರಿ ಕುಟುಂಬಗಳಿಗೆ ಪ್ರೋತ್ಸಾಹ ನೀಡಿ ಸ್ವಲ್ಪ ಭಾಗದ ಸಂಪನ್ಮೂಲ ಕ್ರೀಡೆಗೆ ಮೀಸಲಿಡುವಂತೆ ಮಾಡುವುದು. ರಾಜ್ಯ, ಜಿಲ್ಲಾ ಮಟ್ಟದಲ್ಲಿ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ಸ್ಥಾಪಿಸುವುದಕ್ಕೆ, ಕ್ರೀಡೆಗೆ ಬೇಕಾದ ಮೂಲಭೂತ ಸೌಕರ್ಯ ಒದಗಿಸಿದರೆ ಅಂತಹವರಿಗೆ ತೆರಿಗೆ ವಿನಾಯಿತಿ ನೀಡಲಾಗುವುದು.
6) ವಿವಿಧ ಸಂಸ್ಥೆಗಳಿಗೆ ಕ್ರೀಡೆಗೆ ಪ್ರೋತ್ಸಾಹ ನೀಡುವಂತೆ ಹಾಗೂ ನಮ್ಮ ಕ್ರೀಡಾಪಟುಗಳು ಹೇಗೆ ನಮ್ಮ ಕ್ರೀಡೆಗಳಲ್ಲಿ ಮುಂದುವರೆಯಲು ಅವರಿಗೆ ನೆರವು ನೀಡುವುದು ಅವಶ್ಯಕ ಎಂಬುದನ್ನು ಮನವರಿಕೆ ಮಾಡಿಕೊಡಲಾಗುವುದು.

7) ಈಗಿರುವ ಎಂಪಿಎಲ್‌ಎಡಿ ಬದಲಿಸುವುದಕ್ಕೆ ಯೋಜನೆ ಸಿದ್ಧಪಡಿಸಿ ಎಂ.ಪಿ.ಗಳ ನಿಧಿಯನ್ನು ಹೆಚ್ಚು ಸಾಹಸ ಕ್ರೀಡೆಗಳಿಗೆ ಬಳಸುವಂತೆ ಮಾಡುವುದು.

8) ಎಲ್ಲಾ ನಿವಾಸಿ ಬಡಾವಣೆಗಳು ಕ್ರೀಡೆ ವ್ಯವಸ್ಥೆ ಹೊಂದುವಂತೆ ಮಾಡುವುದು.

9) ಎಲ್ಲಾ ರಾಜ್ಯಗಳಲ್ಲೂ ಕ್ರೀಡೆಗಳ ಪ್ರೋತ್ಸಾಹಕ್ಕೆ ಸಹಾಯ ಒದಗಿಸಿ ಅವರೂ ತಮ್ಮ ಜವಾಬ್ದಾರಿ ನಿರ್ವಹಿಸಲು ಸಹಕರಿಸುವುದು.

ಸ್ತ್ರೀಶಕ್ತಿ ಸಾಮರ್ಥ್ಯ

ಅಭಿವೃದ್ಧಿಯಲ್ಲಿ ನಾರೀ ಶಕ್ತಿ ಪಾತ್ರ

ಬಿಜೆಪಿ ವಿರೋಧಿ ಪಕ್ಷಗಳು ನಾರೀ ಶಕ್ತಿ ಸಾಮರ್ಥ್ಯದ ಬಗ್ಗೆ ಹೇಳುತ್ತಾರೆ. ಆದರೆ ಏನನ್ನೂ ಮಾಡಲಿಲ್ಲ. ಕಾಂಗ್ರೆಸ್ ಪಕ್ಷ ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ಮಹಿಳಾ ಮೀಸಲು ತರುವುದಾಗಿ ಹೇಳಿತು. ಅದು ಯಾವ ಬದ್ಧತೆಯನ್ನು ತೋರಲೇ ಇಲ್ಲ. ಬಿಜೆಪಿ ಸರ್ಕಾರ ಶೇ. 33 ಮಹಿಳಾ ಮೀಸಲಿಗೆ ಬದ್ಧವಾಗಿದೆ ಹಾಗೂ ಆ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಿದೆ.

ಸ್ತ್ರೀಶಕ್ತಿ ಸಾಮರ್ಥ್ಯಕ್ಕೆ ಬಿಜೆಪಿ ಬೆಳಕು ಚೆಲ್ಲಲು:–

1 ಲಾಡ್ಲಿ ಲಕ್ಷ್ಮಿ ಯೋಜನೆ. ಇದು ಮಧ್ಯಪ್ರದೇಶದಲ್ಲಿ ಅಭೂತಪೂರ್ವ ಯಶಸ್ಸು ಕಂಡಿದೆ. ಕಾಲೇಜಿನವರೆಗೂ ಹೆಣ್ಣು ಮಕ್ಕಳು ಶಿಕ್ಷಣ ಪಡೆಯುವುದು ಇದರ ಉದ್ದೇಶ. ಆರನೇ ತರಗತಿವರೆಗೂ ಪ್ರತಿ ಹೆಣ್ಣು ಮಕ್ಕಳು 2000 ರೂಪಾಯಿ ಪಡೆಯುತ್ತಾರೆ. 9ನೇ ತರಗತಿವರೆಗೂ ರೂ. 4000, 11ನೇ ತರಗತಿವರೆಗೂ 7,500 ಮತ್ತು 21 ವರ್ಷ ತಲುಪಿದ ಮೇಲೆ ರೂ. 1,10,000 ಪಡೆಯಲಿದ್ದಾರೆ. ವಾರ್ಷಿಕ 2400 ರೂಪಾಯಿ ವಿದ್ಯಾರ್ಥಿ ವೇತನ 6ನೇ ತರಗತಿ ನಂತರ ಶಾಲೆಯಲ್ಲಿ ಉಳಿದರೆ ಪಡೆಯುವರು.

2) ಮಷ್ಬಾ ಬಾ ಮೋಕ್ಷಾ ವಿತ್ತೀಯ ಶಶಕ್ತಿಕಿರಣ ಏವಂ ನಾರೀ ಸಮೃದ್ಧಿ ಯೋಜನೆ ಅಳವಡಿಸುವುದು. ರಾಜಾಸ್ತಾನದಲ್ಲಿ ಬಿಜೆಪಿ ಸರ್ಕಾರ ಈ ಯೋಜನೆ ಅನುಷ್ಠಾನಗೊಳಿಸಿದೆ. ಇದರಿಂದ ಆರ್ಥಿಕವಾಗಿ ಮಹಿಳೆಯನ್ನು ಅಭಿವೃದ್ಧಿಗೊಳಿಸುವುದು. ಬಡತನ ರೇಖೆಗಿಂತ ಕಡಿಮೆ ಇರುವ ಪರಿಶಿಷ್ಟ ಜಾತಿ, ವರ್ಗ ಹಾಗೂ ಅತೀ ಸಣ್ಣ ವ್ಯವಸಾಯ ಮಾಡುವವರು ಗಮನದಲ್ಲಿಟ್ಟುಕೊಂಡು ಸ್ಮಾರ್ಟ್ ಕಾರ್ಡ್ ಸ್ಥಾಪಿಸಿ ಮಹಿಳೆಯೇ ತನ್ನ ಬ್ಯಾಂಕ್ ಖಾತೆ ಉಪಯೋಗಿಸುವಂತೆ ಮಾಡುವುದು. ಆರಂಭಿಕ ರೂ. 1500 ಅವರ ಹೆಸರಲ್ಲಿ ಸಂಗ್ರಹಿಸಿಡಲಾಗುವುದು. ಗ್ರಾಮೀಣ ಭಾರತದ ಸಣ್ಣಪುಟ್ಟ ಹಳ್ಳಿಗಳಲ್ಲಿ ಬ್ಯಾಂಕ್ ಶಾಖೆ ಸ್ಥಾಪನೆಯಿಂದ ಉದ್ಯೋಗ ಸೃಷ್ಟಿ ಹಾಗೂ ಕೌನ್ಸಿಲರ್‌ಗಳು ಫಲಾನುಭವಿಗಳಿಗೆ ಮಾರ್ಗದರ್ಶನ ಮಾಡುವರು.

3) ರಾಷ್ಟ್ರೀಯ ಯೋಜನೆ, ರಾಜ್ಯ ಸರ್ಕಾರದ ಜೊತೆ ಸೇರಿ ಬಡತನ ರೇಖೆಗಿಂತ ಕಡಿಮೆ ಇರುವ ಶಾಲಾ ಹೆಣ್ಣು ಮಕ್ಕಳಿಗೆ ಸೈಕಲ್ ನೀಡುವುದು.

4) ಸ್ಥಳೀಯ ಆಡಳಿದಲ್ಲಿ ಅದರಲ್ಲೂ ಪಂಚಾಯತ್‌ರಾಜ್ ಯೋಜನೆಗಳನ್ನು ಮರುಪರಿಶೀಲಿಸಿ ಸ್ತ್ರೀಶಕ್ತಿಗೆ ಆದ್ಯತೆ ನೀಡುವುದು.

5) ರಾಷ್ಟ್ರೀಯ ಯೋಜನೆಯಡಿ ಪ್ರತಿಯೊಬ್ಬ ಮಹಿಳೆ ತನ್ನ ಜೀವನೋಪಾಯಕ್ಕೆ ದುಡಿಯಲು ಸಹಾಯವಾಗಿ ಬೆಳವಣಿಗೆ ದಾರಿ ಕಾಣುವಂತೆ ಮಾಡುವುದು. ಸಂಘಟಿತ ಹಾಗೂ ಅಸಂಘಟಿತ ವಿಭಾಗಗಳಲ್ಲಿ ವೇತನ ತಾರತಮ್ಯ ನಿರ್ಮೂಲನೆ.

6) ಹೆಣ್ಣು ಮಕ್ಕಳಿಗೆ ಆಸ್ತಿ ವಿಚಾರದಲ್ಲಿ, ಮದುವೆ, ಬೀಗತನ ಹಕ್ಕು ವಿಚಾರದಲ್ಲಿ ತಾರತಮ್ಯ ಹೋಗಲಾಡಿಸುವುದು.

7) ಸ್ವಾವಲಂಬನೆ ಹಾಗೂ ಸ್ಟೆಪ್ (ಎಸ್.ಟಿಇ.ಪಿ.) ಯೋಜನೆಗೆ ಪುಷ್ಟಿ. ಮಹಿಳೆ ಸ್ವತಂತ್ರವಾಗಿ ನಡೆಸುವ ಉದ್ಯೋಗಕ್ಕೆ ಹೆಚ್ಚಿನ ರೀತಿಯಲ್ಲಿ ಸಹಾಯ ಒದಗಿಸುವುದು. ಕೈಗಾರಿಕೆ, ಆಹಾರ ಪದಾರ್ಥ, ಕೈಮಗ್ಗ, ಸಿದ್ಧ ಉಡುಪು ಕ್ಷೇತ್ರಗಳನ್ನು ಅಭಿವೃದ್ಧಿಗೆ ಸಹಾಯ ಮಾಡುವುದು. ಈಶಾನ್ಯ ಭಾಗ, ಜಮ್ಮು–ಕಾಶ್ಮೀರ, ಮಾವೋಗಳಿಂದ ತೊಂದರೆಗೊಳಗಾದ ರಾಜ್ಯಗಳಲ್ಲಿ ಇಂತಹ ಉದ್ಯೋಗಿಗಳಿಗೆ ವಿಶೇಷ ಸಹಾಯ.

8) ಮಹಿಳೆಯರಿಗೆ ವಿಶೇಷ ಉದ್ಯೋಗ ಕಲ್ಪಿಸುವ ಸಂಸ್ಥೆಗಳಿಗೆ ಬಹು ವೇಗದಲಿ ಅತ್ಯಂತ ಪ್ರಮುಖವಾಗಿ ಪರಿಗಣಿಸಿ ಕಡಿಮೆ ಬಡ್ಡಿ ದರದಲ್ಲಿ ಸಾಲ ಮಂಜೂರು ಕ್ರಮ.

9) ಭ್ರೂಣ ಹತ್ಯೆ ತಡೆ, ವರದಕ್ಷಿಣೆ ಪಿಡುಗು, ಅಪ್ರಾಪ್ತ ವಯಸ್ಸಿನ ಮದುವೆ, ಅತ್ಯಾಚಾರಕ್ಕೆ, ಕುಟುಂಬ ಕಲಹದಲ್ಲಿ ತೊಂದರೆ ಅನುಭವಿಸಿದ ಮಹಿಳೆಗೆ ಕಾನೂನು ನೆರವು ನೀಡಿ ಇನ್ನಷ್ಟು ಕಾನೂನನ್ನು ಬಿಗಿಗೊಳಿಸುವುದು. ಅತ್ಯಾಚಾರಕ್ಕೆ ಒಳಗಾದ ಮಹಿಳೆಗೆ ಕಾನೂನು ರೀತಿಯಲ್ಲಿ ಯಾವುದೇ ರೀತಿಯಲ್ಲಿ ಹಿಂದೆ ಬೀಳದಂತೆ, ಕ್ರಮ , ಸಂಬಂಧಪಟ್ಟ ಪುರಾವೆಗಳು ಬಲಹೀನವಾಗದಂತೆ ಎಚ್ಚರವಹಿಸುವುದು. ರಾಜ್ಯ ಸರ್ಕಾರಗಳೊಂದಿಗೆ ವಿಶೇಷ ಯೋಜನೆ ರೂಪಿಸಿ ಸಂಪೂರ್ಣ ರಕ್ಷಣೆಗೆ ಮಹಿಳೆಗೆ ಒದಗಿಸುವುದು.

10) ರಾಜ್ಯ ಸರ್ಕಾರದ ನೆರವಿನೊಂದಿಗೆ ನೊಂದು ಬೆಂದ ಮಹಿಳೆಯನ್ನು ಶಕ್ತಿಯುತಳನ್ನಾಗಿ ಮಾಡುವುದು.

11) ಉದ್ಯೋಗಸ್ಥ ಮಹಿಳಾ ಹಾಸ್ಟಲ್‌ಗಳ ಸಂಪರ್ಕ ಹಾಗೂ ಅದರ ಸ್ಥಿತಿಗತಿ ಅಭಿವೃದ್ಧಿಗೊಳಿಸುವುದು.

12) ಅಂಗನವಾಡಿ ಕಾರ್ಯಕರ್ತೆಯರಿಗೆ ಕಡಿಮೆ ಸಂಬಂಳ ಇದೆ. ಅವರು ಮಕ್ಕಳ ಬೆಳವಣಿಗೆ ದೃಷ್ಟಿಯಲ್ಲಿ ದೇಶದ ಬೆನ್ನುಲುಬು. ಅಂತಹವರ ಸಂಬಳವನ್ನು ಎರಡು ಪಟ್ಟು ಹೆಚ್ಚಿಸುವುದು.

ಮಹಿಳಾ ಹಕ್ಕುಗಳ ರಕ್ಷಣೆ

ಸಂವಿಧಾನದ 44ನೇ ವಿಧಿ ಅನ್ವಯ ಸಮಾನ ನಾಗರಿಕ ಸಂಹಿತೆ ಜಾರಿ ರಾಜ್ಯ ಯೋಜನೆಗೆ ಸಂಬಂಧಿಸಿದ್ದು. ಸರ್ವೇಸಾಮಾನ್ಯ ಪ್ರಜಾ ನೀತಿ ಅನುಸರಿಸುವವರೆಗೂ ಸಮಾನತೆ ಸಾಧ್ಯವಿಲ್ಲ. ಮಹಿಳೆಯರ ಹಕ್ಕನ್ನು ರಕ್ಷಿಸುತ್ತದೆ. ಈ ಕಾನೂನು ರಚನೆಗೆ ಬಿಜೆಪಿ ಆಯೋಗ ರಚಿಸಲಿದೆ. ಆಧುನಿಕ ಜಗತ್ತಿನಲ್ಲಿ ಸಮಾನಾಂತರವಾಗಿ ಮಹಿಳೆ ಬದುಕಲು ಅವಕಾಶ ಒದಗಿಸಲಿದೆ. ಲಿಂಗಬೇಧ ಹೋಗಲಾಡಿಸಲು ಮುಸ್ಲಿಂ ದೇಶಗಳನ್ನು ಸಹ ಸಂಪರ್ಕಿಸಲಿದೆ.

ಸಮಾಜದ ದಲಿತರು, ಹಿಂದುಳಿದ ವರ್ಗ ಆರ್ಥಿಕವಾಗಿ ಹಿಂದುಳಿದವರಿಗೆ ಸಾಮಾಜಿಕ ನ್ಯಾಯ ಹಾಗೂ ಸಮತೋಲನ

ಸಾಮಾಜಿಕ ನ್ಯಾಯಕ್ಕೆ ಹಾಗೂ ಸಾಮಾಜಿಕ ಸಾಮರಸ್ಯಕ್ಕೆ ಬಿಜೆಪಿ ಬದ್ಧವಾಗಿದೆ. ದಲಿತರಿಗೆ ಹಾಗೂ ಹಿಂದುಳಿದ ವರ್ಗದವರಿಗೆ ಸಮಾಜದಲ್ಲಿ ಕಾಣುವಂತಹ ಬೆಳವಣಿಗೆ ಹಾಗೂ ಶಕ್ತಿಯನ್ನು ನೀಡಲು ಬಯಸುತ್ತದೆ.
ಬಿಜೆಪಿ ದಲಿತ ಹಾಗೂ ಹಿಂದುಳಿದ ಹಾಗೂ ಮತ್ತಿತರ ವರ್ಗದವರಿಗೆ ಉದ್ಯೋಗ ಸ್ಥಾಪನೆ ಹಾಗೂ ವ್ಯಾಪಾರಕ್ಕೆ ನೇರವಾಗಿ ಸಹಕರಿಸಿ ಆರ್ಥಿಕ ಬೆಳವಣಿಗೆಗೆ ಪ್ರೋತ್ಸಾಹಿಸುವುದು.
ದಲಿತರ ಮೇಲಿನ ಅತ್ಯಾಚಾರ, ಹಿಂದುಳಿದ ವರ್ಗದವರ ಮೇಲಿನ ಅನ್ಯಾಯಗಳನ್ನು ಬಿಜೆಪಿ ಸರಿಪಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.
ತೀರಾ ಹಿಂದುಳಿದ ವರ್ಗಕ್ಕೆ ಕ್ಷಿಪ್ರಗತಿಯಲ್ಲಿ ಸಹಾಯ ಮಾಡಲಾಗುವುದು. ವಿಶೇಷ ಕಾರ್ಯಕ್ರಮಗಳ ಫಲ ಅವರಿಗೆ ಸಿಗುವಂತೆ ಮಾಡುವುದು. ಯುಪಿಎ ಸರ್ಕಾರ 55 ಮಿಲಿಯನ್ ಜನರನ್ನು ಬಡತನ ರೇಖೆಗಿಂತ ಕೆಳಗೆ ದೂಡಿದೆ. ನಿರ್ದಿಷ್ಟ ದಿಟ್ಟ ಕಾರ್ಯಕ್ರಮಗಳಿಂದ ಅವರನ್ನು ಬಡತನ ರೇಖೆಯಿಂದ ಮೇಲೆತ್ತಲಿದೆ.

1) ಸರ್ವಶಿಕ್ಷಣ ಅಭಿಯಾನ ಅಡಿಯಲ್ಲಿ ವಿಶೇಷ ಶಿಕ್ಷಣ ಸೌಲಭ್ಯ.
2) ನೀರು, ಆರೋಗ್ಯ, ಒಳಚರಂಡಿ, ನೈರ್ಮಲ್ಯ ಎಲ್ಲಾ ಕುಟುಂಬಗಳಿಗೆ ಒದಗಿಸುವುದು.
ಹಿಂದುಳಿದ ವರ್ಗದ ಬೆಳವಣಿಗೆಗೆ ಬ್ಯಾಂಕ್ ಸ್ಥಾಪನೆ, ಅವರ ನೈಪುಣ್ಯತೆಗೆ ಅನುಗುಣವಾಗಿ ಕಲಿಕೆ ಜೊತೆ ಗಳಿಕೆ ಯೋಜನೆ . ಇದರಿಂದ ಅವರ ಜೀವನದ ಗುಣಮಟ್ಟದಲ್ಲಿ ಏರಿಕೆ ಕಾಣಬಹುದು.
ಆರ್ಥಿಕ ಆಧಾರದ ಮೇಲೆ ಶಿಕ್ಷಣ ಹಾಗೂ ಉದ್ಯೋಗ ಕಲ್ಪಿಸುವುದು. ಈಗಿನ ಪರಿಶಿಷ್ಟ ಜಾತಿ, ಪಂಗಡ, ಇನ್ನಿತರ ಹಿಂದುಳಿದ ವರ್ಗಕ್ಕೆ ಸೌಲಭ್ಯ ಹಾಗೆ ಮುಂದುವರೆಸುವುದು.

ಬುಡಕಟ್ಟು ಜನರ ಅಭಿವೃದ್ಧಿ

ಸುದೀರ್ಘವಾದ ಯೋಜನ ದೀರ್ಘಾವಧಿ ಯೋಗಕ್ಷೇಮ

ಈ ಹಿಂದಿನಿಂದ ತಿಳಿದು ಬಂದಿರುವುದೇನೆಂದರೆ ಸಣ್ಣ ಪ್ರಮಾಣದ ಹಾಗೂ ತುಂಡರಿಸಿ ನೀಡಲಾದ ಸಹಾಯಹಸ್ತ ಬುಡಕಟ್ಟು ಜನಾಂಗಕ್ಕೆ ಉಪಯೋಗ ಆಗಿಲ್ಲ. ಬಿಜೆಪಿ ಸರ್ಕಾರ ಸದೃಢ, ದೀರ್ಘಾವಧಿ ವಿಚಾರ ಗಮನದಲ್ಲಿಟ್ಟುಕೊಂಡು ಬುಡಕಟ್ಟಿನ ಜನರ ಶಕ್ತಿ ಸಾಮರ್ಥ್ಯ ಹೆಚ್ಚಿಸಲು ಯೋಗಕ್ಷೇಮ ಕಾಪಾಡಲು ಯೋಜಿಸಿದೆ. ಗುಜರಾತ್, ಮಧ್ಯಪ್ರದೇಶ, ಚತ್ತೀಸ್‌ಘಡ್ ಅಳವಡಿಸಿದ ಯೋಜನೆಗಳು ಫಲಕಾರಿಯಾಗಿದೆ.

‘ವನ ಬಂಧು ಕಲ್ಯಾಣ ಯೋಜನೆ’ ರಾಷ್ಟ್ರಮಟ್ಟದಲ್ಲಿ ಹಾಗೂ ‘ಬುಡಕಟ್ಟು ಬೆಳವಣಿಗೆ ಅಧಿಕಾರ’ ಸ್ಥಾಪಿಸಲಿದೆ.

1) ಶಾಲೆ ಕಾಲೇಜುಗಳು, ಇಂಜಿನಿಯರಿಂಗ್, ತಾಂತ್ರಿಕ ಶಿಕ್ಷಣ, ವ್ಯವಸಾಯ, ಇಂಜಿನಿಯರಿಂಗ್ ಕಾಲೇಜು, ನರ್ಸಿಂಗ್ ಶಾಲೆ, ಪಶುಸಂಗೋಪನಾ ಶಾಲೆಗಳ ಸ್ಥಾಪನೆ.

2) ನೀರು ಆರೋಗ್ಯ ವ್ಯವಸ್ಥೆ ಜೊತೆಗೆ ಮನೆಗಳ ನವೀಕರಣ.

3) ಗುಡಿಸಲುಗಳಿಗೆ ವಿದ್ಯುಚ್ಛಕ್ತಿ ಪೂರೈಕೆ ಹಾಗೂ ರಸ್ತೆ ಸಂಪರ್ಕ

4) ವ್ಯವಸಾಯ, ವ್ಯವಸಾ ಉತ್ಪನ್ನ ಶುದ್ಧೀಕರಿಸಲು ಹಾಗೂ ತೋಟಗಾರಿಕೆಗೆ ಆರ್ಥಿಕ ಸಹಾಯ.

5) ಹೈನುಗಾರಿಕೆ ಪ್ರೋತ್ಸಾಹ.

6) ಬಂಬೂ ಕೈಗಾರಿಕೆ, ಸಣ್ಣ ಕೈಗಾರಿಕೆ ಮೂಲಕ ಉದ್ಯೋಗ ಕಲ್ಪಿಸುವುದು.

7) ಬುಡಕಟ್ಟು ಜನರ ಭೂಮಿಯನ್ನು ಪರಾಧೀನವನ್ನಾಗಿ ಮಾಡದಂತೆ ಕ್ರಮ.

8) ಅರಣ್ಯ ಉತ್ಪನ್ನಗಳಿಗೆ ಗ್ರಾಮೀಣ ಮಾರುಕಟ್ಟೆ ಸೌಲಭ್ಯ.

9) ಬುಡಕಟ್ಟು ಜನರ ಸಂಸ್ಕೃತಿ, ಭಾಷೆ ಕಾಪಾಡಲು ರಾಷ್ಟ್ರೀಯ ಅಧ್ಯಯನ ಕೇಂದ್ರ.

10)ಬುಡಕಟ್ಟು ಜನರ ಯೋಗಕ್ಷೇಮ ಹಾಗೂ ಬೆಳವಣಿಗೆಗೆ ಹಣಕಾಸು ಬಿಡುಗಡೆ

ಹಿರಿಯ ನಾಗರಿಕರು

ಗೌರವ ಮತು ಜೋಪಾನ

ಹಿರಿಯ ನಾಗರಿಕರು ಸಮಾಜದಿಂದ ಹಾಗೂ ಸರ್ಕಾರದಿಂದ ಎಲ್ಲಾ ಸಹಾಯವನ್ನು ಅಪೇಕ್ಷಿಸುತ್ತಾರೆ. ಹಿರಿಯರ ಗೌರವ ಜೋಪಾನವಾಗಿ ಕಾಪಾಡುವುದಕ್ಕೆ ಬಿಜೆಪಿ ಸರ್ಕಾರದ ಕಂಕಂಬದ್ಧವಾಗಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ವಿಶೇಷ ವಿಭಾಗವನ್ನು ಹಿರಿಯರ ನಾಗರಿಕರ ವಿಚಾರದಲ್ಲಿ ಸ್ಥಾಪಿಸಲಾಗುವುದು.

1) ಮಾಸಾಶನವನ್ನು ಪರಿಶೀಲಿಸಿ ಇಂದಿನ ಖರ್ಚು, ವೆಚ್ಚಕ್ಕೆ ಅನುಗುಣವಾಗಿ ಸರಿಪಡಿಸಲಾಗುವುದು.

2) 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಠೇವಣಿ ಇಟ್ಟಿರುವುದಕ್ಕೆ ಹೆಚ್ಚಿನ ಬಡ್ಡಿ ದರ ಕಲ್ಪಿಸಿ ಕೊಡುವುದು.

3) ಪ್ರಯಾಣದಲ್ಲಿ ರಿಯಾಯ್ತಿ.

4) ಹಿರಿಯ ನಾಗರಿಕರಿಗೆ ತಾರತಮ್ಯದಿಂದ ಮಾಡದಂತೆ ಆರೋಗ್ಯ ವಿಮೆ ಪಾಲಿಸಿ ಅಳವಡಿಕೆ.

5) ಆದಾಯ ತೆರಿಗೆ ರಿಯಾಯಿತಿ 60 ವರ್ಷದ ನಂತರ. ಈಗಿರುವುದು 65 ವರ್ಷದ ನಂತರ.

6) ಹಿರಿಯ ನಾಗರಿಕರಿಗೆ ಈಗಿರುವ ಮಾಸಾಶನದ ಬಗ್ಗೆ ಪುನರ್ ಪರಿಶೀಲನೆ.

ಅಂಗವಿಕಲರ ಜೋಪಾನ

ದೇಶದ ಜನಸಂಖ್ಯೆಯಲ್ಲಿ ಅಂಗವಿಕಲರ ಪ್ರಮಾಣ ಶೇ.5 ರಷ್ಟು. ಅವರ ಬಗ್ಗೆ ನಿರ್ಲಕ್ಷ್ಯ ಧೋರಣೆಯಿಂದಾಗಿ ಸಾಮಾಜಿಕ ಮೇಲ್‌ಸ್ತರದಲ್ಲಿ ಅವರನ್ನು ತರುವುದು ವಿಳಂಬವಾಗುತ್ತಿದೆ. ಅವರ ಕಲ್ಯಾಣ, ಪುನಶ್ಚೇತನ ಎನ್‌ಡಿಎ ಸರ್ಕಾರದ ಗುರಿ. ಸಮಾಜ ಸರ್ಕಾರ ಅವರ ಬಗ್ಗೆ ಕಾಳಜಿ ವಹಿಸುವಂತೆ ಮಾಡುವುದು.

1) ಅಂಗವಿಕಲರಿಗೆ ಶಿಕ್ಷಣದ ಹಕ್ಕಿದೆ. ಅವರಿಗೆ ಆದ ವೃತ್ತಿ ಶಿಕ್ಷಣ ನೀಡಲಾಗುವುದು.

2) ಸಾರ್ವತ್ರಿಕ ಸ್ಥಳಗಳಲ್ಲಿ, ಕಟ್ಟಡಗಳಲ್ಲಿ, ವಾಹನಗಳಲ್ಲಿ ಸಹಾಯ ಹಸ್ತ ನೀಡುವುದು.

3) ಹೆಚ್ಚಿನ ಆರ್ಥಿಕ ಸ್ವಾವಲಂಬನೆ ಕಲ್ಪಿಸುವಂತೆ ಮಾಡುವುದು.

4) ಖಾಸಗಿ ಹಾಗೂ ಸಾರ್ವತ್ರಿಕ ಸಂಸ್ಥೆ ಜೊತೆಯಾಗಿ ಎಲ್ಲಾ ಜಿಲ್ಲೆಗಳಲ್ಲೂ ವೃತ್ತಿ ಶಿಕ್ಷಣ ತರಬೇತಿ ಸಂಸ್ಥೆ ಸ್ಥಾಪಿಸುವುದು.

5) ಅಂಗವಿಕಲ ಮಕ್ಕಳನ್ನು ದತ್ತು ತೆಗೆದುಕೊಂಡರೆ ವಿಶೇಷ ಪ್ರೋತ್ಸಾಹ ನೀಡುವುದು.

6) ಅಂಗವಿಕಲರಿಗೆ ಸಹಾಯ ಹಸ್ತ ನೀಡುವ ಸ್ವಯಂ ಸೇವಕ ಸಂಸ್ಥೆಗಳನ್ನು ಪ್ರೋತ್ಸಾಹಿಸಲಾಗುವುದು.

ಅಲ್ಪ ಸಂಖ್ಯಾತರು

ಅಭಿವೃದ್ಧಿಗೆ ಆರೋಗ್ಯಕರ ಬೆಳವಣಿಗೆ

ಬಿಜೆಪಿ ಸರ್ಕಾರ ಅಲ್ಪಸಂಖ್ಯಾತರು ಎಂಬ ವಿಭಾಗವನ್ನು ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ತಿರಸ್ಕರಿಸಿ ಕೋಮುಮತವಾದಿತನದಲ್ಲಿ ಕಾಂಗ್ರೆಸ್ ಎಡ ಪಕ್ಷಗಳು ಮತ ಪೆಟ್ಟಿಗೆಯ ದೃಷ್ಟಿಯಿಂದ ನೋಡುವ ರೀತಿಯಿಂದ ಚಿಂತಿಸುವುದಿಲ್ಲ. ಈ ಅಲ್ಪಸಂಖ್ಯಾತ ಎಂಬ ವಿಭಾಗೀಯ ದೃಷ್ಟಿಯೇ ತಾರತಮ್ಯಕ್ಕೆ ಎಡೆಮಾಡಿಕೊಡುತ್ತದೆ. ಅಲ್ಪಸಂಖ್ಯಾತ ಎಂಬುದು ರಾಷ್ಟ್ರೀಯ ಮುಖ್ಯ ವಾಹಿನಿಯ ದೃಷ್ಟಿಯಲ್ಲಿ ಹೊರ ನಿಲ್ಲುತ್ತದೆ. ಬಿಜೆಪಿ ಸರ್ಕಾರ ಭಾರತೀಯ ಗುರುತು ನೀಡಲು ಚಿಂತಿಸಿದೆ. ಅವರಿಗೆ ಪ್ರತಿಯೊಬ್ಬ ಭಾರತೀಯನೊಂದಿಗೆ ಜಾತಿ ಭೇದ ಭಾವವಿಲ್ಲದೆ ರಾಷ್ಟ್ರದ ಬೆಳವಣಿಗೆ ದೃಷ್ಟಿಯಿಂದ ಚಿಂತಿಸಿದೆ. ವಿಸ್ತಾರವಾದ ರೀತಿಯಿಂದ ಬಹುಸಂಖ್ಯಾತರನ್ನು ದೇಶ ಕಟ್ಟಲು ಆಲೋಚಿಸುತ್ತಿದೆ. ಬಹುಸಂಖ್ಯಾತ ಯೋಜನೆ ನಮ್ಮ ಸಮಾಜದ ಶಕ್ತಿ ಕುಗ್ಗಿಸುವಂತೆ ಮಾಡಬಾರದು.

ಮುಸ್ಲಿಂ ಬಾಂಧವರಲ್ಲಿ ಅನೇಕರಿಗೆ ಸೌಲಭ್ಯದಿಂದ ವಂಚನೆಯಾಗಿದೆ. ಕಳೆದ ಆರು ದಶಕಗಳಿಂದ ಕಾಂಗ್ರೆಸ್ ಮತ ಪಡೆಯಲು ಅಲ್ಪಸಂಖ್ಯಾತರನ್ನು ಬಳಸಿತೇ ಹೊರತು ಬೆಳವಣಿಗೆಯ ಆರೋಗ್ಯ ದೃಷ್ಟಿಯಿಂದ ಮೇಲೆತ್ತಲೇ ಇಲ್ಲ.

ಆಧುನಿಕ ಶೈಕ್ಷಣಿಕ ಸವಲತ್ತುಗಳನ್ನು ಮುಸ್ಲಿಮರಿಗೆ ಅದರಲ್ಲೂ ಹೆಣ್ಣು ಮಕ್ಕಳಿಗೆ ಶಾಲೆಗಳಲ್ಲಿ ಖಾಸಗಿ ಸಾರ್ವತ್ರಿಕ ಸಹಭಾಗಿತ್ವದಲ್ಲಿ ನೀಡಲು ಬಯಸುತ್ತದೆ.

1) ನೂತನ ಶೈಕ್ಷಣಿಕ ಯೋಜನೆಗಳಿಗೆ ಮೂಲ ಹಾಗೂ ತಾಂತ್ರಿಕ ಶಿಕ್ಷಣವನ್ನು, ಕಡಿಮೆ ಆದಾಯ ಕುಟುಂಬಗಳಿಗೆ ಕಲ್ಪಿಸುವುದು. ಪ್ರತಿಯೊಂದು ಯೋಜನೆ ವೃತ್ತಿನಿರತರ ಸಹಾಯದೊಂದಿಗೆ ಆರು ತಿಂಗಳಲ್ಲಿ ಲಭ್ಯವಾಗುವಂತೆ ಮಾಡುವುದು.

2) ಮುಸ್ಲಿಂ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ನಗದು ಭತ್ಯೆ, ವಿದ್ಯಾರ್ಥಿಯ ಶಾಲಾ ಬರುವಿಕೆ ಹಾಗೂ ಸಾಮರ್ಥ್ಯದ ಆಧಾರದ ಮೇಲೆ ಕಾಲೇಜು ಹಾಗೂ ಹೆಚ್ಚಿನ ವಿದ್ಯಾಭ್ಯಾಸಕ್ಕೆ ತೊಡಗಿಸಿಕೊಂಡಾಗ ನಗದು ಭತ್ಯೆ ಹೆಚ್ಚಳವಾಗುವುದು. .

3) ಬಹಳ ಹಿಂದುಳಿದ ಜಿಲ್ಲೆಗಳಲ್ಲಿ ಕಡಿಮೆ ಆದಾಯದವರಿಗೆ ಕಂಪ್ಯೂಟರ್ ತರಬೇತಿ ಶಾಲೆಗಳನ್ನು ಕಲ್ಪಿಸುವುದು.

4) ಅಲ್ಪಸಂಖ್ಯಾತ ಮಂತ್ರಾಲಯ ಸ್ಥಗಿತಗೊಂಡಿದೆ. ಅದನ್ನು ಪುನಶ್ಚೇತನಗೊಳಿಸಿ ಆರ್ಥಿಕವಾಗಿ ಬೆಂಬಲಿಸಿ ಉದ್ಯೋಗ ಕಲ್ಪಿಸುವಂತೆ ಮಾಡುವುದು. ಕುಶಲ ಕೈಗಾರಿಕೆ– ಸಣ್ಣ ಪ್ರಮಾಣದ ಕೈಗಾರಿಕೆಗಳು ಸಾಂಪ್ರದಾಯಿಕ ವೃತ್ತಿಯಲ್ಲಿ ತೊಡಗಿರುವವರಿಗೆ ಸಹಾಯ ಹಸ್ತ. ಕಾಂಗ್ರೆಸ್ ಯುಪಿಎ ಸರ್ಕಾರ ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟ ನಿಗಧಿತ ಹಣವನ್ನು ಉಪಯೋಗಿಸಿಲ್ಲ. ಅದನ್ನು ಮಹಾರಾಷ್ಟ್ರದಲ್ಲಿ ಹೆಚ್ಚಾಗಿ ಕಾಣಬಹುದು. ಈ ಸಮಾಜ ಕಲ್ಯಾಣದ ಹಣವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವುದು.

5) ಯುವಕರು ನಾಳಿನ ಆಧಾರಗಳು. ಅವರನ್ನು ಹೆಚ್ಚು ಕ್ರಿಯಾಶೀಲರನ್ನಾಗಿ ಮಾಡಿ ಸಾಮಾಜಿಕ, ಆರ್ಥಿಕ, ಬೆಳವಣಿಗೆಗೆ ಸಹಾಯವಾಗುವಂತೆ ಮಾಡಬೇಕು. ಯುವಕರು ಕೇವಲ ನಗರಗಳಲ್ಲೇ ವಾಸಿಸುವುದಿಲ್ಲ. ಜಿಲ್ಲೆಗಳಲ್ಲಿ ಮರ್ಷಿರಾಬಾದ್, ಬೆಂಗಾಲ್‌ನಲ್ಲಿ, ಹೆಣ್ಣು ಮಕ್ಕಳು ಬಡತನದಿಂದ ಬೀಡಿ ಹೊಸೆದು ದಿನಕೂಲಿ ಮಾಡುತ್ತಿದ್ದಾರೆ. ಆಕರ್ಷಕ ರೀತಿಯ ಯೋಜನೆಗಳು ಅವರ ಆರ್ಥಿಕ ಗುಣಮಟ್ಟ ಸುಧಾರಿಸಲು ಸಹಾಯ ಆಗಬೇಕು. ಭಾರತದಲ್ಲೇ ಹುಟ್ಟಿ ಬೆಳೆದ ಅವರು ದೇಶಕ್ಕೆ ಬದ್ಧರಾಗಿರಬೇಕು. ದೇಶವೂ ಅವರಿಗೆ ಬದ್ಧವಾಗಿರಬೇಕು. ಮುಸ್ಲಿಮರು ಕ್ರೀಡೆ, ಸಿನಿಮಾ ಕ್ಷೇತ್ರಗಳಲ್ಲಿ ಉನ್ನತಿ ಹೊಂದಿದ್ದಾರೆ. ವ್ಯಕ್ತಿಗತವಾಗಿ ಅವರು ಪ್ರತಿಯೊಬ್ಬ ಭಾರತೀಯನೂ ಹೆಮ್ಮೆ ಪಡುವಂತಿದ್ದಾರೆ. ಅವರ ಯಶಸ್ಸು ದೇಶದ  ಗರಿಮೆಗೆ ಕಾರಣವಾಗಿದೆ.

6) ಭಯೋತ್ಪಾದನೆಗೆ ಧರ್ಮವಿಲ್ಲ. ಆದರೂ ಭಯೋತ್ಪಾದನೆಗೆ ಹೊಂದಿಕೊಂಡವರೂ ಅವರ ಧರ್ಮದಿಂದ ದೂರ ಉಳಿದಿದ್ದಾರೆ. ನಾವು ಜಾತಿ ಸಂಬಂಧಗಳನ್ನು ಬೆಸೆದು ತಪ್ಪು ತಿಳುವಳಿಕೆಯನ್ನು ದೂರ ಮಾಡಲಿದ್ದೇವೆ.

ಸದೃಢ, ಸಮೃದ್ಧ, ಆಧುನಿಕ ಭಾರತದಲ್ಲಿ ಭಯೋತ್ಪಾದನೆ ಹುಟ್ಟುಹಾಕುವವರಿಗೆ ಜಾಗವಿಲ್ಲ.

ಧರ್ಮ ಬದಲಾವಣೆ

ಬಿಜೆಪಿ ಸರ್ಕಾರ ಭಾರತದ ಹಿರಿಯ ಧರ್ಮಗಳ ಮುಖಂಡರನ್ನು ಒಟ್ಟುಗೂಡಿಸಿ ಸಾಮರಸ್ಯ ಸಾಧಿಸಲು ಚಿಂತಿಸಿದೆ. ಮತಾಂತರವೂ ಸೇರಿದಂತೆ ಎಲ್ಲಾ ವಿಚಾರಗಳಲ್ಲೂ ಸಂಭಾಷಿಸಿ ಧರ್ಮ ಬದಲಾವಣೆ ಬಗೆಯೂ ಚಿಂತಿಸಲಿದೆ. ವ್ಯಾಟಿಕನ್ ಸಿಟಿಯಲ್ಲಿ 2006ರಲ್ಲಿ ಕ್ರಿಶ್ಚಿಯನ್ ಧರ್ಮ ಗುರುಗಳ ಹಾಗೂ ಜೆನಿವಾದ ವಿಶ್ವ ಕೌನ್ಸಿಲ್ ಆಫ್ ಚರ್ಚ್‌ಸ್ ಮಾದರಿಯಲ್ಲಿ ಧರ್ಮ ಬದಲಾವಣೆ ಯೋಜಿಸಬಹುದು.

ಸರ್ವರಿಗೂ ಆರೋಗ್ಯ

ಜನರ ಆರೋಗ್ಯವೇ ದೇಶದ ಸಂಪತ್ತು

ಎಲ್ಲರಿಗೂ ಗುಣಮಟ್ಟದ ಆರೋಗ್ಯ ಅವಕಾಶ ಕಲ್ಪಿಸುವುದು ಕನಸಾಗಿಯೇ ಉಳಿದು ಬಿಟ್ಟಿದೆ. ವಿದೇಶಿಯರು ವೈದ್ಯಕೀಯ ಸೌಲಭ್ಯ ಪಡೆಯಲು ಭಾರತಕ್ಕೆ ಬರುತ್ತಿದ್ದರೂ ಭಾರತ ವೈದ್ಯಕೀಯ

ರಂಗದಲ್ಲಿ ಜಾಗತಿಕ ಮಟ್ಟದಲ್ಲಿ ವೇಗವಾಗಿ ಚಲಿಸುತ್ತಿದ್ದರೂ ನಮ್ಮವರಿಗೆ ಅರೋಗ್ಯ ಸೌಲಭ್ಯ ಕಲ್ಪಿಸಲು ಸಾಧ್ಯವಾಗುತ್ತಿಲ್ಲ.

ಮಹತ್ತರವಾದ ಯೋಜನೆಗಳನ್ನು ಬಿಜೆಪಿ ಸರ್ಕಾರ ರೂಪಿಸಿಕೊಂಡಿದೆ. ಸಾರ್ವತ್ರಿಕ, ಖಾಸಗಿ ಸಹಭಾಗಿತ್ವದಲ್ಲಿ 'ಎಲ್ಲರಿಗೂ ಆರೋಗ್ಯ' ವಿನೂತನ ವಿಮೆ ಯೋಜನೆ ರೂಪಿಸಲಿದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಸರ್ಕಾರದಿಂದ ಹಣ ಪಡೆಯಬಹುದು. ಹಣ ನೀಡದೇ ರೀತಿಯಲ್ಲಿ ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೌಲಭ್ಯ ಪಡೆಯಬಹುದು.

108 ದೂರವಾಣಿ ಸಂಖ್ಯೆ ವೈದ್ಯಕೀಯ ಕ್ಷಿಪ್ರ ಸೇವೆಗೆ ಮೀಸಲಾಗಿಸಲಾಗುವುದು. ವರ್ಷದ 12 ತಿಂಗಳು ಇದನ್ನು ಬಳಸಿಕೊಳ್ಳಬಹುದು.

ನಮ್ಮ ಮುಖ್ಯ ಗುರಿಗಳಲ್ಲಿ ಪೌಷ್ಠಿಕಾಂಶದ ಕೊರತೆಯನ್ನು ಹೋಗಲಾಡಿಸುವುದು. ಭಾರತದಾದ್ಯಂತ ಈಗಿರುವ ಯೋಜನೆಗೆ ರಾಜ್ಯಸರ್ಕಾರದ ಸಹಯೋಗದೊಂದಿಗೆ ಇದರ ಮೂಲಕ ಉತ್ತಮ ಗುಣಮಟ್ಟದ ಸೇವೆ ಕಲ್ಪಿಸುವುದು. ಹಲವಾರು ಹೊಸ ಯೋಜನೆಗಳನ್ನು ಸೇರಿಸುವುದು.

1) ಗುಣಮಟ್ಟದ ವೈದ್ಯಕೀಯ ಸೌಲಭ್ಯಕ್ಕೆ ರಾಷ್ಟ್ರೀಯ ಕಾನೂನು ಪ್ರಾಧಿಕಾರ ಸ್ಥಾಪಿಸುವುದು. ಆಗುವ ಅನಾಹುತಗಳನ್ನು ಪತ್ತೆ ಹಚ್ಚಿ ಶಿಕ್ಷಿಸುವುದು. ಖಾಸಗಿ ಸಹಭಾಗಿತ್ವಕ್ಕೆ ಸ್ವಾಗತ ಆದರೆ ಓತೋಪ್ರೇತವಾದ ಸುಲಿಗೆ ಮಾಡಲು ಸಾಧ್ಯವಿಲ್ಲ.

2) ಎನ್‌ಡಿಎ ಸರ್ಕಾರ ಎಐಎಂಎಸ್ ರೀತಿಯಲ್ಲಿ ಶಾಖೆಗಳನ್ನು ರಾಜ್ಯಗಳಲ್ಲಿ ಸ್ಥಾಪಿಸಲು ಮುಂದಾಗಿತ್ತು. ಅದನ್ನು ಯುಪಿಎ ಸರ್ಕಾರ ಅಳವಡಿಸಲಿಲ್ಲ. ಇದೇ ರೀತಿಯ ಸಂಸ್ಥೆಗಳನ್ನು ವಿಶೇಷ ವೈದ್ಯಕೀಯ ತಪಾಸಣೆಗೆ ವಿವಿಧೆಡೆ ರಚಿಸಬೇಕಾಗಿದೆ.

3) ರಾಜ್ಯದ ಆಸ್ಪತ್ರೆಗಳಲ್ಲಿ ಪ್ರಾಥಮಿಕ ಆರೋಗ್ಯ, ಮೆಟರ್ನಿಟಿ ಆಸ್ಪತ್ರೆ ಹಾಗೂ ಮಕ್ಕಳ ಆರೋಗ್ಯ ಕೇಂದ್ರಗಳಲ್ಲಿ ಭತ್ಯೆಗಳನ್ನು ಹಾಗೂ ಅಭತ್ಯೆಗಳನ್ನು ಗುಣಮಟ್ಟ ಕಾಪಾಡಲು ಜಾರಿ ಮಾಡಲಾಗುವುದು.

4) ಗುಜರಾತ್ ಮಾದರಿಯಲ್ಲಿ ಜನನಿ ಸುರಕ್ಷ ಯೋಜನೆಯಲ್ಲಿ ಭ್ರೂಣ ಹತ್ಯೆ ತಡೆದು ತಾಯಿ ಸಾವಿಗೀಡಾಗುವುದನ್ನು ಕಡಿಮೆ ಮಾಡುವುದು ಗುರಿ.

5) ಆರೋಗ್ಯ ರಕ್ಷಣೆಗೆ ರೋಗ ನಿರೋಧಕ ಚುಚ್ಚಮದ್ದು ಬಳಸುವುದು.

6) ಹೇಪಿಟೈಟಿಸ್ ಮದ್ದಿನಿಂದ ಹಿರಿಯರು ಹಾಗೂ ಕಿರಿಯರನ್ನು ರಕ್ಷಣೆ ಮಾಡುವುದು.

7) ಪರ್ಯಾಯ ಚಿಕಿತ್ಸೆಯಾದ ಆಯುರ್ವೇದ ಚಿಕಿತ್ಸಾ ಸೌಲಭ್ಯಕ್ಕೆ ದೊಡ್ಡ ಮೊತ್ತ ನೀಡಲಾಗುವುದು. ಹೋಮಿಯೋಪತಿ ಹಾಗೂ ಯುನಾನಿ ವೈದ್ಯಕೀಯಕ್ಕೂ ಸಹಾಯ ಹಸ್ತ. ಯೋಗ ತರಬೇತಿಗೆ ಮತ್ತಷ್ಟು ಸೌಲಭ್ಯ ಕಲ್ಪಿಸಲಾಗುವುದು.

8) ಶುದ್ಧ ಕುಡಿಯುವ ನೀರು ಪೂರೈಕೆಯಿಂದ ಅನೇಕ ರೋಗಗಳನ್ನು ತಡೆಗಟ್ಟಬಹುದು. ಎಲ್ಲರಿಗೂ ಶುದ್ಧ ಕುಡಿಯುವ ನೀರು ನಾಗರಿಕರ ಮೂಲಭೂತ ಹಕ್ಕು.

ಜನಸಂಖ್ಯೆ ಸ್ಥಿರತೆ

ಜನರೇ ದೇಶದ ಆಸ್ತಿ ಎಂದು ಬಿಜೆಪಿ ಭಾವಿಸುತ್ತದೆ. ಅವರಿಗೆ ಆರೋಗ್ಯ, ಶಿಕ್ಷಣ, ನೈಪುಣ್ಯತೆ, ತಂತ್ರಜ್ಞಾನ ನೀಡಬೇಕು. ಅದಕ್ಕೆ ಸಂಪನ್ಮೂಲ ಬೇಕಾಗುತ್ತದೆ. ಅದಕ್ಕೆ ಜನಸಂಖ್ಯೆ ಸ್ಥಿರತೆ ಮುಖ್ಯವಾಗುತ್ತದೆ.

1) ಜನಸಂಖ್ಯೆ ಬೆಳವಣಿಗೆಗೆ ಸ್ಥಿರತೆ ಹಾಗೂ ಅಭಿವೃದ್ಧಿ ಒಂದಕ್ಕೊಂದು ಹೊಂದಿಕೊಂಡಿರುವುದು.

2) ಬೆಳವಣಿಗೆ, ಆರೋಗ್ಯ, ಶಿಕ್ಷಣ, ಪೌಷ್ಠಿಕಾಂಶ ಜನಸಂಖ್ಯೆ ಕಾರ್ಯಕ್ರಮಗಳನ್ನು ಬಡತನ ನಿರ್ಮೂಲನೆಗೆ ಹೊಂದಿಸಬಹುದು.

3) ಬಲವಂತ ಲಿಂಗ ನೀತಿ ಬೇಡ. ಜನಸಂಖ್ಯೆ ಸ್ಥಿರತೆಗೆ ನಿಗಾ ವಹಿಸಬೇಕು.

ಒಂದೇ ಭೂಮಿ ಹಸಿರು ಭೂಮಿ

ಸರಿಯಾದ ಪರಿಸರ ಸ್ಥಾಪನೆ

ಬಿಜೆಪಿ ರಾಷ್ಟ್ರೀಯ ಬೆಳವಣಿಗೆ ಗುರಿಯನ್ನಾಗಿ ಪರಿಸರವಾದಿ ಹಸಿರು ವಾತಾವರಣ ಇಟ್ಟುಕೊಂಡಿದೆ.ಭೌಗೋಳಿಕ ಶಾಖದಿಂದ ಜನರ ರಕ್ಷಣೆ ಪರಿಸರ ಸಂರಕ್ಷಣೆ ಆಗಬೇಕು. ಸಣ್ಣ ಪ್ರಮಾಣದ ಇದ್ದಲಿನ ಸಾರ ಉತ್ಪತ್ತಿಯಾಗುವಂತೆ ಮಾಡುವುದು 21ನೇ ಶತಮಾನಕ್ಕೆ 21 ನೇ ಶತಮಾನಕ್ಕೆ ಬಹುದೊಡ್ಡ ಸವಾಲು.

ಬಿಜೆಪಿ ಸಾಮಾನ್ಯ ಹಾಗೂ ವಿಭಿನ್ನ ಜವಾಬ್ದಾರಿಯನ್ನು ವಿಶ್ವಸಂಸ್ಥೆ ಹೊರತಂದಿರುವ ರೂಪು ರೇಷೆಗಳಲ್ಲಿ ಸಿದ್ಧಪಡಿಸಲಿದೆ. ವಾತಾವರಣ ಬದಲಾವಣೆ, ಅಂತಾರಾಷ್ಟ್ರೀಯ ತಾಂತ್ರಿಕ ವರ್ಗ ಹಾಗೂ ಹಣ ಹೂಡಿಕೆ ರಿಯೋ ಕಾಲದಿಂದಲೂ ಆಗಿಲ್ಲ. ಕಡಿಮೆ ಇದ್ದಲು ಹೊರ ಹಾಕುವ ಬಹುಮುಖ್ಯ ತಂತ್ರಜ್ಞಾನಕ್ಕೆ ಬಿಜೆಪಿ ಶ್ರಮಿಸುತ್ತದೆ.

ಪರಿಸರ ಕಾಳಜಿಯನ್ನು ಇಟ್ಟುಕೊಂಡಿರುವ ಬಿಜೆಪಿ:

1) ವಾತಾವರಣ ಬದಲಿಕೆಗೆ ಸೂಕ್ತ ಸೂಚನೆಗಳನ್ನು ನೀಡಲಿದೆ.

2) ಶಕ್ತಿ ಸಂರಕ್ಷಣೆ ವಿದ್ಯುತ್ ಉಳಿತಾಯದ ದಾರಿ ಸರಿಯಾದ ಗುರಿಯೊಂದಿಗೆ ಉಪಯೋಗ ಮತ್ತು ಪುನರ್ ನವೀಕರಣ.

3) ಸ್ಥಳೀಯ ವ್ಯವಸಾಯ– ಉತ್ಪಾದನೆ ಬದಲಾವಣೆ ತಂದು ರಾಸಾಯನಿಕ ಗೊಬ್ಬರದ ಬದಲು ರೈತರಿಗೆ.

4) ಮಳೆ ನೀರಿನಿಂದ ಸಾಂಪ್ರದಾಯಿಕ ಶೈಲಿಯಲ್ಲಿ ಆಕರ್ಷಕ ಪ್ಯಾಕೇಜ್. ಹೆಚ್ಚಿನ ಖರ್ಚಿಲ್ಲದೆ ಉತ್ಪಾದನೆ ರವಾನೆಗೆ ಇದು ಸಹಕಾರಿ.

5) ಅರಣ್ಯ ಹಾಗೂ ಉದ್ಯಾನ ಕಾನೂನಿನಲ್ಲಿ ಪರಿಣಾಮಕಾರಿ ಬದಲಾವಣೆ. ಅರಣ್ಯ ನಾಶ ತಡೆಗೆ ಕಟ್ಟುನಿಟ್ಟಿನ ಕ್ರಮ.

6) ಹುಲಿ, ಸಿಂಹ ಹಾಗೂ ಕಾಡು ಬೆಕ್ಕುಗಳ ರಕ್ಷಣೆಗೆ ಖಾಯಂ ಟಾಸ್ಕ್ ಫೋರ್ಸ್ ಸ್ಥಾಪನೆ. ಆನೆಗಳು ಹಾಗೂ ಧಾಮಗಳ ಹಕ್ಕಿ ಸಂರಕ್ಷಣೆ ಸಹಾ ಆಗಲಿದೆ. ಈ ಟಾಸ್ಕ್‌ಫೋರ್ಸ್‌ಗೆ ಪೂರ್ಣ ಜವಾಬ್ದಾರಿ ನೀಡಿ ಅವರ ಗುರಿ ಸಾಧನೆಗೆ ಸಹಾಯ.

7) ಪರಿಸರ ಸ್ನೇಹಿ ಸಲಕರಣೆಗಳಿಗೆ ಬಳಸುವ ವೈಯಕ್ತಿಕ ಅಥವಾ ಸಂಘ ಸಂಸ್ಥೆಗಳಿಗೆ ವಿಶೇಷ ಭತ್ಯೆ. ಕಡಿಮೆ ಶಕ್ತಿಯ ಉಪಯೋಗ ತಾಂತ್ರಿಕತೆಯನ್ನು ನಿರಾಳವಾಗಿ ಉಪಯೋಗಿಸುವವರಿಗೆ ಸೌಲಭ್ಯ. ಇದಕ್ಕೆ ವಿಶೇಷ ಪರಿಣಿತರ ತಂಡ ರಚಿಸಲಾಗುವುದು.

8) ನಾಗರೀಕರು ಪರಿಸರ ರಕ್ಷಣೆಯಲ್ಲಿ ಭಾಗಿಯಾಗಿ ಮಾಲಿನ್ಯ ತಡೆಗಟ್ಟುವವರನ್ನು ಪ್ರೋತ್ಸಾಹಿಸಲಾಗುವುದು. ಶಾಲೆಗಳಲ್ಲಿ ಈ ಪ್ರಜ್ಞೆ ಮೂಡಿಸಲಾಗುವುದು. ಈ ಮೂಲಕ ಮಕ್ಕಳಲ್ಲಿ ಈ ಪ್ರಜ್ಞೆ ಮೂಡಿಸಲಾಗುವುದು.

9) ಎಲ್ಲಾ ನದಿಗಳ ನೈರ್ಮಲ್ಯಕ್ಕೆ ನೂತನ ಯೋಜನೆ.

10) ರಾಷ್ಟ್ರೀಯ ಯೋಜನೆಯಡಿಯಲ್ಲಿ ಪ್ರತಿ ವರ್ಷ ಒಂದು ಬಿಲಿಯನ್ ಗಿಡಗಳನ್ನು ನೆಡುವುದು.

11) ಅನೇಕ ನದಿಗಳ ಜನ್ಮ ಸ್ಥಳವಾದ ಹಿಮಾಲಯದಲ್ಲಿ ಹಿಮ ಸುತ್ತಲೂ ಕರಗುವುದನ್ನು ತಡೆಗಟ್ಟಲು ಯೋಜನೆ ಸಿದ್ಧಮಾಡುವುದು.

ಆಡಳಿತಾತ್ಮಕ ವಿಷಯ ಕೇಂದ್ರ–ರಾಜ್ಯ ಸಂಬಂಧ

ಒಳ್ಳೆಯ ಅಧಿಕಾರಕ್ಕೆ ನಾವು ಬದ್ಧ

ಬಿಜೆಪಿ ಮಂತ್ರಿಗಳ ತಂಡವನ್ನು ರಚಿಸಿ ಆಡಳಿತಾತ್ಮಕ ಸುಧಾರಣಾ ಆಯೋಗಕ್ಕೆ ಆರು ತಿಂಗಳಲ್ಲಿ ವರದಿ ಸಲ್ಲಿಸುವುದು. ಈ ವರದಿಯ ಸಾರವನ್ನು ಪ್ರಧಾನಮಂತ್ರಿ ಕಚೇರಿಯಿಂದ ಚಾಲನೆಗೊಳಿಸುವುದು. ನಮ್ಮ ಎಲ್ಲಾ ಚಟುವಟಿಕೆ ಸರ್ಕಾರದ ಎಲ್ಲ ನಿರ್ಧಾರಗಳು ಪಾರದರ್ಶಕವಾಗಿರಲು ಹಾಗೂ ಭ್ರಷ್ಟಾಚಾರವನ್ನು ಯಾವ ಹಂತದಲ್ಲಿ ಸುಳಿಯದಂತೆ ಮಾಡಲಾಗುವುದು.

ರಾಷ್ಟ್ರ–ರಾಜ್ಯ ಸಂಬಂಧಗಳನ್ನು ಚರ್ಚೆಯ ಮುಖಾಂತರ ನಿರ್ಣಯಿಸಲಾಗುವುದು. ಅತಿ ಮುಖ್ಯವಾದ ರಾಜ್ಯದ ಕೊರತೆಗಳನ್ನು ಕ್ಷಿಪ್ರವಾಗಿ ಬಗೆಹರಿಸುವುದು. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯನ್ನು ಪುನಶ್ಚೇತನಗೊಳಿಸಿ ಕಾರ್ಯೋನ್ಮುಖಗೊಳಿಸಲಾಗುವುದು.

ಪ್ರತಿಯೊಂದು ಹೆಜ್ಜೆಯಲ್ಲೂ ನಾಗರೀಕರಿಗೆ ಸೌಲಭ್ಯ ಹಾಗೂ ಅವರ ಜವಾಬ್ದಾರಿಯನ್ನು ಅಪೇಕ್ಷಿಸಲಾಗುವುದು. ಅಹಿತಕರ ಸಂದರ್ಭ ಸೃಷ್ಟಿಸುವವರಿಗೆ ಯಾವುದೇ ರಕ್ಷಣೆ ಇರುವುದಿಲ್ಲ.

ಜಮ್ಮು ಮತ್ತು ಕಾಶ್ಮೀರ

ಜಮ್ಮು ಮತ್ತು ಕಾಶ್ಮೀರ ಅಂದು, ಇಂದು, ಮುಂದು ಭಾರತದ ಭಾಗವೇ. ಅದರ ಬಗ್ಗೆ ಯಾವ ಮಾತುಕತೆ ಇಲ್ಲ. ಹಿಂದಿನಿಂದಲೂ ಪ್ರತಿಯೊಂದು ಚುನಾವಣೆ ಇದನ್ನು ತೋರ್ಪಡಿಸುತ್ತಲೇ ಇದೆ. ಜಮ್ಮು ಕಾಶ್ಮೀರ ನಿವಾಸಿಗಳು ಭಾರತೀಯ ಮುಖ್ಯವಾಹಿನಿಗೆ ಸೇರಿದವರು.

ಈ ಕೆಳಕಂಡ ಸೂತ್ರಗಳನ್ನು ಬಿಜೆಪಿ ನಿರ್ವಹಿಸಲು ಬಳಸುತ್ತದೆ.

1) ದೇಶದ ಭೂಭಾಗ ಸಮಗ್ರತೆ ಉಲ್ಲಂಘಿಸಲಾಗದು. 1994ರಲ್ಲಿ ರೂಪಿಸಲಾದ ಲೋಕಸಭೆ ಅನುಮೋದನೆಯನ್ನು ಮುಂದಿನ ದಿವಸಗಳಲ್ಲೂ ಅಳವಡಿಸಲಾಗುವುದು.

2) ಜಮ್ಮು, ಕಾಶ್ಮೀರ, ಲಡಕ್‌ನಲ್ಲಿ ಕ್ಷಿಪ್ರ ಬೆಳವಣಿಗೆಯನ್ನು ಕಾಣಲು ಹಾಕಿಕೊಂಡಿರುವ ಯೋಜನೆಗೆ ಸಹಾಯ ಜೊತೆಗೆ ಹಣಕಾಸಿನ ನೆರವು ಸಹ ರಾಜ್ಯ ಸರ್ಕಾರಕ್ಕೆ ನೀಡಲಾಗುವುದು.

3) ಪ್ರತ್ಯೇಕತವಾದಿಗಳ ದಾಳಿಗೆ ಹೆದರಿ ಕಾಶ್ಮೀರ ಪಂಡಿತರು ಕಾಶ್ಮೀರ ಕಣಿವೆ ಬಿಟ್ಟು ವಲಸೆ ಬಂದಿರುವುದರಿಂದ ಅವರಿಗೆ ಸಂಪೂರ್ಣ ಸಹಕಾರ ಅಗತ್ಯವಿದೆ. ಅವರಿಗೆ ಅದನ್ನು ಪೂರ್ತಿಯಾಗಿ ನೀಡಲಾಗುವುದು. ಅವರ ಪ್ರಾಚೀನರು ವಾಸಿಸಿದ ಸ್ಥಳಗಳಿಗೆ ಬರುವುದಾದರೆ ಅವರಿಗೆ ಜೀವನೋಪಾಯ ಒದಗಿಸಲು ಬಿಜೆಪಿ ಬದ್ಧವಾಗಿದೆ.

4) ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ನಿರಾಶ್ರಿತರ ಸಮಸ್ಯೆ ಹಾಗೂ ಬೇಡಿಕೆಗಳನ್ನು ಚರ್ಚಿಸಲು ಸಿದ್ಧವಿದೆ.

5) ಬಿಜೆಪಿ ಸಂವಿಧಾನದ 370 ಅನ್ನು ರದ್ದುಪಡಿಸಲು ಬದ್ಧವಾಗಿದೆ.

ಚಿಕ್ಕ ರಾಜ್ಯಗಳು

ಬಿಜೆಪಿ ಸಣ್ಣ ರಾಜ್ಯಗಳ ಸ್ಥಾಪನೆಗೂ ಎಂದೂ ಸಿದ್ಧ. ಎನ್‌ಡಿಎ ಅಧಿಕಾರದ ಅವಧಿಯಲ್ಲಿ ಉತ್ತರಖಂಡ, ಜಾರ್ಖಂಡ್, ಛತ್ತೀಸ್‌ಘಢ ಹುಟ್ಟಿಕೊಂಡಿದ್ದು ಸ್ವಸ್ಥ ಆಡಳಿತ ಬೆಳವಣಿಗೆ ದೃಷ್ಟಿಯಿಂದ ಬಿಜೆಪಿ ಚಿಕ್ಕ ರಾಜ್ಯಗಳ ಸ್ಥಾಪನೆಗೆ ಬದ್ಧವಾಗಿದೆ.

ತೆಲಂಗಾಣವನ್ನು ಬೇರೆ ರಾಜ್ಯವನ್ನಾಗಿ ಗುರುತಿಸಲು ಬದ್ಧವಾಗಿದೆ.

ಡಾರ್ಜಿಲಿಂಗ್ ಮತ್ತು ಡೊಮಾರ್ಸ್ ಪ್ರಾಂತ್ಯಗಳ ಗೂರ್ಖಾಗಳು, ಆದಿವಾಸಿಗಳ ದೀರ್ಘಕಾಲದ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತದೆ.

ಈಶಾನ್ಯ

ಉತ್ತಮ ಸಂಪನ್ಮೂಲ  ಬೆಳವಣಿಗೆ ಸಾಧ್ಯವಾದರೂ ಈಶಾನ್ಯ ರಾಜ್ಯಗಳು ಭ್ರಷ್ಟಾಚಾರ, ಕಳಪೆ ಆಡಳಿತ, ದಂಗೆಯಿಂದ ತತ್ತರಿಸಿದೆ. ಈ ರಾಜ್ಯಗಳಿಗೆ ಎನ್‌ಡಿಎ ಪರಿಣಾಮಕಾರಿ ಯೋಜನೆ ಹಿಂದೆ ರೂಪಿಸಿತ್ತು. ಅದೇ ರೀತಿ ಅಲ್ಲದೆ ಸಶಕ್ತವಾದ ರೂಪುರೇಷೆ ಸಿದ್ಧಪಡಿಸಿ ಆ ಭಾಗದ ಸಮಾಜ ಕಲ್ಯಾಣಕ್ಕೆ, ಉನ್ನತ ಪ್ರಗತಿಗೆ ಸಿದ್ಧವಾಗಿದೆ.

1) ಅತಿ ಶೀಘ್ರದಲ್ಲೇ ಬಾಂಗ್ಲಾ ದೇಶದಿಂದ ವಲಸೆ ಬರುವುದನ್ನು ತಡೆಗಟ್ಟಲಾಗುವುದು. ಭಾರತ–ಬಾಂಗ್ಲಾದೇಶ ಬೇಲಿಯನ್ನು ಭದ್ರಪಡಿಸುವುದು. ಅನೈತಿಕವಾಗಿ ಬಂದು ಸೇರಿಕೊಳ್ಳುವವರ ಮೇಲೆ ಕಟ್ಟುನಿಟ್ಟಿನ ನಿಗಾ ವಹಿಸಲಾಗುವುದು.

2) ದಂಗೆ ಏಳುವವರನ್ನು ದೇಶ ದ್ರೋಹಿಗಳನ್ನು ಸರಿಯಾಗಿ ವಿಚಾರಿಸಿಕೊಳ್ಳಲಾಗುವುದು. ಯುವಕರ ಕುಂದು ಕೊರತೆಗಳನ್ನು ಆಲಿಸಲಾಗುವುದು.

3) ಸಾಂಸ್ಕೃತಿಕ ದೇಸೀಯತೆಯನ್ನು ರಕ್ಷಿಸಲಾಗುವುದು.

4) ಅಸ್ಸಾಂ ರಾಜ್ಯದಲ್ಲಿನ ಪ್ರವಾಹ ಹಾಗೂ ನದಿ ನೀರಿನ ರಕ್ಷಣೆಗೆ ವಿಶೇಷ ಕಾಳಜಿ ವಹಿಸಲಾಗುವುದು.
5) ಸೂಕ್ತ ಸಂಪನ್ಮೂಲ ಗುರುತಿಸಿ ವ್ಯವಸಾಯ, ಮನೆ, ಪೌಷ್ಠಿಕಾಂಶ,ಆರೋಗ್ಯ. ಶಿಕ್ಷಣ, ಗ್ರಾಮೀಣ ಸಂಪರ್ಕ ಹಾಗೂ ನೀರಾವರಿ ಯೋಜನೆ ಸಿದ್ಧಪಡಿಸುವುದು.
6) ಇಂಜಿನಿಯರಿಂಗ್, ವೈದ್ಯಕೀಯ ವಿಭಾಗಗಳಲ್ಲಿ ನೂತನ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವುದು.
7) ಉದ್ಯೋಗವಕಾಶ ಕಾರ್ಯಯೋಜನೆ ರೀತಿಯಲ್ಲಿ ಉದ್ಯೋಗ ವಂಚಿತರಿಗೆ ಸಹಾಯ–ಪ್ರವಾಸೋದ್ಯಮ ಹಾಗೂ ನೈಪುಣ್ಯತೆ ತುಂಬಿದ ಕಾರ್ಖಾನೆಗಳಿಗೆ ದೊಡ್ಡ ಮಟ್ಟದ ಸಹಾಯ.
8) ಸಂಪರ್ಕದ ಕೊರತೆಯನ್ನು ಈಶಾನ್ಯ ಭಾಗದ ರಾಜ್ಯಗಳಲ್ಲಿ ನೀಗಿಸುವುದು.

ಬೆಟ್ಟದಲ್ಲಿರುವ ರಾಜ್ಯ ಹಾಗೂ ಮರುಭೂಮಿ ರಾಜ್ಯಗಳು

ಅವರಿಗಿರುವ ವಿಶೇಷತೆಯ ಅವಶ್ಯಕತೆಯನ್ನು ಗಮನಿಸಿ ಆ ರಾಜ್ಯಗಳ ಜೊತೆ ಸಂಪರ್ಕಿಸಿ ಮಾದರಿ ಯೋಜನೆಗಳನ್ನು ರೂಪಿಸಿ ಆಯಾ ಭಾಗದ ನಿವಾಸಿಗಳ ಆಶೋತ್ತರ ಈಡೇರಿಸುವುದು.

ಕೇಂದ್ರಾಡಳಿತ ಪ್ರದೇಶಗಳು

ವಿಶಿಷ್ಟತೆ, ವಿಭಿನ್ನತೆ ಗಮನಿಸಿ ಕೇಂದ್ರಾಡಳಿತ ರಾಜ್ಯಗಳಿಗೆ ವಿಶೇಷ ಯೋಜನೆ. ಕೇಂದ್ರಾಡಳಿತ ಪ್ರದೇಶಗಳ ಆರ್ಥಿಕ ಬೆಳವಣಿಗೆ ಕಾರ್ಯ ಯೋಜನೆ, ಪ್ರವಾಸೋದ್ಯಮಕ್ಕೆ ಪುಷ್ಠಿ. ಬುಡಕಟ್ಟು ಜನಾಂಗದ ಸಮಾಜ ಕಲ್ಯಾಣ ಅವರ ಮಕ್ಕಳಿಗೆ ಆದ್ಯತೆ ಮತ್ತು ಮೂಲಭೂತ ಸೌಕರ್ಯ. ಕರಾವಳಿ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಹಾಗೂ ಲಕ್ಷದ್ವೀಪಗಳು

ಕೇಂದ್ರಾಡಳಿತ ದ್ವೀಪಗಳನ್ನು ರಕ್ಷಿಸಿ ಒಟ್ಟಾರೆ ಬೆಳವಣಿಗೆಗೆ ಬಿಜೆಪಿ ಬದ್ಧವಾಗಿರುತ್ತದೆ.

ನ್ಯಾಯಾಂಗ ಸುಧಾರಣೆ

ನ್ಯಾಯಾಧೀಶರ ಆಯ್ಕೆಯಲ್ಲಿ ಬಾಕಿ ಉಳಿದ ಅರ್ಜಿಗಳು ಹಾಗೂ ಇನ್ನಿತರ ವಿಚಾರಗಳಲ್ಲಿ ನ್ಯಾಯಾಂಗ ಸುಧಾರಣೆಗೆ ಶ್ರಮಿಸುವುದ ಬಿಜೆಪಿ ಪಕ್ಷ ಬದ್ಧವಾಗಿದೆ.
1)ರಾಷ್ಟ್ರೀಯ ನ್ಯಾಯಾಂಗ ಆಯೋಗದೊಂದಿಗೆ ನ್ಯಾಯಾಧೀಶರ ಆಯ್ಕೆ ಪ್ರಕ್ರಿಯೆ, ನೂತನ ಯೋಜನೆಗಳು, ಶ್ರೇಷ್ಟತೆ ಆಧಾರದ ಮೇಲೆ ಗುರುತಿಸುವುದು.
2) ಎರಡು ಪಟ್ಟು ನ್ಯಾಯಾಲಯಗಳನ್ನು ಐದು ವರ್ಷದಲ್ಲಿ ಹೆಚ್ಚಿಸುವುದು.
3) ನ್ಯಾಯಾಲಯಗಳ ಆಧುನೀಕರಣಕ್ಕೆ ಮೂಲಭೂತ ಸೌಕರ್ಯ ಒದಗಿಸುವುದು.

4) ವ್ಯಾಪಾರಿ ವ್ಯಾಜ್ಯಗಳಿಗೆ ವಿಶೇಷ ಕೋರ್ಟ್‌ಗಳು, ಕ್ಷಿಪ್ರಗತಿಯಲ್ಲಿ ವ್ಯಾಜ್ಯಗಳನ್ನು ಬಗೆಹರಿಸುವಂತೆ ಮಾಡಿ ಎರಡು ಕಕ್ಷಿದಾರರಿಂದ ಶೀಘ್ರ ವಿಲೇವಾರಿ ಶುಲ್ಕ ಪಡೆಯುವುದು.
5) ಅಪರಾಧಿ, ನ್ಯಾಯ ನೀತಿಯನ್ನು ಸುಧಾರಣೆ ಮಾಡಿ ನ್ಯಾಯ ವೇಗದಲ್ಲಿ ಪರಿಣಾಮಕಾರಿಯಾಗಿ ಮಳಿಮಠ್ ಕಮಿಟಿ ಯೋಜನೆಯಂತೆ ಕಾರ್ಯ ವಹಿಸುವುದು.
6) ದೇಶದ ಎಲ್ಲಾ ನ್ಯಾಯಾಂಗ ಕಚೇರಿಗಳನ್ನು ಕಂಪ್ಯೂಟರೀಕರಣ ಮಾಡಿ ಸಾಮರ್ಥ್ಯವನ್ನು ಹೆಚ್ಚಿಸುವುದು.
7) ಶೀಘ್ರ ವಿಲೇವಾರಿ ನೀತಿಯನ್ನು ಎಲ್ಲಾ ಸ್ತರಗಳಲ್ಲಿ ಅಳವಡಿಸುವುದು.
8) ಲೋಕ ಅದಾಲತ್, ನ್ಯಾಯಮಂಡಳಿಗಳ ಮೂಲಕ ವ್ಯಾಜ್ಯಗಳನ್ನು ಬಗೆಹರಿಸಲು ಹೊಸ ಕಾರ್ಯತಂತ್ರ ರೂಪಿಸುವುದು.
9) ನ್ಯಾಯಾಂಗ ನೀತಿ ಸುಧಾರಣೆಗೆ ಕಮಿಟಿ ಸ್ಥಾಪನೆ, ಇದರ ಉದ್ದೇಶ ಮುಕ್ಕಾಲು ಭಾಗದ ವ್ಯಾಜ್ಯಗಳನ್ನು 12 ತಿಂಗಳಲ್ಲಿ ಬಗೆಹರಿಸುವಂತೆ ಮಾಡುವುದು.
10) ಸರ್ಕಾರ ವ್ಯಾಜ್ಯಗಳಲ್ಲಿ ಅರ್ಧದಷ್ಟು ಮುಂದಿನ ಮೂರು ವರ್ಷಗಳಲ್ಲಿ ಇತ್ಯರ್ಥ ಮಾಡುವುದು.

ಚುನಾವಣೆ ಸುಧಾರಣೆ

ಬಿಜೆಪಿ ಇತರ ಪಕ್ಷಗಳೊಂದಿಗೆ ಚರ್ಚಿಸಿ ವಿಧಾನಸಭೆ, ಲೋಕಸಭೆ ಚುನಾವಣೆ ಒಟ್ಟಿಗೆ ನಡೆಯುವಂತೆ ಚಿಂತಿಸುವುದು. ಇದು ಸರ್ಕಾರ ರಚನೆಯ ದೃಢತೆಗೆ ಸಹಾಯವಾಗುವುದೇ ಅಲ್ಲದೇ ಚುನಾವಣಾ ವೆಚ್ಚವನ್ನು ಸರ್ಕಾರಕ್ಕೆ ಕಡಿಮೆ ಮಾಡುವುದಾಗಿದೆ.

ಪಂಚಾಯತ್ ರಾಜ್ ಸಂಸ್ಥೆಗಳು

ಕನಿಷ್ಠ ಮಟ್ಟದಲ್ಲಿ ಸ್ಥಳೀಯ ಆಡಳಿತ ಶಕ್ತಿ ಹೊಂದುವಂತೆ ಮಾಡಲು ಬಿಜೆಪಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಭಿವೃದ್ಧಿಪಡಿಸಲಿದೆ.
1) ಪರಿಣಾಮಕಾರಿ ಆಡಳಿತ ಪಂಚಾಯತ್ ರಾಜ್ ಶಕ್ತಿ ಸಾಮರ್ಥ್ಯ ಹಾಗೂ ನಗರ, ಪಟ್ಟಣದ ಸ್ಥಳೀಯ ಸಂಸ್ಥೆಗಳು ಹಣ, ಕಾರ್ಯಕ್ರಮಗಳು ಹಾಗೂ ಕಾರ್ಯ ಯೋಜನೆಗಳು ನಡೆಸುವಂತೆ ಬೆಂಗಾವಲಾಗಿರುವುದು. ಇದರಿಂದ ಇನ್ನಷ್ಟು ಅಧಿಕಾರ ಬದಲಾವಣೆ ಹೊರಬೀಳುವುದು.
2) ಗ್ರಾಮಸಭಾ ಪುಷ್ಠೀಕರಿಸಿ ಸಂಪೂರ್ಣ ನಿರ್ಧಾರ ತೆಗೆದುಕೊಳ್ಳುವಂತೆ ಬೆಳವಣಿಗೆ ತರುವುದು. ಹಣದ ಖರ್ಚನ್ನು ನಿಗಾ ವಹಿಸಿ ಅದರಿಂದ ಹೊರ ಬರುವ ಪ್ರಯೋಜನ ಲೆಕ್ಕ ಹಾಕುವುದರಿಂದ ಚುನಾಯಿತ ವ್ಯಕ್ತಿ ಹಾಗೂ ಅಧಿಕಾರಿಯ ಸಾಮರ್ಥ್ಯ ತಿಳಿಯುವುದು.

ಸಂಸ್ಕೃತಿ ಪರಂಪರೆಯ ಸಂರಕ್ಷಣೆ

ರಾಮ್ ಸೇತು:

ರಾಮ್ ಸೇತು ನಮ್ಮ ರಾಷ್ಟ್ರೀಯ ಪರಂಪರೆ. ಕೋಟ್ಯಾಂತರ ಜನರು ಅದನ್ನು ಭೇಟಿ ಮಾಡಲು ಇಚ್ಛಿಸಿದ್ದಾರೆ. ಅದನ್ನೊಂದು ಸಾಂಸ್ಕೃತಿಕ ಕೇಂದ್ರವನ್ನಾಗಿ ಪ್ರವಾಸೋದ್ಯಮ ತಾಣವಾಗಿ ಮಾಡುವುದು. ಕೋಟ್ಯಾಂತರ ಜನರಿಗೆ ಅದು ಧಾರ್ಮಿಕ ಕ್ಷೇತ್ರ. ರಾಮ್ ಸೇತು ಸಂರಕ್ಷಿಸುವುದರಿಂದ ವಿಶೇಷವಾದ ದಾತುವನ್ನು ಕಾಪಾಡಿದ ಹಾಗೆ ಅದು ನಮ್ಮ ನಾಳಿನ ಶಕ್ತಿಯೂ ಸಹ. ಭಾರತದ ಶಕ್ತಿಯು ದಾತುವಿನ ತಂತ್ರಜ್ಞಾನ ರಕ್ಷಿಸಿದ ಹಾಗೆ ಅದರಿಂದ ಬದಲಿ ಸೇತು ಸಮುದ್ರಂ ಚಾನಲ್ ಯೋಜನೆಯನ್ನು ಬಿಜೆಪಿ ಎದುರು ನೋಡುತ್ತದೆ.

ರಾಮ ದೇವಸ್ಥಾನ

ಭಾರತೀಯರಿಗೆ ಹಾಗೂ ಅನಿವಾಸಿ ಭಾರತೀಯರಿಗೆ ರಾಮನ ಜನ್ಮಸ್ಥಳ ಅಯೋಧ್ಯೆಯಲ್ಲಿ ಭರ್ಜರಿಯಾದ ದೇವಾಲಯ ಸ್ಥಾಪಿಸುವ ಇಚ್ಛೆ ಇದೆ. ಬಿಜೆಪಿ ಈ ನಿಟ್ಟಿನಲ್ಲಿ ನ್ಯಾಯಾಂಗವನ್ನು ಗಮನದಲ್ಲಿಟ್ಟು ಮಾತುಕತೆಗೆ ಯೋಚಿಸುತ್ತಿದೆ. ಎಲ್ಲಾ ಸಾಧ್ಯತೆಗಳನ್ನು ಈ ವಿಚಾರದಲ್ಲಿ ಪರಿಶೀಲಿಸಲಿದೆ. ರಾಮನ ಜನ್ಮಭೂಮಿಯಲ್ಲಿ ದೇವಸ್ಥಾನ ನಿರ್ಮಿಸಲು ಬದ್ಧವಾಗಿದೆ.

ಗಂಗಾ:

ಭಾರತೀಯರು ಗಂಗಾ ನದಿಗೊಂದು ವಿಶೇಷ ಸ್ಥಾನ ನೀಡಿದ್ದಾರೆ. ಆದರೆ ಅಂತಹ ಗಂಗಾ ನದಿಯನ್ನು ಸ್ವತಂತ್ರ ನಂತರ ತಿರಸ್ಕಾರ ಮನೋಭಾವದಿಂದ ನೋಡುತ್ತಿರುವುದೇ ಆಶ್ಚರ್ಯ. ಗಂಗಾನದಿ ಮಾಲಿನ್ಯತೆ ಕಾಪಾಡಲು ಆಗದೇ ಬತ್ತಿ ಹೋಗುವ ಸ್ಥಿತಿಗೆ ಆರು ದಶಕಗಳಲ್ಲಿ ಏನೂ ಮಾಡಲಿಕ್ಕಾಗಲಿಲ್ಲ. ಬಿಜೆಪಿ ಅದರ ನೈರ್ಮಲ್ಯ ಕಾಪಾಡುವುದೇ ಅಲ್ಲದೇ ಗಂಗಾ ಸರಾಗವಾಗಿ ಅಡೆ ತಡೆ ಇಲ್ಲದೇ ಹರಿದು ಬರಲು ಶ್ರಮಿಸುತ್ತದೆ. ಅತಿ ಮುಖ್ಯ ನೋಟ ಬೀರಿ ತಾಂತ್ರಿಕ ಹಾಗೂ ಹಣ ಸಹಾಯ ಈ ನಿಟ್ಟಿನಲ್ಲಿ ಆದ್ಯತೆ ಮೇರೆಗೆ ಒದಗಿಸುವುದು.

ಇದೇ ಅಲ್ಲದೇ ಬೃಹತ್ತಾದ ನದಿ ನೈರ್ಮಲ್ಯ ಯೋಜನೆ ಸಹಾ ಹಮ್ಮಿಕೊಳ್ಳಲಾಗಿದೆ. ಇದಕ್ಕೆ ಸ್ವಯಂಸೇವಾ ಸಂಘಗಳ ನೆರವು ಕೋರಲಾಗುವುದು.

ಗೋವು ಹಾಗೂ ಅದರ ಸಂತತಿ:

ಇತ್ತೀಚಿನ ಸುಪ್ರೀಂಕೋರ್ಟ್ ಆದೇಶದ ಅನ್ವಯವಾಗಿ ಹಾಗೂ ಸಂವಿಧಾನದ ನಿರ್ದೇಶಕ ತತ್ವದ ಅನ್ವಯ ಅವಶ್ಯಕವಾದ ನ್ಯಾಯಾಂಗ ಪರಿವಿಡಿಯನ್ನು ಸ್ಥಾಪಿಸಿ ಗೋವು ಹಾಗೂ ಅದರ ಸಂತತಿ ಸುರಕ್ಷಿಸಲಾಗುವುದು.

ಗೋವು ಹಾಗೂ ಅದರ ಸಂತತಿ ಪ್ರಯೋಜನ ಗಮನದಲ್ಲಿಟ್ಟು ವ್ಯವಸಾಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ರಾಷ್ಟ್ರದಲ್ಲಿ ಪಶುಸಂಗೋಪನಾ ಅವಶ್ಯಕವಾಗಿ ಸದೃಢಪಡಿಸುವುದು. ರಾಷ್ಟ್ರೀಯ ಜಾನುವಾರು ಅಭಿವೃದ್ಧಿ ಸಮಿತಿ ರಚಿಸುವುದು.

ಆಶ್ರಮ ಹಾಗೂ ದೇವಸ್ಥಾನ:

ಬಿಜೆಪಿ ಮಠ ಮಂದಿರಗಳಿಗೆ ಸ್ವಾಯತ್ತ ಅಧಿಕಾರ ನೀಡುತ್ತದೆ. ಧಾರ್ಮಿಕ ಸಂಸ್ಥೆಗಳು ಸಾಂಸ್ಕೃತಿಕ ಜೀವನ ಹಾಗೂ ಭಾರತದ ಪರಂಪರೆ ಸಮಾಜದ ಒಂದು ಅಂಗ. ಸಮಾಜದಲ್ಲಿ ಮಠ ಮಂದಿರ ಸ್ಥಾಪಿಸಲು ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆ ಹಾಗೂ ಅಪಾರ ಸ್ವತ್ತು ಸೇವೆಗೆ ನೀಡಲಾಗಿದೆ. ಅಂತಹ ಸಂಸ್ಥೆಗಳ ಅಧಿಕಾರ ನಡೆಸುವಿಕೆ ಸ್ವತಂತ್ರವನ್ನು ನೀಡಿ ಭಕ್ತಾಧಿಗಳನ್ನು ಒಳಗೊಂಡ ಆಡಳಿತ ಮಂಡಳಿ ಸ್ಥಾಪಿಸಲಾಗುವುದು.

ಧಾರ್ಮಿಕ ಚಟುವಟಿಕೆಗಳನ್ನು ದೇಣಿಗೆ ಎಂದು ಪರಿಗಣಿಸಿ ತೆರಿಗೆ ಭತ್ಯೆ ನೀಡುವುದು. ಒಂದು ವಿಶೇಷ ತಂಡ ರಚಿಸಿ ಧಾರ್ಮಿಕ ಸಂಸ್ಥೆಗಳು ಹಾಗೂ ಸರ್ಕಾರಿ ಅಧಿಕಾರಿಯೊಂದಿಗೆ ಚರ್ಚಿಸುವುದು.

ಧಾರ್ಮಿಕ ಕ್ಷೇತ್ರಗಳಿಗೆ ರಾಷ್ಟ್ರೀಯ ಆಯೋಗ ರಚಿಸಿ ಅಲ್ಲಿ ಸೌಂದರ್ಯ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸುವಂತೆ ಮಾಡುವುದು.

ವಕ್ಫ್ ಸ್ವತ್ತುಗಳು:

ಬಿಜೆಪಿ ಜಂಟಿ ಲೋಕಸಭಾ ಸಮಿತಿ ಶ್ರೀ ಕೆ.ರೆಹಮಾನ್ ಖಾನ್ ಡೆಪ್ಯೂಟಿ ಚೇರ್ಮನ್ ರಾಜ್ಯಸಭೆ ನೀಡಿರುವ ವರದಿಯನ್ನು ಪರಿಶೀಲಿಸಿ ಮುಸ್ಲಿಂ ಧಾರ್ಮಿಕ ಮುಖಂಡರೊಂದಿಗೆ ಚರ್ಚಿಸಿ ವಕ್ಫ್ ಸ್ವತ್ತುಗಳನ್ನು ಅನುಮತಿಯಿಲ್ಲದೇ ಉಪಯೋಗಿಸುತ್ತಿರುವುದಕ್ಕೆ ಪರಿಹಾರ ನೀಡಲಿದೆ.

ಪಾರಂಪರಿಕ ಸ್ಥಳ:

ಎಎಸ್ಐ ಅವಶ್ಯಕ ಸಂಪನ್ಮೂಲ ಕಲ್ಪಿಸಿ ಭಾರತೀಯ ಪಾರಂಪರಿಕ ಸ್ಥಳಗಳನ್ನು ನಡೆಸುವಂತೆ ಮಾಡಲಾಗುವುದು. ಅಂತಹ ಸ್ಥಳಗಳು ವಿಧ್ವಂಸಕರ ಶಕ್ತಿಯಿಂದ ಪಾರು ಮಾಡುವುದು.

ಭಾಷೆ:

ಭಾರತೀಯ ಭಾಷೆಗಳ ಭಂಡಾರ ಅದು ಸಾಹಿತ್ಯಕ, ಪ್ರಾಚೀನತೆ, ಸಂಸ್ಕೃತಿ ಕಲೆ, ಜ್ಞಾನದ ಸಾಧನೆ. ಹಲವಾರು ಭಾಷೆಗಳಿಂದ ನಮ್ಮ ಪರಂಪರೆಯನ್ನು ತಿಳಿಯುತ್ತೇವೆ. ಸಂಸ್ಕೃತ ಹಾಗೂ ತಮಿಳು ಈ ನಿಟ್ಟಿನಲ್ಲಿ ದೊಡ್ಡ ಮಟ್ಟದ ಸಾಧನೆ ಮಾಡಿದೆ. ಬಿಜೆಪಿ ಭಾರತೀಯ ಭಾಷೆಗಳನ್ನು ಪ್ರೋತ್ಸಾಹಿಸಲು ಅವಶ್ಯಕ ಸಂಪನ್ಮೂಲ ಕಲ್ಪಿಸಿ ಅದರ ಬೆಳವಣಿಗೆಗೆ ಸಂಕಲ್ಪ ಮಾಡಿದೆ. ಅದರಲ್ಲಿ ಉರ್ದು ಭಾಷೆಯೂ ಸೇರಿದೆ. ಇದರಿಂದ ಸಮಾಜದ ಜ್ಞಾನ ಸಂಪತ್ತು ಹೆಚ್ಚುವುದು.

ಭಾರತೀಯ ಜನತಾ ಪಾರ್ಟಿ
11, ಅಶೋಕರಸ್ತೆ, ನವದೆಹಲಿ–110001.